
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

19 ಏಪ್ರಿಲ್ 2017 ಪುಟ 20 ರೂ. 15/-



ಕೊಡಗು
ಪರಿಸರ ಸೂಕ್ಷ್ಮ ಪ್ರದೇಶ ಎಂಬ ಗುಮ್ಮ



ಮಾತೆ ಮಹಾದೇವಿಗೆ ವಿಷಪ್ರಾಶನ?





ಕುಮಟಾ
ಹಿಂದೂತ್ವ ಹರಾಮಿಗಳ ದಾದಾಗಿರಿ

ಮೈಸೂರು
ಉಪಚುನಾವಣೆಗಳ ಕ್ಯಾಸ್ಟ್ ಪೊಲಿಟಿಕ್ಸ್









ಮಂಡ್ಯ
ಗಂಡನ ಕೊಲೆಗೆ ಸುಫಾರಿ ಕೊಟ್ಟ ಟೀಚರಮ್ಮ


ದಾವಣಗೆರೆ
ನಕಲಿ ಶಾಮನ ವಕೀಲ ಲೀಲೆ



ಎಚ್.ಎಲ್.ಕೇಶವಮೂರ್ತಿಗೆ ನಮನ



ಇನ್ನು ಮುಂದೆ ಅವರ ನೆನಪು ಪ್ರತೀ ದಿನ ಕಾಡುತ್ತ



'ಲಂಕೇಶ್' ಓದುಗರಿಗೆ ಪ್ರೊ.ಎಚ್.ಎಲ್. ಕೇಶವಮೂರ್ತಿಯವರ ಪರಿಚಯವಿದೆ. ಆದರೆ ಅವರ ಲಘುಹಾಸ್ಯದ ವಿಡಂಬನಾ ಬರಹಗಳಿಂದಷ್ಟೇ ಎಚ್ಚೆಲ್ಕೆಯವರನ್ನು ಬಲ್ಲವರಿಗೆ, ಕಳೆದ ಐದು ದಶಕಗಳಲ್ಲಿ ಮಂಡ್ಯ ಜಿಲ್ಲೆಯ ಮತ್ತು ಕರ್ನಾಟಕದ ಸಾಮಾಜಿಕ ಬದುಕಿನಲ್ಲಿ ಅವರು ವಹಿಸಿದ ಪಾತ್ರದ ಸಂಪೂರ್ಣ ಪರಿಚಯ ಆಗಿರುವುದಿಲ್ಲ. ಹಾಗಾಗಿ ನಾನು ಬಲ್ಲ ಹಾಗೆ ಅವರನ್ನು ಪತ್ರಿಕೆಯ ಓದುಗರ ಮುಂದಿಡುವುದು ಕರ್ತವ್ಯವೆಂದು ಭಾವಿಸಿದ್ದೇನೆ. ಅಷ್ಟು ಮಾತ್ರವಲ್ಲದೇ, ಅವರಿಲ್ಲದೇ ತಕ್ಷಣದಲ್ಲಿ ನಿರ್ಮಾಣವಾಗಿರುವ ಶೂನ್ಯದ ಸ್ಥಿತಿ ನಿಧಾನಕ್ಕೆ ಕರಗಬಹುದು. ಆದರೆ, ದೇಶ ಹಾಗೂ ನಮ್ಮ ನಾಡು ಎದುರಿಸುತ್ತಿರುವ ಸಮಸ್ಯೆಗಳನ್ನು ಎದುರುಗೊಳ್ಳುವಾಗ ಮಂಡ್ಯ ಜಿಲ್ಲೆಯಲ್ಲಿ ಅವರ ಗೈರುಹಾಜರಿ ಇನ್ನೂ ಸಾಕಷ್ಟು ಕಾಲ ಕಾಡುತ್ತದೆ. ರಾಮದಾಸರ ನಂತರ ಮೈಸೂರು ಸೈಲೆಂಟ್ ಆಯಿತು ಎಂದು ಹೇಳುವ ಹಾಗೆ ಎಚ್ಚೆಲ್ಕೆ ಇಲ್ಲದೇ ಮಂಡ್ಯ ಸೈಲೆಂಟ್ ಆಯಿತು ಎನಿಸದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯೂ ನಮ್ಮ ಮೇಲಿದೆ. ಅವರು ನಮಗೆಷ್ಟು ಮುಖ್ಯರಾಗಿದ್ದರು ಎಂಬುದು ಈ ಲೇಖನ ಓದಿದ ಮೇಲೆ ನಿಮಗೆ ಗೊತ್ತಾಗುತ್ತದೆ.


ಲಂಕೇಶರ ಪತ್ರಿಕೆಯನ್ನು ಓದಿಕೊಂಡೇ ಸಮಾಜದ ವಾಸ್ತವಗಳಿಗೆ ತೆರೆದುಕೊಂಡಿದ್ದ ನನಗೆ, ಎಚ್ಚೆಲ್ಕೆಯವರ ಅಣಕ ಬರಹಗಳಷ್ಟೇ ಗೊತ್ತಿತ್ತು. ಅದರಾಚೆಗೆ ಆಗಾಗ ಪ್ರಗತಿರಂಗದ ಪ್ರಸ್ತಾಪ ಬಂದಾಗಲೆಲ್ಲಾ ಎಚ್ಚೆಲ್ಕೆಯವರ ಹೆಸರೂ ಪ್ರಸ್ತಾಪವಾಗುತ್ತಿತ್ತು. ನಾವು ಮಂಡ್ಯದಲ್ಲಿ ಬಿಎಂಐಸಿ ವಿರೋಧಿ ಒಕ್ಕೂಟದ ಕೆಲಸ ಆರಂಭಿಸಿದಾಗ, ಅದರಲ್ಲಿ ಅವರು ಭಾಗಿಯಾಗಿರಲಿಲ್ಲ. ಅವರ ಜೀವನದಲ್ಲಿ ಆಗಷ್ಟೇ ಒಂದು ದುರಂತ ನಡೆದುಹೋಗಿತ್ತು. 'ಮಗನ ಸಾವಿನ ನೋವಿನಲ್ಲಿದ್ದಾರೆ, ಹೊರಗಡೆ ಹೆಚ್ಚು ಬರುತ್ತಿಲ್ಲ' ಎಂದು ಮಂಡ್ಯದ ಗೆಳೆಯರು ಹೇಳಿದ್ದರಿಂದ ನಾವೂ ಹೆಚ್ಚು ಒತ್ತಾಯ ಹಾಕಲಿಲ್ಲ. ಅಲ್ಲಿಂದ ಒಂದೆರಡೇ ವರ್ಷಗಳಲ್ಲಿ ಮಂಡ್ಯದ ಸ್ಲಂ ಜನರ ಬದುಕಿನ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಆರಂಭವಾಯಿತು. ಇದು ಬಿಎಂಐಸಿ ಥರದ ದೊಡ್ಡ ಇಶ್ಯೂವಿನ ಸುತ್ತ ದೊಡ್ಡ ಸಂಖ್ಯೆಯ ಸಂಘಟನೆಗಳು ಮತ್ತು ಹಿರಿಯರೆಲ್ಲಾ ಸೇರಿ ಮಾಡಿದ ಹೋರಾಟವಾಗಿರಲಿಲ್ಲ. 'ಕೆಲವು ಹುಡುಗರು' ಸೇರಿಕೊಂಡು, ಮಂಡ್ಯದ ಅತ್ಯಂತ ದನಿಹೀನ ಜನರ ಪರವಾಗಿ ಶುರು ಹಚ್ಚಿಕೊಂಡ ಚಟುವಟಿಕೆ ಅದಾಗಿತ್ತು.

ಅದನ್ನು ಶುರು ಮಾಡಿದ ಸ್ವಲ್ಪವೇ ಸಮಯದಲ್ಲಿ ಪ್ರತಿದಾಳಿ ಶುರುವಾಯಿತು. ನಾವು ಎದುರಿಸಬೇಕಾಗಿ ಬಂದದ್ದು ಅಂದು ಮಂಡ್ಯದ ಅತ್ಯಂತ ಬಲಾಢ್ಯ ಕುಟುಂಬದ ವರನ್ನು. ಸ್ಥಳೀಯ ಶಾಸಕರೂ ಅವರೇ. ಹೋರಾಟಕ್ಕೆ ಎಚ್ಚೆಲ್ಕೆಯವರನ್ನು ನಾವೇನೂ ಒತ್ತಾಯ ಹಾಕಿ ಕರೆದು ಕೊಂಡು ಬಂದಿರಲಿಲ್ಲ. ಎಲ್ಲರಿಗೂ ತಿಳಿಸಿದಂತೆ, ಅವರಲ್ಲೂ ಮನವಿ ಮಾಡಿಕೊಂಡಿದ್ದೆವು ಅಷ್ಟೇ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ. ಆ ಕಡೆ ಬಲಾಢ್ಯ ಕುಟುಂಬದ ಪ್ರತಿನಿಧಿಗಳು ಶಾಸಕರ ನೇತೃತ್ವದಲ್ಲಿ ಕೂತಿದ್ದರು. ಅವರೊಂದಿಗೆ 'ರೌಡಿ' ಪಟ್ಟಿಯಲ್ಲಿದ್ದ ಒಬ್ಬಿಬ್ಬರು ಮತ್ತು ಪ್ರಬಲ ಕುಟುಂಬಗಳ ಮುಖ್ಯಸ್ಥರು. ಈ ಕಡೆ ಕೆಲವು ಹುಡುಗರು, ಸ್ಲಂ ಜನರು ಮತ್ತು ಎಚ್ಚೆಲ್ಕೆ. ಸಭೆ ಹೇಗೆ ನಡೆಯುತ್ತದೆ ಎಂಬ ಬಗ್ಗೆ ನಮಗೆಲ್ಲಾ ಆತಂಕವಿತ್ತು. ಸಭೆ ಶುರುವಾಗುವ ಮುಂಚೆಯೇ ಎಚ್ಚೆಲ್ಕೆಯವರು ಎದ್ದು ನಿಂತು ಒಂದು ಮಾತು ಹೇಳಿದರು. "ಈ ಪ್ರಕರಣದಲ್ಲಿ ಶಾಸಕರೂ ಸಹ ಒಂದು ಪಾರ್ಟಿ. ಹಾಗಾಗಿ ಅವರು ಸಭೆಯಲ್ಲಿ ಕೂರಬಾರದು. ಇದರಲ್ಲಿ ಅವರು ನಮ್ಮ ಮಟ್ಟಿಗೆ ಜನಪ್ರತಿನಿಧಿಯಲ್ಲ" ಇಡೀ ಸಭೆಯ ಬ್ಯಾಲೆನ್ಸೇ ಅಲ್ಲಾಡಿಹೋಯಿತು. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ. ರೌಡಿ ಪಟ್ಟಿಯಲ್ಲಿದ್ದ ಒಬ್ಬ ತೋಳೇರಿಸಿ ಕೂಗಾಡಿದ. ಅಲ್ಲೇ ಹೊಡೆದುಬಿಡಬಹುದು ಎಂಬ ರೀತಿಯಲ್ಲಿ ಅಬ್ಬರಿಸಿದ. ಎಚ್ಚೆಲ್ಕೆಯವರು ಕಿಂಚಿತ್ತೂ ವಿಚಲಿತರಾಗದೇ, ಕುರ್ಚಿಯಲ್ಲಿ ಆರಾಮಾಗಿ ಕೂತಿದ್ದರು!

ಈ ಹೋರಾಟದ ನಂತರದ ದಿನಗಳಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಬ್ಯಾಲೆನ್ಸೇ ಅಲ್ಲಾಡಿಹೋಯಿತು. ಅದಕ್ಕೆ ಎಚ್ಚೆಲ್ಕೆಯವರೊಬ್ಬರೇ ಕಾರಣರಾಗಿರಲಿಲ್ಲ, ಕಾಲ ಕೂಡಿ ಬಂದಿತ್ತು ಅಷ್ಟೇ. ಆದರೆ, ಯಾವ ಭಯ ಅಥವಾ ಹಿಂಜರಿಕೆಯಿಲ್ಲದೇ ಎಚ್ಚೆಲ್ಕೆಯವರು ಹೋರಾಟದ ಜೊತೆಗೆ (ಅವರ ಜೊತೆಗೆ ಡಾ.ಸಿ.ಬಂದೀಗೌಡರು ಮತ್ತು ಇತರರು) ನಿಲ್ಲದೇ ಇದ್ದಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ.

ಅಂತಹ ಇನ್ನೂ ಎಷ್ಟೋ ಪ್ರಕರಣಗಳು ನಡೆದುಹೋಗಿವೆ. ಒಂದು ಫೋನ್ ಮಾಡಿ, 'ಈ ಥರದ್ದು ನಮ್ಮ ಜಿಲ್ಲೆಯಲ್ಲಿ ನಡೆದಿದೆ. ನಾವು ಸುಮ್ಮನಿರಬಾರದು' ಎಂದು ಹೇಳಿದರೆಂದರೆ ಒಂದು ಹೋರಾಟ/ಕಾರ್ಯಕ್ರಮ ನಿಗದಿಯಾಯಿತೆಂದೇ ಅರ್ಥ. ಇಡೀ ರಾಜ್ಯದಲ್ಲಿ ಆಪರೇಷನ್ ಕಮಲ ನಡೆದು ಶಾಸಕರು ಹರಾಜಾಗುತ್ತಿದ್ದ ಸಂದರ್ಭದಲ್ಲಿ, ಮಂಡ್ಯದ ನಗರಸಭೆಯಲ್ಲೂ ಆಪರೇಷನ್ ಕಮಲ ನಡೆಯಿತು. ಬೇರೆ ಬೇರೆ ಕಡೆ ಎಷ್ಟು ಪ್ರತಿರೋಧ ಎದುರಾಯಿತೋ ಗೊತ್ತಿಲ್ಲ. ಎಚ್ಚೆಲ್ಕೆಯವರು ಒಂದು ಪ್ರತಿಭಟನೆ ಮಾಡಿ ಸುಮ್ಮನಿರಲು ಒಪ್ಪಲಿಲ್ಲ. ಅದೇ ನಗರಸಭೆಯ ಮುಂದೆಯೇ ಲಾರಿಗೆ ಮೈಕು, ಬ್ಯಾನರ್ ಕಟ್ಟಿ ಇಡೀ ಮಂಡ್ಯವನ್ನು ಸುತ್ತಿ ಪ್ರಚಾರ ಮಾಡಿದೆವು. 'ಪ್ರಜಾತಾಂತ್ರಿಕ ಸುಧಾರಣೆಗಾಗಿ ಸಂಘಟನೆ (ಎಡಿಆರ್)'ಯ ತ್ರಿಲೋಚನ್ ಶಾಸ್ತ್ರಿಯವರನ್ನು ಕರೆಸಲಾಯಿತು. ಇಂತಹವು ನಡೆಯಬಾರದೆಂದರೆ, ಯಾವ ರೀತಿಯ ರಾಚನಿಕ ಬದಲಾವಣೆಗಳು ಬರಬೇಕಾಗುತ್ತದೆ ಎಂಬ ಕುರಿತು ವಿಚಾರಸಂಕಿರಣ ನಡೆಯಿತು. ಪತ್ರಿಕಾಗೋಷ್ಠಿಗಳು ನಡೆದವು. ಇದರ ಪೆಟ್ಟು ಹೇಗಿತ್ತೆಂದರೆ, ಆಪರೇಷನ್ ಕಮಲದ ಏಜೆಂಟರಾಗಿದ್ದವರು ಪ್ರತಿ ಪತ್ರಿಕಾಗೋಷ್ಠಿ ನಡೆಸಿ ಉತ್ತರ ನೀಡಬೇಕಾಯಿತು. ಅವಿವೇಕಿಯೊಬ್ಬ ಅದರಲ್ಲಿ ಎಚ್ಚೆಲ್ಕೆಯವರನ್ನು ವ್ಯಕ್ತಿಗತವಾಗಿ ನಿಂದಿಸಲು ಶುರು ಮಾಡಿದ್ದಕ್ಕೆ, ಪತ್ರಿಕಾಗೋಷ್ಠಿಯಲ್ಲಿ ಸೇರಿದ್ದ ಅಷ್ಟೂ ಜನ ಪತ್ರಕರ್ತರು ಆತನಿಗೆ ಛೀಮಾರಿ ಹಾಕಿದರು!

ಅವರು ದನಿ ಕಳೆದುಕೊಂಡು ಮಾತಾಡಲು ಕಷ್ಟ ಪಡುತ್ತಿದ್ದ ದಿನಗಳಲ್ಲಿ ಒಮ್ಮೆ ಫೋನ್ ಮಾಡಿದರು. ಅನಾರೋಗ್ಯದ ಕಾರಣಕ್ಕೆ, ಮನೆಗೆ ಒಮ್ಮೆ ಬಂದು



ರಿಪೋರ್ಟ್ ನೋಡಿ ಹೋಗಲು ಕರೆಯುತ್ತಾರೆ ಎಂದುಕೊಂಡರೆ ಅವರು ಹೇಳಿದ್ದೇ ಬೇರೆ. 'ಕಳೆದ 10 ದಿನಗಳಲ್ಲಿ ಜಿಲ್ಲೆಯಲ್ಲಿ 4 ರಾಜಕೀಯ ಕೊಲೆಗಳಾಗಿವೆ. ನಾವು ಸುಮ್ಮನಿರಬಾರದು. ಏನಾದರೂ ಮಾಡಬೇಕು' ಎಂದರು. 'ಹೌದು ಸಾರ್, ನಾನೂ ಗಮನಿಸಿದೆ. ರಾಜಕೀಯ ಪಕ್ಷಗಳ ನಡುವೆ ಜಗಳದ ಕಾರಣಕ್ಕೆ ಅವು ಆದಂತಿವೆ'. 'ಯಾವುದೇ ಕಾರಣಕ್ಕೆ ನಡೆಯಲಿ. ಈ ರೀತಿ ಸರಣಿ ಕೊಲೆಗಳು ನಡೆಯುವುದು ಅಂದರೆ ಏನು, ಏನಾದರೂ ಮಾಡೋಣ. ಯಾವಾಗ ಬರ್ತೀರಿ?' ಸಾಕ್ಷಿ ಪ್ರಜ್ಞೆ ಎಂದು ಕೆಲವರನ್ನು ಕರೆದಾಗ ಅದಕ್ಕೆ ಹೆಚ್ಚೇನೂ ಅರ್ಥವಿರುವುದಿಲ್ಲ. ಎಚ್ಚೆಲ್ಕೆ ನಿಸ್ಸಂದೇಹವಾಗಿ ಸಾಕ್ಷಿಪ್ರಜ್ಞೆಯಾಗಿದ್ದರು.

ಅವರನ್ನು ಅಷ್ಟಾಗಿ ಒಪ್ಪದಿರುವವರೂ ಸಹ ಗುರುತಿಸುವುದು 'ಎಂದೂ ತಾನು ನಂಬಿಕೊಂಡು ಬಂದ ತತ್ವಗಳ ವಿಚಾರದಲ್ಲಿ ರಾಜಿಯಾಗದಿದ್ದ ವ್ಯಕ್ತಿ' ಎಂದು. ಹಲವರ ಪ್ರಕಾರ ಅವರದ್ದು ಮಂಡ್ಯದ ಮೊದಲ ಸರಳ ಮದುವೆ. ಮದುವೆಯಾಗಿದ್ದು ಆ ಕಾಲದಲ್ಲಿ ಪ್ರಭಾವಿ ಶಾಸಕರಾಗಿದ್ದ ಜೆ.ಎಸ್.ಬೊಮ್ಮೇಗೌಡರ ಮಗಳನ್ನಾದರೂ, ಮದುವೆಯು ಎಚ್ಚೆಲ್ಕೆಯವರ ಆದರ್ಶಕ್ಕೆ ತಕ್ಕಂತೆಯೇ ನಡೆಯಿತು. ಅಲ್ಲಿಂದಾಚೆಗೆ ಎಚ್ಚೆಲ್ಕೆಯವರ ಬದುಕಿನ ಆದರ್ಶ ಮತ್ತು ಎದುರಿಸಬೇಕಾಗಿ ಬಂದ ಎಲ್ಲಾ ಹೊಡೆತಗಳಿಗೆ ಜಯವಾಣಿ ಅಕ್ಕನೂ ಪಾಲುದಾರರಾದರು. ಅವರ ಕುಟುಂಬದಲ್ಲಿ ಇಬ್ಬರು ಎಂಎಲ್ಎಗಳಿದ್ದರು. ಎಚ್.ಎಲ್.ನಾಗೇಗೌಡರು ಇವರ ದಾಯಾದಿ. ಈ ಸಂಗತಿಗಳು ಎಂದೂ ಇವರ ಐಡೆಂಟಿಟಿ ಕಾರ್ಡುಗಳಾಗಲಿಲ್ಲ.

ತೊಂಬತ್ತರ ದಶಕದ ಹೊರಳಿನಲ್ಲಿ ಎಚ್ಚೆಲ್ಕೆ ಸಾರ್ವಜನಿಕವಾಗಿ ಅತ್ಯಂತ ಸಕ್ರಿಯವಾಗಿದ್ದರು. ಜಿಲ್ಲೆಯಲ್ಲಿ ಪ್ರಬಲವಾಗಿದ್ದ ರೈತಚಳವಳಿಯ ಜೊತೆಗೆ ಅವರ ಒಡನಾಟ ಅಷ್ಟಿರಲಿಲ್ಲ. ಬಹುಶಃ ಲಂಕೇಶರಂತೆಯೇ ಇದರಲ್ಲಿ ಫ್ಯೂಡಲ್ ಮೇಲ್ಜಾತಿಗಳ ಅಹಂನ ಅಂಶವಿದೆ ಎಂಬ ಗುಮಾನಿ ಅವರದ್ದಾಗಿತ್ತು ಎನಿಸುತ್ತದೆ. ಆದರೆ, ಅವರು ಜಿಲ್ಲೆಯ ದಲಿತ ಚಳವಳಿಯ ಭಾಗವಾಗಿದ್ದರು. ನಿಧಾನಕ್ಕೆ ದಸಂಸ ಜೊತೆ ಪೂರ್ಣ ಸಕ್ರಿಯರಾಗಿರದೇ ಇದ್ದರೂ, ಯಾವ ಜಾತಿ ದೌರ್ಜನ್ಯದ ಸಂದರ್ಭದಲ್ಲೂ ಸುಮ್ಮನಿರಲಿಲ್ಲ. ಪ್ರಗತಿರಂಗ, ಸಾಕ್ಷರತಾ ಆಂದೋಲನ, ಕಂಚನಹಳ್ಳಿ ಗಂಗಾಧರ ಮೂರ್ತಿಯವರ ಕೊಲೆಯ ವಿರುದ್ಧದ ಹೋರಾಟ ಇವೆಲ್ಲದರಲ್ಲೂ ಇವರದ್ದು ಮುಂಚೂಣಿ ಪಾತ್ರವಾಗಿತ್ತು.

ನಿವೃತ್ತಿಯ ನಂತರ ಪತ್ರಿಕೋದ್ಯಮದಲ್ಲಿ ಸಕ್ರಿಯವಾಗ ಬೇಕೆಂದು ಉದಯಕಾಲ ಪತ್ರಿಕೆಯ ವಿಸ್ತರಣೆಗೆ ಕೈ ಹಾಕಿದರು. ಅದರಲ್ಲಿ ಜೊತೆಯಾಗಿದ್ದ ಮಗ ತೀರಿಕೊಂಡ ನಂತರ, ಪತ್ರಿಕೆಯೂ ನೆಲಕಚ್ಚಿತು. ಸಾಲ ತೀರಿಸಲು ತಾವೇ ನಿಂತು ಕಟ್ಟಿಸಿದ್ದ ಮನೆ ಮಾರಿ ಬಾಡಿಗೆ ಮನೆಗೆ ಹೋದರು. ಕೊನೆಯ ವರ್ಷಗಳಲ್ಲಿ ಇದ್ದ ಸ್ವಲ್ಪ ಜಮೀನು, ಮಾರಿ ಹೌಸಿಂಗ್ ಬೋರ್ಡ್ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಯೊಂದನ್ನು ಕೊಂಡರು. ಆ ಮನೆಯಲ್ಲೂ ಕೆಲವು ಕೌಟುಂಬಿಕ ದುರಂತಗಳು ಸಂಭವಿಸಿದವು. ಒಂದೂವರೆ ವರ್ಷ ಕಾಡಿಸಿದ ವಾಣಿ ಅಕ್ಕನ ಕಾಲಿನ ಗಾಯವು ಕಾಲನ್ನೇ ಬಲಿ ತೆಗೆದುಕೊಂಡಿತು. ಇವೆಲ್ಲವನ್ನೂ ಅವರು ತೆಗೆದುಕೊಂಡ ರೀತಿ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ. ಅವರಿಗೇ 3ನೇ ಸ್ಟೇಜನ್ನು ದಾಟಿದ ಕ್ಯಾನ್ಸರ್ ಬಂದಿದೆ ಎಂದಾಗಲೂ ಅವರು ಧೃತಿಗೆಡಲಿಲ್ಲ. 'ಸ್ವಲ್ಪ ಮನೆಗೆ ಬನ್ನಿ, ಕೆಲವು ರಿಪೋರ್ಟ್‌ಗಳು ನೋಡೋದಿದೆ' ಎಂದರು. ಮನೆಗೆ ಹೋದಾಗ, ಒಳಗಿನಿಂದ ಮೆಡಿಕಲ್ ರಿಪೋರ್ಟ್‌ಗಳ ಫೈಲನ್ನು ತಂದು ಮುಂದಿಟ್ಟು, ನಗುತ್ತಾ 'ನನಗೆ ಕ್ಯಾನ್ಸರ್ ಅಂತೆ ವಾಸು' ಎಂದಿದ್ದರು. ರಿಪೋರ್ಟ್‌ಗಳನ್ನು ನೋಡಿದಾಗ ಅದು ನಮ್ಮ ಎಚ್ಚೆಲ್ಕೆಯವರನ್ನು ಬಲಿ ತೆಗೆದುಕೊಳ್ಳುತ್ತದೆ ಖಚಿತವಾಯಿತು. ಎದುರಿಗೆ ಅವರು ನಮಗೇ ಧೈರ್ಯ ಹೇಳುವ ರೀತಿಯಲ್ಲಿ ಆರಾಮಾಗಿ ಕುಳಿತಿದ್ದರು.

ಹೊರಗೆ ಬಂದು 'ಇಷ್ಟು ವರ್ಷ ಸಿಗರೇ ಸೇದಿದ್ದರ ಬಗ್ಗೆ ಪಶ್ಚಾತ್ತಾಪವಾಗುತ್ತಿದೆಯಾ ಸಾ ಎಂದು ಕೇಳಿಬಿಟ್ಟೆ ನಾದರೂ, ಒಡನೆಯೇ 'ಈ ರೀತಿ ಕೇಳಬಾರದಿತ್ತು' ಅನ್ನಿಸಿತ್ತು. ಅವರು ಅ ಸಹಜವಾಗಿ 'ಏಏ... 40-50 ವರ್ಷ ಸಿಗರೇ ಎಂಜಾಯ್ ಮಾಡಿದ್ದೀನಿ ವಾಸು. ಯಾವ ಬೇ ಇಲ್ಲ' ಎಂದರು. ಅವರ ಹಣಕಾಸಿನ ಪರಿಸ್ಥಿತಿ ಅರಿವಿದ್ದುದರಿಂದ, ಮುಖ್ಯಮಂತ್ರಿಗಳ ಪರಿಹಾ ನಿಧಿಯಿಂದ ನೆರವು ಕೇಳಿ ಅರ್ಜಿ ಹಾಕೋಣಾ ಎಂದು ಕೇಳಿದೆ. 'ಬೇಡ, ಒಂದು ಎಫ್‌ಡಿ ಇ ಅದನ್ನು ತೆಗೆಯುತ್ತೇನೆ' ಎಂದರು. ನಿರೀಕ್ಷೆಗಿಂತ ಹಣ ಚಿಕಿತ್ಸೆಗೆ ಖರ್ಚಾಗಿದ್ದರಿಂದ, ನಂತರ ಅನಿವಾರ್ಯವಾಗಿ ಅರ್ಜಿ ಬರೆಯಬೇಕಾಯಿತು.


ಇಂತಹ ಪರಿಸ್ಥಿತಿಯಲ್ಲಿದ್ದ ಎಚ್ಚೆಲ್ಕೆ ನಮ್ಮ ರಾಜ್ಯ ಸಮ್ಮೇಳನದ ಕರಪತ್ರ ಕೊಡಲು ಸ್ನೇಹಿತೆಯೊಬ್ಬರು ಹೋದಾಗ, 2000 ರೂ. ಕೊಟ್ಟರು. ಎಷ್ಟು ಬೇಡವೆಂದರೂ ಕೇಳದೇ ಕೊಟ್ಟು, ಸಮ್ಮೇಳನಕ್ಕೆ ಹಾರೈಸಿ ಕಳಿಸಿಕೊಟ್ಟಿದ್ದ ಇಂತಹ ಅದೆಷ್ಟೋ ಸಂಗತಿಗಳನ್ನು ಕೇಶವಮೂರ್ತಿಯವರ ಬಗ್ಗೆ ಹೇಳಬಹುದು. ಅವರದ್ದೇ ಆದ ಮೌಲ್ಯಪ್ರಜ್ಞೆ ರೂಪಿಸಿಕೊಂಡು ಎಲ್ಲೂ ಬಿಟ್ಟುಕೊಡುತ್ತಿರಲಿಲ್ಲ. ನಾವೇನಾದರೂ ಅದರಿಂದ ಸ್ವಲ್ಪ ಆ ಕಡೆ ಈ ಕಡೆ ಸರಿದೆವೆನ್ನ ಮುಖ ಸಿಂಡರಿಸಿ ಗದರಿದ್ದೂ ಇದೆ. ಕೆಲವು ಅಂಶಗಳಲ್ಲಂತೂ ರಾಜಿಯೇ ಇರುತ್ತಿರಲಿಲ್ಲ. ಕಾರ್ಯಕ್ರಮ ಅಂದುಕೊಂಡ ಸಮಯಕ್ಕೆ ಸರಿ ಆರಂಭವಾಗಲೇಬೇಕು; ಮಹಿಳೆಯರು, ಯುವ ದಲಿತರಿಗೆ ಸಮಾನ ಪ್ರಾತಿನಿಧ್ಯ ಇರಬೇಕು; ಸೇರುತ್ತಾರೆ ಎಂಬುದು ಮುಖ್ಯವಲ್ಲ, ನಾವು ಪರವಾಗಿ ಇದ್ದೇವಾ ಇಲ್ಲವಾ ಎಂಬುದಷ್ಟೇ ನಮಗೆ ಖಚಿತವಾದ ಪುರಾವೆ ಇಲ್ಲದೇ ಸಾರ್ವಜನಿಕವಾಗಿ ಸುಮ್ಮನೇ ಆರೋಪ ಮಾಡಬಾರದು; ಮಾತು, ಬರವಣಿಗೆ, ಕರಪ ಯಾವುದನ್ನೂ ದೀರ್ಘವಾಗಿ ಎಳೆಯಬಾರದು. ಇಂಥವನ್ನು ನಾವು ಸಹಜವೆಂಬಂತೆ ಮೈಗೂಡಿಸಿಕೊಳ್ಳಬೇಕು ಎಂಬುದು ಅವರ ನಿಲುವಾಗಿತ್ತು.

ಆದರೆ, ಒಮ್ಮೆ ನಿರ್ಧಾರ ತೆಗೆದುಕೊಂಡ ಅದನ್ನು ದಡ ಮುಟ್ಟಿಸುವವರೆಗೂ ಹಿಂಜರಿಯಬಾರದು; ಮಧ್ಯೆ ರಾಜಿಯ ಪ್ರಶ್ನೆ ಇರಲಿಲ್ಲ. ಮೆಡಿಕಲ್ ಕಾಲೇಜು ಹಗರಣದ ಸಂದರ್ಭದಲ್ಲಿ ಮತ್ತು ಜಾತಿಮುಕ್ತ ಮನಸ್ಸುಗ ಸಮ್ಮಿಲನ ಕಾರ್ಯಕ್ರಮದ ವಿಚಾರದಲ್ಲಿ ಬೇರ ರೀತಿಯ ಒತ್ತಡ ಬಂದರೂ, ಎಚ್ಚೆಲ್ಕೆಯವರ ಖಡಕ್ ನಿಲುವಾಗಿತ್ತು.

ಅವರ ಬದುಕಿನ ಕಡೆಯ ದಶಕದಲ್ಲಿ ನ ಅವರ್‍ಯಾಕೆ ಅಷ್ಟೊಂದು ಹಚ್ಚಿಕೊಂಡರೋ? 7 ವರ್ಷಗಳನ್ನು ದಾಟಿದ್ದ ಅವರು ಕರ್ನಾಟಕ ಜ ಬಳಗವಾಗಿಯಷ್ಟೇ ಇರುತ್ತಾರೆ ಎಂದು ಭಾವಿ ಎಂದೂ ಸದಸ್ಯತ್ವ ಇತ್ಯಾದಿಗಳ ಬಗ್ಗೆ ನಾನು ಮಾತಾಡಲು ಹೋಗಿರಲಿಲ್ಲ. ಆದರೆ, ಸಂಗಾತಿ ನೇರವಾಗಿ ಆ ಪ್ರಸ್ತಾಪವನ್ನು ಮುಂದಿಟ್ಟಾಗ ಸದಸ್ಯರಾಗಲು ಮಾತ್ರವಲ್ಲ, ಜಿಲ್ಲಾ ಗೌರವಾಧ್ಯಕ್ಷರಾಗಲೂ ಒಪ್ಪಿದರು. ಇನ್ನು ಅವ ಬದುಕು ಕೆಲವು ತಿಂಗಳುಗಳಷ್ಟೇ ಎಂದು ಸ್ಪಷ್ಟವಾಗಿದ್ದಾಗಲೂ ನಮ್ಮ ಸಂಘಟನೆಯ ರಾ ಅಧ್ಯಕ್ಷೀಯ ಮಂಡಳಿಯ ಸದಸ್ಯರಾಗಲು ಒಪ್ಪಿಕೊಂಡರು.


ಅವರು ತೀರಿಕೊಳ್ಳುವ ಎರಡು ತಿಂಗಳ ಮನೆಯಲ್ಲಿನ ಪುಸ್ತಕಗಳನ್ನು ಜೋಡಿಸಿಡಲು ರ್‍ಯಾಕ್‌ಗಾಗಿ ಆರ್ಡರ್ ಕೊಟ್ಟರು. ಯಾವಾಗಲ ಗಂಭೀರವಾಗಿದ್ದಂತೆ ತೋರುತ್ತಿದ್ದ ಎಚ್ಚೆಲ್ಕೆಯ ಜೀವನ ಪ್ರೀತಿ ಅನನ್ಯ. ನಾವು ನಮ್ಮ ಆರೋ ಕಡೆಗೆ ಗಮನ ಕೊಡುವುದಿಲ್ಲವೆಂದು ಬಯ ಬೇರೆಯವರ ಕೈಲೂ ಹೇಳಿಸುವಷ್ಟರ ಮಟ್ಟ ತೋರಿದ ಎಚ್ಚೆಲ್ಕೆಯವರು ಇಲ್ಲವಾಗಿದ್ದು ಅನಾಥಭಾವವನ್ನು ಮೂಡಿಸಿದೆ. ಮುಂಬ ಕೆಟ್ಟ ಕಾಲದಲ್ಲಿ ಯಾವ ನಿಲುವು ತೆಗೆದು ಕೊಳ್ಳಬೇಕೆಂಬ ಪ್ರಶ್ನೆ ಎದುರಾದಾಗಲೆಲ್ಲಾ ಅ ನೆನಪಾಗುತ್ತಲೇ ಇರುತ್ತಾರೆ.

ಅಪ್ಪನೊಂದಿಗಿನ ಕೊನೆ ಕೊಂಡಿಯಾಗಿದ್ದ ಎಚ್ಚೆಲ್ಕೆ



ಉಗಾದಿ ಹಬ್ಬದ ಮಾರನೆ ದಿನ ಬೆಳಗ್ಗೆ ಮಲ್ಲಿಗೆ ...ದು ಎಸ್ಎಮ್ಎಸ್ ಕಳುಹಿಸಿದಳು. ಅದರಲ್ಲಿ ...ಎಲ್.ಕೇಶವಮೂರ್ತಿಯವರ ಆರೋಗ್ಯ ಮತ್ತೆ ...ದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ...ದಿದ್ದಳು. ಸ್ವಲ್ಪ ಹೊತ್ತಿನ ನಂತರ ವಾಸು ...ನ್ನೊಂದು ಎಸ್ಎಮ್ಎಸ್ ಕಳುಹಿಸಿ ...ಶವಮೂರ್ತಿಯವರನ್ನು ಮಂಡ್ಯ ಆಸ್ಪತ್ರೆಯ ತೀವ್ರ ...ಟಕದಲ್ಲಿಡಲಾಗಿದೆ ಎಂದ. ಯಾಕೋ ಈ ಬಾರಿ ...ಮ್ಮೆಲ್ಲರ ಪ್ರೀತಿಯ ಎಚ್ಚೆಲ್ಕೆ ಜೀವಂತವಾಗಿ ...ತ್ರೆಯಿಂದ ಬರುವುದಿಲ್ಲ ಎಂದು ಹೆದರಿಕೆ ...ಯಿತು. ರಾತ್ರಿ ಎಂಟು ಗಂಟೆಯ ಹೊತ್ತಿಗೆ ಅದು ...ವೂ ಆಯಿತು. ಅವರು ಹೊರಟೇಬಿಟ್ಟರು.

ಅಪ್ಪ ಹೋದ ನಂತರ ನನ್ನ ಪಾಲಿಗೆ ಅಪ್ಪನ ...ನದಲ್ಲಿ ನಿಂತವರು ಅಪ್ಪನ ಮಿತ್ರರಾದ ರಾಮದಾಸ್



...ತ್ತು ಎಚ್ಚೆಲ್ಕೆ. ನಾನು ಪತ್ರಿಕೆಗೆ ಮತ್ತು ಕನ್ನಡ ...ತ್ರಿಕೋದ್ಯಮಕ್ಕೆ ಆಗ ಹೊಸಬಳಾಗಿದ್ದರಿಂದ ...ವರಿಬ್ಬರೂ ಅನೇಕ ವಿಚಾರಗಳಲ್ಲಿ ಪತ್ರಿಕೆ ಯಾವ ...ಮಾರ್ಗ ಹಿಡಿಯಬೇಕು, ಯಾವ ನಿಲುವು ...ತೆದುಕೊಳ್ಳಬೇಕು ಎಂದು ಮಾರ್ಗದರ್ಶನ ...ಡುತ್ತಿದ್ದರು. ಎಚ್ಚೆಲ್ಕೆಯವರು ಪತ್ರಿಕೆಗೆ ...ಬರೆಯುವುದನ್ನು ಮುಂದುವರಿಸಿದ್ದರು. ರಾಮದಾಸ್ ...ನು ಒತ್ತಾಯ ಮಾಡಿದಾಗ ಮಾತ್ರ ಬರೆಯುತ್ತಿದ್ದರು.

ನನಗೆ ಯಾವುದಾದರು ಸಮಸ್ಯೆ ಎದುರಾದರೆ ...ವರಿಬ್ಬರೂ ಧೈರ್ಯ ತುಂಬುತ್ತಿದ್ದರು. ನಾನು ...ತಪಡಿಸಲಾರಂಭಿಸಿದರೆ ತಾಳ್ಮೆಯಿಂದ ಇರುವಂತೆ ...ಪದೇಶಿಸುತ್ತಿದ್ದರು. ಹದಿನಾಲ್ಕು ವರ್ಷಗಳ ಹಿಂದೆ ...ಂದು ದಿನ ಪತ್ರಿಕೆಯಲ್ಲಿ ಎಲ್ಲವೂ ಸರಿಯಿಲ್ಲ ಎಂದು ...ನ್ನ ಅರಿವಿಗೆ ಬಂತು. ಆಗ ಏನು ಮಾಡುವುದೆಂದು ...ಳಿಗೆ ತೋಚದೆ ಇಬ್ಬರಿಗೂ ಫೋನ್ ಮಾಡಿ ...ಮೈಸೂರಿಗೆ ಬರುತ್ತೇನೆ ಎಂದೆ. ಮಂಡ್ಯದಲ್ಲಿ ...ಶವಮೂರ್ತಿಯವರನ್ನು ನನ್ನ ಕಾರಿಗೆ ಹತ್ತಿಸಿಕೊಂಡು ...ಮೈಸೂರಿನಲ್ಲಿರುವ ರಾಮದಾಸರ ಮನೆಗೆ ಹೋದೆ. ...ವತ್ತು ನಾನು ಅವರಿಬ್ಬರ ಮುಂದಿಟ್ಟ ಪ್ರಸ್ತಾಪ ಈ ...ತ್ರಿಕೆಯ ಟೈಟಲ್ ಅನ್ನು ರಿಜಿಸ್ಟರ್ ಮಾಡಿಸುವುದು. ...ದಕ್ಕೆ ಅವರಿಬ್ಬರೂ ಸಮ್ಮತಿ ಕೊಟ್ಟರು. ಅವರಿಬ್ಬರು ...ವತ್ತು ನನ್ನನ್ನು ಬೆಂಬಲಿಸದಿದ್ದರೆ ಇವತ್ತು ಈ ...ತ್ರಿಕೆಯೇ ಇರುತ್ತಿರಲಿಲ್ಲ.

ಎಚ್ಚೆಲ್ಕೆ ಅವರಿಗೆ 72 ವರ್ಷ ವಯಸ್ಸಾದಾಗ ಮಂಡ್ಯದ ಮಿತ್ರರು ಅವರ ಬದುಕು, ಬರಹ ಮತ್ತು ಕೊಡುಗೆಗಳ ಸುತ್ತ ಒಂದು ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲು ಮುಂದಾದರು. ಆದರೆ ಎಚ್ಚೆಲ್ಕೆ ಅದಕ್ಕೆ ಒಪ್ಪಲಿಲ್ಲ, ಬದಲಾಗಿ ಪ್ರಸ್ತುತ ವಿದ್ಯಮಾನಗಳ ಬಗ್ಗೆ ವಿಚಾರಗೋಷ್ಠಿ ಹಮ್ಮಿಕೊಳ್ಳಿ ಎಂದು ಒತ್ತಾಯಿಸಿದರು. ಆಗ ವಿಧಿ ಇಲ್ಲದೆ 'ಪ್ರೊ.ಎಚ್ಚೆಲ್ಕೆ 72- ವರ್ತಮಾನದ ತಲ್ಲಣಗಳು' ಎಂಬ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಯಿತು. ಆಗ ನಾನು ವಿವಿಧ ರೀತಿಯ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದೆ. ಅದೆಲ್ಲದರಿಂದ ತತ್ತರಿಸುತ್ತಿದ್ದ ನಾನು ಆ ಸಭೆಗೆ ತಡವಾಗಿ ಹೋದೆ. ಅಪ್ಪನಂತೆಯೇ ಸಮಯಕ್ಕೆ ಸರಿಯಾಗಿ ಎಲ್ಲವನ್ನು ಮಾಡಬೇಕೆನ್ನುವ ನಿಲುವಿನ ಎಚ್ಚೆಲ್ಕೆಗೆ ನನ್ನ ಬಗ್ಗೆ ಅಸಮಾಧಾನ ಆಗಿದ್ದರೂ ಅವರು ಅದನ್ನು ತೋರಿಸಿಕೊಂಡಿರಲಿಲ್ಲ.

ಅವರು ಪ್ರತಿವರ್ಷ ಅಪ್ಪನ ಹುಟ್ಟುಹಬ್ಬ ಮತ್ತು ಪತ್ರಿಕೆಯ ವಾರ್ಷಿಕೋತ್ಸವಕ್ಕೆ ತಪ್ಪದೆ ಬರುತ್ತಿದ್ದರು. ಒಮ್ಮೆ ಅದನ್ನು ಸಂಸಾ ಬಯಲುರಂಗಮಂದಿರದಲ್ಲಿ ಹಮ್ಮಿಕೊಂಡಿದ್ದೆವು. ಆಗ ಎಚ್ಚೆಲ್ಕೆ ಅವರು "ನೀನು ಸರಿಯಾದ ಸಭಾಂಗಣದಲ್ಲಿ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಈ ಬಿಸಿಲಿನಲ್ಲಿ ಈ ಕಲ್ಲಿನ ಮೆಟ್ಟಿಲ ಮೇಲೆ ಕೂತುಕೊಳ್ಳುವುದು ಕಷ್ಟ" ಎಂದು ಮೆಲ್ಲಗೆ ನನ್ನನ್ನು ಟೀಕಿಸಿದ್ದರು. ಎರಡು ವರ್ಷಗಳ ಹಿಂದೆ 'ಲಂಕೇಶ್ 80' ಮತ್ತು ಪತ್ರಿಕೆಯ ಹತ್ತನೆ ವಾರ್ಷಿಕೋತ್ಸವವನ್ನು ಹಮ್ಮಿಕೊಂಡಾಗ ಅವರನ್ನು ವಿಶೇಷ ಆಹ್ವಾನಿತರನ್ನಾಗಿಸಿದ್ದೆವು. ಅವತ್ತು ಸಹೋದರ ಕೆ.ಫಣಿರಾಜ್, ಹಿರಿಯ ವಕೀಲ ಎ.ಕೆ.ಸುಬ್ಬಯ್ಯ, ಎಚ್ಚೆಲ್ಕೆ ಮತ್ತು ಸಿದ್ದರಾಮಯ್ಯ ವೇದಿಕೆ ಮೇಲಿದ್ದರು. ಫಣಿರಾಜ್ ಮತ್ತು ಸುಬ್ಬಯ್ಯನವರು ಮಾತನಾಡಿದ ನಂತರ ಸಿದ್ದರಾಮಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಬೇಕು ಎಂದು ಕೇಳಿದೆವು. ಆಗ ಸಿದ್ದರಾಮಯ್ಯ "ಕೇಶವಮೂರ್ತಿಯವರು ಮಾತಾಡಲಿ" ಎಂದರು. ನಾನು "ಇಲ್ಲ, ಅವರಿಗೆ ಸ್ಟ್ರೋಕ್ ಆದ ನಂತರ ಸಭೆಗಳಲ್ಲಿ ಮಾತನಾಡುತ್ತಿಲ್ಲ" ಎಂದು ಹೇಳಬೇಕಾಯಿತು.

ಎಚ್ಚೆಲ್ಕೆ ಅವರಿಗೆ ಸ್ಟ್ರೋಕ್ ಆದಾಗ ನಮ್ಮೆಲ್ಲರಿಗೂ ತುಂಬಾ ಬೇಸರವಾಗಿತ್ತು, ಆದರೆ ಸ್ಟ್ರೋಕ್‌ನಿಂದಾಗಿ ಎಚ್ಚೆಲ್ಕೆ ವಿಚಲಿತರಾಗಲಿಲ್ಲ, ನಡೆದಾಡಲು ಸಾಧ್ಯವಾಗುತ್ತಿದ್ದಂತೆ ಅವರು ಮತ್ತೆ ಸಭೆಗಳಲ್ಲಿ ಭಾಗವಹಿಸಲಾರಂಭಿಸಿದರು. ಆದರೆ ಮಾತು ಇನ್ನೂ ಅಸ್ಪಷ್ಟವಾಗಿದ್ದರಿಂದ ಅವರು ಭಾಷಣ ಮಾಡುತ್ತಿರಲಿಲ್ಲ ಅಷ್ಟೇ. ಅವರು ಹಾಗೆ ಚೇತರಿಸಿಕೊಂಡಿದ್ದು ನಮ್ಮೆಲ್ಲರಿಗೆ ಸಹಜವಾಗಿಯೇ ಸಂತೋಷ ತಂದಿತ್ತು.

ಆದರೆ ಆ ಸಂತೋಷ ಬಹಳ ಕಾಲ ಉಳಿಯಲಿಲ್ಲ, ಯಾಕೆಂದರೆ ಅವರಿಗೆ ಕ್ಯಾನ್ಸರ್ ತಗುಲಿಕೊಂಡಿತು. ವಾಸು ಬರೆದಿರುವಂತೆ ಕ್ಯಾನ್ಸರ್ ಚಿಕಿತ್ಸೆ ಅವರ ಎಲ್ಲಾ ಹಣವನ್ನು ಕರಗಿಸಿತು. ಆಗ ವಾಸು ಒತ್ತಾಯ ಮಾಡಿ ಅವರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಂದು ಅರ್ಜಿಗೆ ಸಹಿ ಹಾಕಿಸಿ ನನಗೆ ಕಳುಹಿಸಿದ. ನಾನು ಅದನ್ನು ಸಿದ್ದರಾಮಯ್ಯನವರಿಗೆ ಕೊಟ್ಟೆ. "ಏನು ಗೌರಿ, ಕ್ಯಾನ್ಸರ್ ರಾಮದಾಸರನ್ನು ಕಿತ್ತುಕೊಂಡಿತು. ಈಗ ಕೇಶವಮೂರ್ತಿಯವರಿಗೂ ಅಂಟಿಕೊಂಡಿದೆ" ಎಂದು ಬೇಸರ ವ್ಯಕ್ತಪಡಿಸುತ್ತಲೇ ಸಿದ್ದರಾಮಯ್ಯ ಅರ್ಜಿಗೆ ಸಹಿ ಹಾಕಿದರು. ಆದರೆ ನನ್ನ ದುರಾದೃಷ್ಟಕ್ಕೆ ಅವರು ಸಹಿ ಹಾಕಿದ ಅರ್ಜಿಯನ್ನು ಅವರ ಸಿಬ್ಬಂದಿ ಕಳೆದುಹಾಕಿದರು. ಮತ್ತೆ ಇನ್ನೊಂದು ಅರ್ಜಿ ತರಿಸಿಕೊಂಡು ಮತ್ತೆ ಸಿದ್ದರಾಮಯ್ಯನವರ ಸಹಿ ಪಡೆದೆ. ಇದೆಲ್ಲ ಪ್ರಕ್ರಿಯೆ ಮುಗಿದನಂತರ ಒಮ್ಮೆ ಎಚ್ಚೆಲ್ಕೆ ಅವರಿಗೆ ಫೋನ್ ಮಾಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದೆ. "ಚೆನ್ನಾಗಿದ್ದೀನಮ್ಮ. ಆದರೆ ನನ್ನಿಂದ



ಕಂಡಹಾಗೆ

• ಗೌರಿ ಲಂಕೇಶ್

editorlankesh@gmail.com

ನಿನಗೆ ಸುಮ್ಮನೆ ತೊಂದರೆ ಆಯಿತು. ಎರಡೆರಡು ಬಾರಿ ನೀನು ಮುಖ್ಯಮಂತ್ರಿ ಹತ್ತಿರ ಹೋಗಬೇಕಾಯಿತು" ಎಂದು ಬೇಸರ ವ್ಯಕ್ತಪಡಿಸಿದರು. "ಏನೂ ತೊಂದರೆ ಆಗಲಿಲ್ಲ, ನಾನು ಅಷ್ಟೂ ಮಾಡದಿದ್ದರೆ ಹೇಗೆ?" ಎಂದು ಅವರನ್ನು ಸುಮ್ಮನಾಗಿಸಬೇಕಾಯಿತು.

ಎಚ್ಚೆಲ್ಕೆ ತುಂಬಾ ಪ್ರೀತಿಯ ಮನುಷ್ಯ. ಅವರ ಮುಗುಳ್ನಗೆಯೇ ಅಕ್ಕರೆಯನ್ನು ಸೂಚಿಸುತ್ತಿತ್ತು. ಅವರ ಮಾತು ಎಷ್ಟು ಮೃದುವೋ ಅವರ ನಿಲುವು ಅಷ್ಟೇ ದಿಟ್ಟ. ರಾಮದಾಸ್ ಅವರು ಹೋದನಂತರ ಮೈಸೂರು ನಿಶಬ್ದವಾಯಿತು. ಯುವ ಪೀಳಿಗೆಯವರನ್ನು ಹುರಿದುಂಬಿಸುತ್ತಾ, ಬೇರೆ ಯಾರು ಬರದಿದ್ದರೂ ಏಕಾಂಗಿಯಾಗಿ ಪ್ರತಿಭಟಿಸುತ್ತಿದ್ದ ರಾಮದಾಸ್ ಇನ್ನಿಲ್ಲವೆಂದಾದ ಮೇಲೆ ಮೈಸೂರಿನಲ್ಲಿ ಅವರಂತೆ ದಿಟ್ಟವಾಗಿ ಮಾತನಾಡುವ, ಜನರನ್ನು ಒಗ್ಗೂಡಿಸುವ ದನಿಯೇ ಇಲ್ಲದಂತಾಗಿದೆ.

ಎಚ್ಚೆಲ್ಕೆ ಕೂಡ ಇನ್ನಿಲ್ಲವಾದ ಮೇಲೆ ಮಂಡ್ಯ ಕೂಡ ನಿಶಬ್ದವಾಗುತ್ತದೆ ಎಂಬ ಭೀತಿ ನನ್ನದು. ಯಾಕೆಂದರೆ ಅಲ್ಲಿನ ಎಲ್ಲಾ ಪ್ರಗತಿಪರ, ಜನಪರ, ಜಾತ್ಯತೀತ ಹೋರಾಟಗಳಿಗೆ ನೈತಿಕ ಶಕ್ತಿ ನೀಡುತ್ತಿದ್ದ ಯುವಜನತೆಯನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ಸಾಕ್ಷಿಪ್ರಜ್ಞೆಯಾಗಿದ್ದ ಎಚ್ಚೆಲ್ಕೆ ಅವರ ಸ್ಥಾನವನ್ನು ತುಂಬುವವರು ಯಾರೂ ಇಲ್ಲ.

ಎಚ್ಚೆಲ್ಕೆ ಅವರು ತಮ್ಮ ಅನಾರೋಗ್ಯದ ನಡುವೆಯೂ ಸಾಧ್ಯವಾದಾಗಲೆಲ್ಲ ಲೇಖನಗಳನ್ನು ಬರೆದು ಕಳುಹಿಸುತ್ತಿದ್ದರು. ಈಗ ಅವರೊಂದಿಗೆ ಅವರ ವಿಡಂಬನಾ ಬರಹಗಳೂ ಅಂತ್ಯಗೊಂಡಿವೆ. ಎಚ್ಚೆಲ್ಕೆ ಅವರ ನಿರ್ಗಮನ ಪತ್ರಿಕೆಯನ್ನು ಬಡವಾಗಿಸಿದೆ... ಅಪ್ಪನೊಂದಿಗಿನ ಕೊಂಡಿ ಆಗಿದ್ದ ಅವರ ಅಗಲಿಕೆ ನನಗೆ ಅನಾಥಪ್ರಜ್ಞೆ ಕಾಡುವಂತೆ ಮಾಡಿದೆ...

ಎಚ್ಚೆಲ್ಕೆ ಅವರು ದಿಟ್ಟವಾಗಿ ನಿಷ್ಠೂರವಾಗಿ ಬದುಕಿದ್ದಕ್ಕೆ, ಬರೆದು ನಮ್ಮನ್ನೆಲ್ಲ ನಗಿಸಿದ್ದಕ್ಕೆ, ಹೋರಾಟಗಳಲ್ಲಿ ಬೆಂಬಲವಾಗಿ ನಿಂತಿದ್ದಕ್ಕೆ, ಪತ್ರಿಕೆಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಕ್ಕೆ, ನನಗೆ ಅಪಾರ ಅಕ್ಕರೆ ತೋರಿದ್ದಕ್ಕೆ... ಅವರು ಅವರಾಗಿದ್ದಕ್ಕೆ ನಮ್ಮೆಲ್ಲರ ಪ್ರೀತಿಯ ನಮನಗಳು... ■

ಸಿಮ್ಹಗೆ ಶಿಕ್ಷೆ ನೀಡುವವರು ಯಾರು?



...ಪೆನ್ನು ಹಾಗೂ ನಾಲಿಗೆಯನ್ನು ಹರಿಬಿಡುವ ಚಟ ...ನಗು-ಮೈಸೂರು ಕ್ಷೇತ್ರದ ಸಂಸದ ಪ್ರತಾಪಸಿಂಹನದ್ದು

ಆಚಾರವಿಲ್ಲದ ನಾಲಿಗೆ ಎಂಬ ಮಾತು ಆತನಿಗೆ ಚೆನ್ನಾಗಿ ಅನ್ವಯಿಸುತ್ತದೆ. ಸಕ್ರಿಯ ರಾಜಕಾರಣಕ್ಕೆ ಬರುವ ಮುನ್ನ ಅಂಕಣಗಳನ್ನು ಬರೆಯುತ್ತಾ ಸಂಘ ಪರಿವಾರದ ಅಜೆಂಡಾಗಳನ್ನು ಪ್ರಚಾರಪಡಿಸಿದ್ದಕ್ಕಾಗಿ, ಮೋದಿ ಬಗ್ಗೆ ಬಿಡುಗಡೆಗೊಂಡ ಕೃತಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಕ್ಕಾಗಿ, ಯಡಿಯೂರಪ್ಪನವರ ಪರವಾಗಿಯೂ ಲೇಖನವೊಂದನ್ನು ಬರೆದದ್ದಕ್ಕಾಗಿ ಸಿಮ್ಹನಿಗೆ ಸಂಸತ್ ಚುನಾವಣೆ ಟಿಕೆಟ್ ಸಿಕ್ಕಿತ್ತು.

ತಾನೊಬ್ಬ ಬುದ್ಧಿವಂತ ರಾಜಕಾರಣಿ ಎಂದು ಭಾವಿಸಿದ್ದ ಅಡಗೂರು ವಿಶ್ವನಾಥ್ ಮಾಡಿದ ತಪ್ಪಿನಿಂದಾಗಿ ಪ್ರತಾಪ ಸಿಮ್ಹ ಗೆದ್ದಿದ್ದೂ ಆಯಿತು. ತನ್ನ ಪೆನ್ನು ಇರುವುದೇ ವಿಷಕಾರುವುದಕ್ಕಾಗಿ ಎಂದು ನಂಬಿರುವ ಸಿಮ್ಹ 'ಮಲಬಾರ್ ಗೋಲ್ಡ್' ಸಂಸ್ಥೆಯ ವಿರುದ್ಧ ವಿಷಕಾರುವ ಲೇಖನವೊಂದನ್ನು ಬರೆದಿದ್ದ. ಅದರಲ್ಲಿ ಮಲಬಾರ್ ಗೋಲ್ಡ್ ಸಂಸ್ಥೆಯವರು ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದ್ದಾರೆ; ಹಾಗಾಗಿ ಭಾರತದಲ್ಲಿರುವ ಮಲಬಾರ್ ಗೋಲ್ಡ್ ಸಂಸ್ಥೆಯ ಅಂಗಡಿ ಮಳಿಗೆಗಳನ್ನು ಮುಚ್ಚಿ ಪೇಶಾವರದಲ್ಲಿ ಆರಂಭಿಸಲಿ ಎಂದು ಫರ್ಮಾನು ಹೊರಡಿಸಿದ್ದ. ಆಗಲೇ ಪತ್ರಿಕೆಯು ನಿಜವಾಗಲೂ ನಡೆದ ಘಟನೆ ಏನು ಎಂಬುದನ್ನು ಬರೆದಿತ್ತು. ವಾಸ್ತವವಾಗಿ ಆಗ ನಡೆದದ್ದೇ ಬೇರೆ.

ದುಬೈನಲ್ಲಿರುವ ಬೇರೆ ಯಾವುದೋ ಸಂಸ್ಥೆಯವರು ಆಚರಿಸಿದ ಪಾಕಿಸ್ತಾನ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವನ್ನು ಮಲಬಾರ್ ಗೋಲ್ಡ್ ಸಂಸ್ಥೆಯವರು ಆಚರಿಸಿದರು ಎಂಬಂತೆ ದಿನೇಶ್ ಎಂಬ ವ್ಯಕ್ತಿ ವಾಟ್ಸಪ್‌ನಲ್ಲಿ ಅಪ್‌ಲೋಡ್ ಮಾಡಿದ್ದ. ಅದನ್ನೇ ನಂಬಿದ ಸಿಮ್ಹ ಇದರ ಸುತ್ತ ಒಂದು ಇಡೀ ಅಂಕಣವನ್ನೇ ಕಿರೆದಿದ್ದ. ಆದರೀಗ ದುಬೈ ನ್ಯಾಯಾಲಯವು ಈ ದಿನೇಶನಿಗೆ 42 ಲಕ್ಷದ 50 ಸಾವಿರ ರೂಪಾಯಿ ದಂಡವನ್ನು ವಿಧಿಸಿದೆಯಲ್ಲದೆ, ಆತನಿಗೆ ದುಬೈ ತ್ಯಜಿಸುವಂತೆ ಆದೇಶ ನೀಡಿದೆ. ಇಷ್ಟೆಲ್ಲಾ ಆದರೂ ಬುದ್ಧಿ ಕಲಿಯದ ಸಿಮ್ಹ ಈಗ ಇನ್ನೊಂದು ಎಡವಟ್ಟು ಮಾಡಿಕೊಂಡಿದ್ದಾನೆ. ಇತ್ತೀಚೆಗೆ ಗುಂಡ್ಲುಪೇಟೆ ಉಪ ಚುನಾವಣಾ ಪ್ರಚಾರದ ವೇಳೆಯಲ್ಲಿ ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಗೀತಾ ಮಹದೇವಪ್ರಸಾದ್‌ರವರ ಬಗ್ಗೆ ಬಹಳ ಹಗುರವಾಗಿ ಮಾತನಾಡಿದ್ದಾನೆ. "ಅವರ ಗಂಡ ಸತ್ತು ಹಾಲು ತುಪ್ಪ ಬಿಡುವ ಮೊದಲೇ ಗೂಟದ ಕಾರನ್ನು ನೆನಪಿಸಿಕೊಳ್ಳುತ್ತಿದ್ದರು" ಎಂದು ಅತ್ಯಂತ ಕೀಳು ಅಭಿರುಚಿಯ ಮಾತುಗಳನ್ನು ಆಡಿದ್ದಾನೆ ಸಿಮ್ಹ.

ಸುಳ್ಳು ಸುದ್ದಿ ಹಬ್ಬಿಸಿದ್ದಕ್ಕೆ ದುಬೈನಲ್ಲಿ ದಂಡ ವಿಧಿಸಲು ಸಾಧ್ಯವಾದರೆ ಆ ಸುಳ್ಳು ಸುದ್ದಿಯನ್ನೇ ಆಧರಿಸಿ ಲೇಖನ ಬರೆದದ್ದಕ್ಕೆ ಶಿಕ್ಷೆ ಇಲ್ಲವೇ?

ಹೀಗೆ ತನ್ನ ನಾಲಿಗೆ ಮತ್ತು ಪೆನ್ನನ್ನು ಹರಿಬಿಡುವ ಪ್ರತಾಪಸಿಮ್ಹ, ಸುಳ್ಳನ್ನು ಬರೆಯುವುದು ಮತ್ತು ದ್ವೇಷವನ್ನು ಹರಡುವುದರ ಜೊತೆಯಲ್ಲಿ ನಾರಿಯನ್ನು ಪೂಜಿಸಬೇಕು ಎನ್ನುವ ಪಕ್ಷದ ಸದಸ್ಯನಾಗಿದ್ದರೂ ಆತ ಮಹಿಳೆಯೊಬ್ಬರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಕ್ಕೆ ತಕ್ಕ ಶಾಸ್ತಿ ಇಲ್ಲವೇ?

■ ಬಿ.ಎನ್. ಮನುಶೆಣೈ

ಒರಟು ಮಂಡ್ಯದ ಮೃದು ಹೃದಯಿ ಎಚ್ಚೆ





ಪ್ರಗತಿರಂಗ ಸಭೆಯಲ್ಲಿ ಲಂಕೇಶ್ ಮತ್ತು ಎಚ್ಚೆಲ್ಕೆ

ಲಂಕೇಶರು ಯಾವುದೇ ಕೆಲಸ ಮಾಡುವ ಮುನ್ನ ಎಚ್ಚೆಲ್ಕೆ ಮತ್ತು ಕೆ. ರಾಮದಾಸರ ಅಭಿಪ್ರಾಯ ಕೇಳುತ್ತಿದ್ದರು. ಅವರು ಹೆಗಡೆಯವರ 'ರೇವಜೀತು' ಪ್ರಕರಣದಲ್ಲಿ ಧರಣೆ ಕುಳಿತು ಸತ್ಯಾಗ್ರಹ ಆರಂಭಿಸಿದಾಗ, ಮಂಡ್ಯದಿಂದ ಬಂದು ಭಾಗವಹಿಸಿದ್ದರು. ಮಂಡ್ಯದಲ್ಲಿ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ ಜನಾನುರಾಗಿಯಾಗಿ ಹೆಸರು ಪಡೆದಿದ್ದಲ್ಲದೆ, ಒಳ್ಳೆಯ ವಿದ್ಯಾರ್ಥಿ ಪಡೆಯನ್ನು ರೂಪಿಸಿದ್ದರು. ಅವರೆಲ್ಲಾ ಮಂಡ್ಯದ ಯಾವುದೇ ಚಳವಳಿಯಲ್ಲಿ ಭಾಗ ವಹಿಸುತ್ತಿದ್ದರು. ಲಂಕೇಶರು ಇದ್ದಕ್ಕಿದ್ದಂತೆ ಪ್ರಗತಿರಂಗ ರೂಪಿಸಿದಾಗ ಅದರ ಸಂಚಾಲಕರಾಗಿದ್ದುದಲ್ಲದೆ ಈ ನಾಡಿನಲ್ಲಿ ನಡೆದ ನೂರಾರು ಸಭೆಗಳಿಗೆ ಹೋಗಿ ಭಾಷಣ ಮಾಡಿದ್ದರು. ಆ ಪಾರ್ಟಿ ಉದ್ಧಾರವಾಗಿ ಪವರಿಗೆ ಬರುವುದು ಕನಸಿನ ಮಾತೆಂದು ಗೊತ್ತಿದ್ದರೂ, ಕರ್ನಾಟಕದ ಜನಕ್ಕೆ ರಾಜಕಾರಣ ಅಂದರೆ ಹೇಗಿರಬೇಕು, ಓಟು ಮಾಡುವ ಪ್ರಜೆಯ ಕರ್ತವ್ಯಗಳೇನು ಎಂಬುದನ್ನು ಅರಿವು ಮಾಡಿಕೊಡಲು ಲಂಕೇಶರ ಜೊತೆ ತಿರುಗಿದರು.

ಎಚ್.ಎಲ್. ಕೇಶವಮೂರ್ತಿಯವರು ನಮ್ಮೂರ ಪಕ್ಕದ ಹೆರಗನಹಳ್ಳಿಯವರು. ಅವರು ಈ ಊರಿನವರೆಂದು ಗೊತ್ತಾದಾಗ, ಅದು ಜಾತಿಸೂಚಕ ನಾಮಗಳ ಕಾಲವಾದ್ದರಿಂದ ಹೆರಗನಹಳ್ಳಿಯಲ್ಲಾರು ಬ್ರಾಹ್ಮಣರಿದ್ದಾರೆ ಎಂಬ ಅನುಮಾನ ಕಾಡಿತ್ತು. ಸಹಪಾಠಿಗಳು ಆ ಊರಿಗೆ ಕರೆದುಕೊಂಡು ಹೋದಾಗ ತಿಳಿದದ್ದೇನೆಂದರೆ ಎಚ್ಚೆಲ್ಕೆಯವರು ಇಲ್ಲಿನವರಾದರೂ ಅವರಿಗೆ ಮನೆ, ಜಮೀನು ಯಾವುದೂ ಇಲ್ಲ, ಅದೆಲ್ಲಾ ದಾಯಾದಿಗಳ ಪಾಲಾಗಿದೆ. ಆದರೂ ಅವರು ಹುಟ್ಟಿದೂರಿನ ಅಭಿಮಾನಕ್ಕಾಗಿ ಆಗಾಗ್ಗೆ ಬಂದು ಹೋಗುತ್ತಾರೆಂದು ತಿಳಿಯಿತು.

ಕೇಶವಮೂರ್ತಿಯವರು ಬಹಳ ಎತ್ತರದ ವ್ಯಕ್ತಿ. ಆಕಾರದಲ್ಲಷ್ಟೇ ಅಲ್ಲ, ವ್ಯಕ್ತಿತ್ವದಲ್ಲೂ ಎತ್ತರದವರು. ನಮ್ಮ ನಾಗಮಂಗಲ ತಾಲ್ಲೂಕಿನ ರಾಜಕಾರಣಿ ಎಚ್.ಟಿ. ಕೃಷ್ಣಪ್ಪನವರು ಹೆಚ್ಚೆಲ್ಕೆಗೆ ಸಂಬಂಧಿಕರು. ಜೊತೆಗೆ ಪರಸ್ಪರ ಗೌರವ ಭಾವನೆಯಿಂದ ಬದುಕಿದವರು. ಅವರೊಮ್ಮೆ "ನಮ್ಮ ಕೇಶವಮೂರ್ತಿಯವರು ಸಾಹಿತ್ಯ ಪರಿಷತ್ ಸಭೆಗಳಲ್ಲಿ ಕಾಣಿಸಿಕೊಳ್ಳಲ್ಲ ಯಾಕೆ?" ಎಂದು ಕೇಳಿದ್ದರು. ಅದಕ್ಕೆ ನಾನು "ನೀವು ಆ ರೆಡ್ಡಿ ರಾಮುಲು ಜೊತೆ ಸೇರಿ ರಾಜಕಾರಣ ಮಾಡ್ತಿರ?" ಎಂದೆ. "ಸಾಧ್ಯವೇ ಇಲ್ಲ ಬಿಡಿ" ಎಂದರು. "ಅದೇ ತರ ಈ ತರದ ಸಾಹಿತ್ಯೋಪ ಜೀವಿಗಳ ಜೊತೆ ಅವರು ಗುರುತಿಸಿಕೊಳ್ಳಲ್ಲ, ಅದಕ್ಕಿಂತ ಲಫಂಗರು, ನೀಚರು ಎಚ್ಚೆಲ್ಕೆ ಹತ್ರ ಹೋಗಲ್ಲ, ಮನೆತನಕ್ಕೂ ಹೋಗಲ್ಲ. ಮಂಡ್ಯದಲ್ಲಿದ್ದುಕೊಂಡು ನಿಷ್ಠೂರವಾಗಿ ಬದುಕೋದು ಅಷ್ಟು ಸುಲಭ ಅಲ್ಲ" ಎಂದೆ.

ಕೃಷ್ಣಪ್ಪನವರು ಯೋಚಿಸತೊಡಗಿದರು. "ಅಷ್ಟೇ ಅಲ್ಲ ಸಾರ್, ಎಚ್ಚೆಲ್ಕೆ ನಮ್ಮ ರೆಬೆಲ್‌ಸ್ಟಾರ್‌ನ ಮೆಚ್ಚಿ ಎಂದೂ ಬರಿಲಿಲ್ಲ, ಅವುರತ್ರ ಕೂಡ ಹೋಗಲಿಲ್ಲ. ಇನ್ನೂ ಆಶ್ಚರ್ಯ ಅಂದ್ರೆ ಚುಂಚನಗಿರಿ ಬೆಟ್ಟದ ಸಮೀಪಕ್ಕೂ ಹೋಗಲಿಲ್ಲ" ಅಂದೆ. ಅದು ಕೃಷ್ಣಪ್ಪನವರಿಗೆ ಸಮ್ಮತವಾಗಿ ಕಾಣಲಿಲ್ಲ, ಏಕೆಂದರೆ ಎಲ್ಲ ಜನಾಂಗದ ಬಡವರ ಮಕ್ಕಳೂ ವಿದ್ಯೆ ಪಡಿತಾಯಿರೊ ಮಠ ಅದು. ಅಲ್ಲಿಗೋದ್ರೆ ತಪ್ಪೇನು ಅನ್ನುವ ಭಾವನೆ ಅವರಲ್ಲಿತ್ತು. ಆಗ ನಾನು "ನೋಡಿ ಸಾರ್, ಆದಿ ಚುಂಚನಗಿರಿಮಠಕ್ಕೆ ವಿವೇಕಾನಂದ ಮತ್ತು ಕುವೆಂಪುರವರ ವಿಚಾರಧಾರೆ ಸಾಕಿತ್ತು, ಅದು ಬಿಟ್ಟು ಆರ್‌ಎಸ್‌ಎಸ್‌ನ ಮೊರೆ ಹೋಗಿರೊ ಸ್ವಾಮಿ ಹತ್ರ ಎಚ್ಚೆಲ್ಕೆ ಹೋಗಕ್ಕೆ ಸಾಧ್ಯವೇಯಿಲ್ಲ, ಅಂಗಾಗಿ ಮಠದ ದಾರಿನೆ ಬೇರೆ ಹೆಚ್ಚೆಲ್ಕೆ ದಾರಿನೆ ಬೇರೆ" ಎಂದೆ. ಅವರು ಸುಮ್ಮನಾದರು.

ಎಚ್ಚೆಲ್ಕೆಯವರು ನಮ್ಮ ಸುತ್ತಲಿನ ವೈರುಧ್ಯಗಳನ್ನು ಹಾಸ್ಯಮಯವಾಗಿ ದಾಖಲಿಸಿದವರು. ಆದರೆ ಮೈಕ್ ಮುಂದೆ ಬಂದರೆ ಅವರು ಹಾಸ್ಯ ಮಾಡುತ್ತಿರಲಿಲ್ಲ, ಕೆಟ್ಟ ವ್ಯವಸ್ಥೆಯ ಬಗ್ಗೆ ಒಳಗೆ ನೋಯುತ್ತಿದ್ದ ಅವರು ಭಾಷಣಕ್ಕೆ ನಿಂತಾಗ ಹಾಸ್ಯ ಮಾಡದೆ ಗಂಭೀರವಾಗಿ ಮಾತನಾಡುತ್ತಿದ್ದರು. ಅವರಲ್ಲಿ ಅನವಶ್ಯಕವಾದ ಹರಟೆಯೂ ಇರುತ್ತಿರಲಿಲ್ಲ.

ಕೇಶವಮೂರ್ತಿಯವರು ನನಗೆ ಪರಿಚಯವಾದದ್ದು ಲಂಕೇಶ್ ಮುಖಾಂತರ. ಅದಕ್ಕೂ ಮೊದಲು ಅವರ ಹಾಸ್ಯ ಲೇಖನಗಳನ್ನು ಓದಿದ್ದೆ. ದೇವರಾಜ ಅರಸು ಆಡಳಿತದ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಎಂಬ ವಾರಪತ್ರಿಕೆಯಲ್ಲಿ ಬರುತ್ತಿದ್ದ 'ಥೂ ಹಲ್ಕ' ಎಂಬ ಸೆಕ್ಸ್ ಜೋಕ್ ಓದಿ ಯಾರೀ ಪುಣ್ಯಾತ್ಮ ಇಷ್ಟೊಂದು ಹಸಿಯಾದ ಜೋಕ್ ಬರೆಯುತ್ತಾರಲ್ಲ ಎಂಬ ಕುತೂಹಲವಾಗಿತ್ತು. ಆಗ ಪ್ರಜಾವಾಣಿ, ಸುಧಾ ಪತ್ರಿಕೆ ವಿಶೇಷಾಂಕದಲ್ಲೂ ಕೂಡ ಎಚ್.ಎಲ್.ಕೆ.ಯವರ ಹಾಸ್ಯಲೇಖನ ಇದ್ದೇ ಇರುತ್ತಿದ್ದವು. ಆ ಪೈಕಿ 'ರಂಗೆ' ಅವರು ಕೊಟ್ಟ ವ್ಯಾಖ್ಯಾನ ರೋಮಾಂಚಕಾರಿಯಾಗಿತ್ತು, ರಂ ಕುಡಿದ ನಂತರ ರಂಬಾ, ಊರ್ವಶಿ, ಮೇನಕೆ ಕಾಣಿಸುವುದರಿಂದ ಅದಕ್ಕೆ 'ರಂ' ಎಂದು ಕರೆಯುತ್ತಾರೆ ಎಂದು ಬರೆದಿದ್ದರು. ಆನಂತರ ಅವರ 'ಯಂಗಾರ ಟಿಕೆಟ್ ಕೊಡಿ' ಎಂಬ ಸಂಗ್ರಹ ಓದಿ ಆರೆ ನಮ್ಮ ಗ್ರಾಮೀಣ ಪ್ರದೇಶದ ಆಡು ಭಾಷೆಯಲ್ಲೂ ಲೇಖನ ಬರೆಯಬಹುದೆಂಬ ಆತ್ಮವಿಶ್ವಾಸ ಮೂಡಿತ್ತು.

'ಯಂಗಾರ ಟಿಕೆಟ್ ಕೊಡಿ' ಎಂದರೆ ಪಾರ್ಟಿಯಿಂದ ಹಿರಿಯನಿಗೆ ಟಿಕೆಟ್ ಕೊಡುವುದಾದರೆ ನಾನಿದ್ದೇನೆ, ಯುವಕನಿಗೆ ಕೊಡುವುದಾದರೆ ನನ್ನ ಮಗನಿದ್ದಾನೆ. ಮಹಿಳೆಗೆ ಕೊಡುವುದಾದರೆ ನನ್ನ ಹೆಂಡತಿ ಇಲ್ಲ ಸೊಸೆಯಿದ್ದಾಳೆ ಎಂಬ ಆ ಹಾಸ್ಯ ಲೇಖನ ಇನ್ನೂ ಚಾಲ್ತಿಯಲ್ಲಿದೆ. ಹೀಗೆ ರಾಜಕೀಯ ವಿಡಂಬನೆಯನ್ನು ನವಿರಾದ ಹಾಸ್ಯದಲ್ಲಿ ದಾಖಲಿಸುತ್ತಿದ್ದ ಎಚ್ಚೆಲ್ಕೆ ಲಂಕೇಶ್ ಪತ್ರಿಕೆಯಲ್ಲಿ ಸತತವಾಗಿ ಮೂವತ್ತಾರು ವರ್ಷಗಳ ಕಾಲ ಬರೆದರು. ಇದೆಲ್ಲಕ್ಕಿಂತ ಮುಖ್ಯವಾಗಿ ತಾವು ಬರೆದಂತೆ ಬದುಕಿದರು.

ಲಂಕೇಶರು ಆಗಾಗ್ಗೆ ತಮ್ಮ ವೃತ್ತಿ ವಿರುದ್ಧ ತಿರುಗಿ ಬೀಳುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ನಾವು ಸುಮ್ಮನೆ ವಾರವಾರ ರೀಮುಗಟ್ಟಲೆ ಬರೆದುಕೊಂಡು ಕುಳಿತಿರುವ ಬದಲು ಪತ್ರಿಕೆ ಏನು ಮಾಡಿದೆ ಎಂಬ ಸಭೆ ಏರ್ಪಡಿಸೋಣ ಎಂಬ ತೀರ್ಮಾನಕ್ಕೆ ಬಂದರು. ಅವರ ಆಲೋಚನೆಗೆ ಇಂಬುಗೊಟ್ಟ ಎಚ್ಚೆಲ್ಕೆಯವರು, ಹಾಗಾದರೆ ಮೊದಲ ಸಭೆಯನ್ನ ಮಂಡ್ಯದಲ್ಲೇ ಮಾಡಿ ಎಂದು ಕರೆದರು. ಆ ನಂತರ ರೈತ ಸಭಾಂಗಣವನ್ನೇ ಗೊತ್ತು ಮಾಡಿ ಬಂದ ಅತಿಥಿಗಳಿಗೆಲ್ಲಾ ಊಟ, ವಸತಿ ಏರ್ಪಾಡು ಮಾಡಿದರು. ಮೈಸೂರು, ಬೆಂಗಳೂರಿನಿಂದ ಗಣ್ಯರು ಬಂದಿಳಿದರು.

ಆಶ್ಚರ್ಯವೆಂದರೆ ಲಂಕೇಶರಿಗೆ ಪತ್ರಿಕೆ ಮಾಡಿದ್ದ ಅನಾಹುತವೇ ಗೊತ್ತಾಗಿರಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ರೈತ ಸಂಘ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ನಾಯಕತ್ವದಲ್ಲಿ ಸಂಘಟನೆಗೊಂಡು ಹಲ್ಲು ಮಸೆಯುತ್ತಿತ್ತು. ಈ ನಾಯಕರುಗಳ ವೀರಾವೇಶವನ್ನರಿತ ಲಂಕೇಶ್ ಪ್ರೊಫೆಸರ್‌ರನ್ನ "ಕಿಂದರಿ ಜೋಗಿ" ಎಂದು ಕರೆದಿದ್ದಲ್ಲದೆ, ಸುಂದರೇಶ್ ಸಾಲ ಮರುಪಾವತಿ ಮಾಡಬೇಡಿ ಎಂಬ ಹೇಳಿಕೆಯನ್ನು ಗೇಲಿ ಮಾಡಿ "ಸಾಲವನ್ನು ಕೊಂಬಾಗ ಆಲೋಗರವುಂಡಂತೆ" ಎಂಬ ಲೇಖನ ಬರೆದಿದ್ದರು. ಇದರ ಪರಿಣಾಮ ಗ್ರಹಿಸದೆ ಮಂಡ್ಯಕ್ಕೆ ಬಂದಾಗ ರೈತ ಸಂಘದವರ ಆಕ್ರೋಶಕ್ಕೆ ಲಂಕೇಶರ ಜೊತೆಗೆ ಕೇಶವಮೂರ್ತಿಯವರೂ ಗುರಿಯಾಗಿದ್ದರು. ಆ ಇಡೀ ದಿನ ಒಂದು ರೀತಿ ಪ್ರಕ್ಷುಬ್ಧತೆಯಲ್ಲೇ ಸಭೆ ನಡೆಯಿತು. ಎಚ್ಚೆಲ್ಕೆಯವರು ಗಲಭೆಕೋರರಿಗೆ "ನೋಡಿ ನೀವು ನಮ್ಮ ಪ್ರಾಣ ತೆಗೆಯಬಹುದಷ್ಟೆ ಇನ್ನೇನೂ ಮಾಡಲಾಗಲ್ಲ" ಎಂಬ ಸಂದೇಶ ಕಳಿಸಿದರು. ಮಂಡ್ಯದ ನೆಲದಲ್ಲಿ ಬದುಕಬೇಕಾದರೆ, ಅದರಲ್ಲೂ ಕೇಶವಮೂರ್ತಿಯವರಂತೆ ಬದುಕಬೇಕಾದರೆ, ಸಾವಿನ ಭೀತಿ ಬಿಡಬೇಕು. ಎಚ್ಚೆಲ್ಕೆ ಹಾಗೇ ಬದುಕಿದರು.

ಅವರೆಂದೂ ರೈತ ಸಂಘದ ವಿರೋಧಿಯಾಗಿರಲಿಲ್ಲ. ಕಾವೇರಿ ಸಮಸ್ಯೆಯಲ್ಲಿ ವಸ್ತುಸ್ಥಿತಿಯನ್ನು ಗ್ರಹಿಸಿ ಮಾರ್ಗದರ್ಶನ ನೀಡುತ್ತಿದ್ದರು. ಅಲ್ಲದೆ ರಾಜಕಾರಣಿಗಳ ಹೊರತಾಗಿ ತಮಿಳುನಾಡು ಕರ್ನಾಟಕದ ರೈತರು ಒಗ್ಗೂಡಿ ನೀರಿನ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಎರಡೂ ರಾಜ್ಯಗಳ ಕಾವೇರಿ ಕೊಳ್ಳದ ರೈತರ ಒಕ್ಕೂಟ ರಚಿಸಿ, ಕಾವೇರಿ ನೀರು ಹಂಚಿಕೆ ವಿಷಯವನ್ನು ರೈತರಿಗೆ ಅರ್ಥವಾಗುವಂತೆ ವಿವರಿಸಿದ ಅಪರೂಪದ ವಿದ್ವಾಂಸರಾಗಿದ್ದರು.

ಇನ್ನ ಎಪ್ಪತ್ತು ಎಂಬತ್ತರ ದಶಕದಲ್ಲಿ ಜಿಲ್ಲೆಯಲ್ಲಿ ರೂಪುಗೊಂಡ ದಲಿತ ಸಂಘದ ಚಳವಳಿಗಳ ಮುಂಚೂಣಿಯಲ್ಲಿ ಎಚ್ಚೆಲ್ಕೆ ಇದ್ದರು. ದಲಿತರ ಚಳವಳಿ ಸಭೆ ಸಮಾರಂಭಗಳ ವೇದಿಕೆಯಲ್ಲಿದ್ದ ಎಚ್ಚೆಲ್ಕೆಯವರನ್ನು ನೋಡಿದ ಜಾತಿವಾದಿ ಮಂದಮತಿಗಳು "ಇವುನೆಲ್ಲೊ ಅವುರಿಗೆ ಹುಟ್ಟವುನೆ" ಎಂಬ ಕೀಳು ಭಾಷೆಯ ಬೈಗುಳವನ್ನು ಎಚ್ಚೆಲ್ಕೆಗೆ ಕೇಳುವಂತೆಯೇ ಹೇಳುತ್ತಿದ್ದರು. ಇದರಿಂದ ಎಚ್ಚೆಲ್ಕೆಗೆ ನೋವಾಗುತ್ತದೆಂದು ಭಾವಿಸಿದ್ದ ಅವರ ಕಡೆಗೆ ಎಚ್ಚೆಲ್ಕೆ ಮುಗುಳು ನಗೆ ಉತ್ತರ ಕೊಡುತ್ತಿದ್ದರು.

ಮಂಡ್ಯ ಜಿಲ್ಲೆಯ ಎಲ್ಲ ಪ್ರಗತಿಪರ ಚಳವಳಿಯ ಮುಂಚೂಣಿಯಲ್ಲಿರುತ್ತಿದ್ದ ಎಚ್ಚೆಲ್ಕೆ ನಾಯಕರಾಗಿ ಯುವ ಸಮೂಹವನ್ನು ಮುಂದೆ ಬಿಡುತ್ತಿದ್ದರು. ತಾವು ಉಸ್ತುವಾರಿ ವಹಿಸುತ್ತಿದ್ದರು. 1980ರ ಜುಲೈ ತಿಂಗಳು ಕರ್ನಾಟಕದ ಸಾಂಸ್ಕೃತಿಕ ಲೋಕದ ಮಹಾ ಘಟನೆಯಾಗಿ ಹೊರಬಂದ ಲಂಕೇಶ್ ಪತ್ರಿಕೆಯ ಆರಂಭದ ಸಂಚಿಕೆಯಿಂದಲೂ ಅದರ ಬರಹಗಾರರಾಗಿದ್ದುದಲ್ಲದೆ, ಲಂಕೇಶರಿಗೆ ನೈತಿಕ ಬೆಂಬಲವನ್ನು ನೀಡಿದರು. ಪತ್ರಿಕೆ ಒಂದೆರಡು ಬಾರಿ ಸಮಸ್ಯೆಗಳನ್ನೆದುರಿಸಿದಾಗ ಅವರೊಡನೆ ಗಟ್ಟಿಯಾಗಿ ನಿಂತಿದ್ದರು.

ಲಂಕೇಶರು ಯಾವುದೇ ಕೆಲಸ ಮಾಡುವ ಮುನ್ನ ಎಚ್ಚೆಲ್ಕೆ ಮತ್ತು ಕೆ. ರಾಮದಾಸರ ಅಭಿಪ್ರಾಯ ಕೇಳುತ್ತಿದ್ದರು. ಅವರು ಹೆಗಡೆಯವರ 'ರೇವಜೀತು' ಪ್ರಕರಣದಲ್ಲಿ ಧರಣಿ ಕುಳಿತು ಸತ್ಯಾಗ್ರಹ ಆರಂಭಿಸಿದಾಗ, ಮಂಡ್ಯದಿಂದ ಬಂದು ಭಾಗವಹಿಸಿದ್ದರು. ಮಂಡ್ಯದಲ್ಲಿ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ ಜನಾನುರಾಗಿಯಾಗಿ ಹೆಸರು ಪಡೆದಿದ್ದಲ್ಲದೆ, ಒಳ್ಳೆಯ ವಿದ್ಯಾರ್ಥಿ ಪಡೆಯನ್ನು ರೂಪಿಸಿದ್ದರು. ಅವರೆಲ್ಲಾ ಮಂಡ್ಯದ ಯಾವುದೇ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು.

ಲಂಕೇಶರು ಇದ್ದಕ್ಕಿದ್ದಂತೆ ಪ್ರಗತಿರಂಗ ರೂಪಿಸಿದಾಗ ಅದರ ಸಂಚಾಲಕರಾಗಿದ್ದುದಲ್ಲದೆ ಈ ನಾಡಿನಲ್ಲಿ ನಡೆದ ನೂರಾರು ಸಭೆಗಳಿಗೆ ಹೋಗಿ ಭಾಷಣ ಮಾಡಿದ್ದರು. ಆ ಪಾರ್ಟಿ ಉದ್ಧಾರವಾಗಿ ಪವರಿಗೆ ಬರುವುದು ಕನಸಿನ ಮಾತೆಂದು ಗೊತ್ತಿದ್ದರೂ, ಕರ್ನಾಟಕದ ಜನಕ್ಕೆ ರಾಜಕಾರಣ ಅಂದರೆ ಹೇಗಿರಬೇಕು, ಓಟು ಮಾಡುವ ಪ್ರಜೆಯ ಕರ್ತವ್ಯಗಳೇನು ಎಂಬುದನ್ನು ಅರಿವು ಮಾಡಿ[...] ಲಂಕೇಶರ ಜೊತೆ ತಿರುಗಿದರು.

ತಿಪಟೂರಲ್ಲಿ ನಡೆದ ಪ್ರಗತಿರಂಗದ ಸಭೆಯ[...] ಐಬಿಯಲ್ಲಿ ಎಚ್ಚೆಲ್ಕೆ ದೇವೇಗೌಡರ ಬಗ್ಗೆ ಒಂದು [...] ಮಾತನಾಡಿದರು. ಅಂದರೆ ನಾವು ಹಗುರವಾಗಿ [...] ವಂತಿಲ್ಲ ಎಂಬ ಮಾತದು. ಅದರೊಳಗೆ ಜಾತಿ ಅ[...] ವಾಸನೆ ಗ್ರಹಿಸಿ ಲಂಕೇಶರು ಹಾಸ್ಯ ಮಾಡಿದರು[...] "ಹಾಗಲ್ಲ ಸಾರ್" ಎಂಬ ಸಮಜಾಯಿಸಿ [...] ಮುಂದೆ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿ[...] ಲಂಕೇಶ್ ಮಹಾನಾಯಕ ಎಂಬಂತೆ ಟಿಪ್ಪಣಿ ಬರೆ[...] ಹೋಗಿ ಸಂದರ್ಶನ ಮಾಡಿ ಬಂದರು. ಆಗ ಲ[...] ಗೊತ್ತಾದ ಸಂಗತಿ ಎಂದರೆ ವೀರೇಂದ್ರ ಪಾ[...] ಲಂಕೇಶ್ ಪತ್ರಿಕೆಯೇ ಗೊತ್ತಿರಲಿಲ್ಲ. ಲಂಕೇಶ್‌ರ [...] ನೋಡಿದ ಎಚ್ಚೆಲ್ಕೆ "ಸಾರ್, ಇದೇ ದೇವೆ[...] ಮುಖ್ಯಮಂತ್ರಿಯಾಗಿದ್ರೆ ಹೋಗಿ ಸಂದರ್ಶನ ಮಾಡಿ[...] ಬರ್ತಿದ್ರಾ?" ಎಂದರು. ಒಂದಿಷ್ಟು ಒಳಗಾಗಿದ್ದ [...] "ಇಲ್ಲ ಅನ್ನುತ್ತೆ" ಎಂದರು.

ಆ ನಂತರ ಆ ವಾರದ ಪತ್ರಿಕೆಯಲ್ಲಿ 'ನನ್ನ ಲೇ[...] ಮತ್ತು ಅಭಿಪ್ರಾಯಗಳಲ್ಲಿ ಏನಾದರು[...] ವಾಸನೆಗಳಿವೆಯೇ? ಯಾವ ಅಳುಕೂ ಇಲ್ಲದೆ [...] ತಿಳಿಸಿ' ಎಂದು ಓದುಗರಿಗೆ ಕೇಳಿಕೊಂಡರು. [...] ತಪ್ಪು ನಿರ್ಧಾರಗಳನ್ನು ಮತ್ತು ತಪ್ಪು ಅಭಿಪ್ರಾಯ[...] ಯಾವುದೇ ಮುಚ್ಚು ಮರೆಯಿಲ್ಲದೆ ಹೇಳುತ್ತಿದ್ದ[...] ಎಂದೂ ಆತ್ಮವಂಚನೆ ಮಾಡಿಕೊಂಡವರಲ್ಲ.

ಅವರು ತುಂಬಾ ಘಾಸಿಯಾಗಿದ್ದುದ್ದು ನಾಗ[...] ವಕೀಲ ಮತ್ತು ಪತ್ರಕರ್ತ ಗಂಗಾಧರ ಮೂರ್ತಿ ಕೊ[...] ಸಮಯದಲ್ಲಿ. ವೈರಿಗಳು ತನ್ನನ್ನು ಬೇಟೆಯಾಡುತ್ತಿದ್ದರು[...] ಆತ ಎಚ್ಚೆಲ್ಕೆಯವರ ಬಳಿ ಹೇಳಿಕೊಂಡಿದ್ದ "ಅದೆಲ್ಲಾ [...] ಎಂಬ ಧೈರ್ಯ ತುಂಬಿ ಕಳುಹಿಸುತ್ತಿದ್ದರು. ಆದರೆ[...] ದಿನ ಕೊಲೆ ನಡೆದೇಹೋಯ್ತು. ಇದರಿಂದ ದಿಗ್ಭ್ರಮೆ[...] ಎಚ್ಚೆಲ್ಕೆ ನಾಗಮಂಗಲದಲ್ಲಿ ದೊಡ್ಡ ಮಟ್ಟದ [...] ರೂಪುಗೊಳ್ಳುವಂತೆ ಮಾಡಿದ್ದರು. ನಿಜವಾಗಿಯೂ [...] ಮಾಡಿಸಿದವನ ಬಳಿ ಯಾರಾದರೂ "ಆತ ವಕೀಲ[...] ನಾಡಿನ ವಕೀಲರು ಆತನ ಪರ ಬರುತ್ತಾರೆ. ಪತ್ರಕ[...] ಕರ್ನಾಟಕದ ಪತ್ರಕರ್ತರು ನಿನ್ನ ವಿರುದ್ಧ ನಿಲ್ಲುತ್ತಾರೆ[...] ಒಂದು ಮಾತನ್ನು ಹೇಳಿದ್ದರೆ ಆ ರಾಜಕಾರಣಿ ಗಂಗಾಧ[...] ತಂಟೆಗೆ ಹೋಗುತ್ತಿರಲಿಲ್ಲ. ಆದರೇನು, ಕೊಲೆ ನಡೆದು[...] ಆಗ ನಾನು ಎಚ್ಚೆಲ್ಕೆಯವರ ಮನೆಗೆ ಹೋದಾಗ [...] ಮಾತನಾಡುವ ಸ್ಥಿತಿಯಲ್ಲೇ ಇರಲಿಲ್ಲ.


ಎಲ್ಲರ ನೋವನ್ನು ತನ್ನದಾಗಿಸಿಕೊಂಡು [...] ಪಾಪ ಎನ್ನುತ್ತಿದ್ದ ಎಚ್ಚೆಲ್ಕೆ, ತಮ್ಮ ಮಗ ತೀರಿಕೊ[...] ಸೊಸೆಯ ಬಾಳಿನ ಬಗ್ಗೆ ಮರುಗಿ ಸೊಸೆಗೆ ಪಾಲು[...] ಮರು ಮದುವೆಗೆ ಅವಕಾಶ ಮಾಡಿಕೊಟ್ಟ [...] ಮಾನವತಾವಾದಿಯಾಗಿದ್ದರು.

ಯಾವುದೇ ಅನ್ಯಾಯದ ವಿರುದ್ಧ ಪ್ರತಿಭಟ[...] ಅವರ ಹುಟ್ಟುಗುಣವಾಗಿತ್ತು. ಅವರು ಹಲ್ಲು ಕೀಳಿಸಿ[...] ಬೊಚ್ಚುಬಾಯಾಗಿದ್ದರೂ ಚಿಕ್ಕಮಗಳೂರಿನ [...] ಬುಡನ್‌ಗಿರಿ ಹೋರಾಟಕ್ಕೆ ಬಂದಿದ್ದರು. [...] ರಂಗದಲ್ಲಿರುವ ಕೆಲ ಪುರೋಹಿತ ಪಿಂಡಗಳು ಇನ್ನು [...] ದತ್ತ ಪೀಠ ಎಂದು ಬರೆಯಿರಿ, ಬಾಬಾಬುಡನ್‌ಗಿರಿ[...] ದಾಖಲಿಸಬೇಡಿ ಎಂಬ ಚೆಡ್ಡಿಗಳ ಆಜ್ಞೆಯನ್ನು ಪತ್ರ[...] ಪಾಲಿಸುವುದನ್ನು ನೋಡಿದ ಎಚ್ಚೆಲ್ಕೆ, ಮಾಧ್ಯಮದ[...] ಜನಿವಾರಿಗಳ ಬಗ್ಗೆ ಆತಂಕಗೊಂಡಿದ್ದರು. ಅಲ್ಲದೆ[...] ನಡುವೆ ಪಾಪಾಸು ಕಳ್ಳಿಯಂತೆ ಬೆಳೆಯುತ್ತಿರುವ ವ[...] ಶಕ್ತಿಗಳಿಗೆ ಪರ್ಯಾಯವಾಗಿ ನಾವೇನು ಮಾಡಲಾಗು[...] ಎಂದು ಕೊರಗುತ್ತಿದ್ದರು. ಇಂತಹ ಕೊರಗೇ [...] ಏಡಿ ಹುಣ್ಣಿನಂತೆ ಕಾಡಿ ಬಲಿ ತೆಗೆದುಕೊಂಡಿತು[...]

ಎಚ್ಚೆಲ್ಕೆ ಮಂಡ್ಯದ ಒರಟು ನೆಲದ ಮೃದು [...] ಯಾಗಿದ್ದರು. ಈ ಪ್ರಾಂತ್ಯದಲ್ಲಿ ಹಾದುಹೋಗುವವರು[...] ನೋಡಿ ಹೋಗೋಣ ಎನ್ನುತ್ತಿದ್ದರು. ಅದಕ್ಕೂ ಮ[...] ರಾಮಣ್ಣನನ್ನು ಮಾತನಾಡಿಸಿ ಹೋಗೋಣ ಎ[...] ರಾಜಕಾರಣಕ್ಕೆ ಬಂದರೆ ಶಂಕರೇಗೌಡರನ್ನು ಮಾ[...] ಹೋಗುವ ಜನರಿದ್ದರು. ಅವರು ಬರೀ ರಾಜಕಾರಣಿಯ[...] ಬದಲಿಗೆ ಸಾಂಸ್ಕೃತಿಕ ನಾಯಕರಾಗಿದ್ದರು.

ಇಂತಹದೇ ಒಂದು ಬರಗಾಲ ಬಂದಾಗ ಮಂಡ್ಯ[...] ಹಳ್ಳಿಗಳಲ್ಲಿ ತಿರುಗಿ ಹುಲ್ಲು ಸಂಗ್ರಹಿಸಿ ಕೋಲಾರ[...] ಹಂಚಿ ಬಂದಿದ್ದರು. ಈ ಮಹಾ ನಾಯಕನ ಎರಡು ಕ[...] ರಾಮಣ್ಣ ಮತ್ತು ಎಚ್ಚೆಲ್ಕೆ ಈಗಿಲ್ಲ. ನಿಜಕ್ಕೂ ಮಂಡ್ಯ[...] ತಬ್ಬಲಿಯಾಗಿದೆ. ಈಗ ಈ ನೆಲದಲ್ಲಿ ದತ್ತೂರಿ ಗಿಡ [...] ಶಂಕರೇಗೌಡರು, ರಾಮಣ್ಣ, ಎಚ್ಚೆಲ್ಕೆ ರೂಪಿಸಿ ಹೋ[...] ಹೊಸ ತಲೆಮಾರು ಸರ್ವಜನಾಂಗದ ಶಾಂತಿಯ [...] ರೂಪಿಸಲು ತಯಾರಾಗಬೇಕಿದೆ.

■ ಬಿ. ಚಂದ್ರೇ[...]



...ಮಹಾಮನೆಯ ನೈಜ ಹಿರಿ ಶರಣ ಎಚ್.ಎಲ್.ಕೆ.



2016ರಲ್ಲಿ ನಡದ 'ಲಂಕೇಶ್ 80' ಕಾರ್ಯಕ್ರಮದಲ್ಲಿ ಕೆ. ಫಣಿರಾಜ್ ಎಚ್.ಎಲ್. ಕೇಶವಮೂರ್ತಿ, ಸಿದ್ದರಾಮಯ್ಯ, ಎ.ಕೆ. ಸುಬ್ಬಯ್ಯ ಮತ್ತು ಗೌರಿ ಲಂಕೇಶ್

ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕೇಂದ್ರ ...ಕ್ರ ಮಂಡಳಿಯ ಸದಸ್ಯರೂ, ನಮ್ಮ ನಾಡ ಆಧುನಿಕ ...ಮಾರಿನ ಜನಪರ ಚಳವಳಿಗಳ ನೈಜ ಹಿರಿಯ ...ತಿಯೂ ಆಗಿರುವ ಎಚ್.ಎಲ್. ಕೇಶವಮೂರ್ತಿ ...ವರ ಮರಣದೊಂದಿಗೆ ದಿ.ಪಿ.ಲಂಕೇಶರು ತಮ್ಮ ...ದಕತ್ವದಲ್ಲಿ ಹುಟ್ಟುಹಾಕಿದ 'ಲಂಕೇಶ್ ಪತ್ರಿಕೆ' ಎಂಬ ...ತ ಪ್ರಜ್ಞಾ ಸಮೂಹದ ಕೊನೆಯ ಆದಿಗಲ್ಲು ಕುಸಿದಿದೆ. ...ಕ್ಕೂ, 1980-99ರವರೆಗೂ ಪತ್ರಿಕೆಯು ಕರ್ನಾಟಕದ ...ಸ ತಲೆಮಾರಿನ 'ಜಾಣ-ಜಾಣೆಯರ' ಪ್ರಜ್ಞೆಯಾಗಿತ್ತು; ...ಕ್ಕೆ ಲಂಕೇಶರೇ ನಾವಿಕರಾಗಿದ್ದರೂ, ರಾಮದಾಸ್ ಹಾಗು ...ವಮೂರ್ತಿಯವರು ಪತ್ರಿಕೆಯನ್ನು ಜನಮಾನಸದೊಡನೆ ...ಯುವ ಲಂಗರಾಗಿದ್ದರು.

ನಮ್ಮ ಪ್ರೀತಿಯ ಎಚ್ಎಲ್ಕೆ 1970ರ ದಶಕದ ...ಟಕದ ನವ ಪ್ರಗತಿಪರ ಚಳವಳಿಯ ಅಲೆಯಲ್ಲಿ ...ಪ್ರಜ್ಞೆಯನ್ನು ಸಾಣೆ ಹಿಡಿದುಕೊಂಡು, 1990ರ ...ರದ ಕಠಿಣ ಹಿಂದೂತ್ವ ಕಾಲದಲ್ಲಿ ಕಣ್ಣುಬಿಡುತ್ತಿರುವ ...ಕಾನೇಕ ನವ ಯುವಕರಿಗೆ ಮಾರ್ಗಸೂಚಿ ...ತ್ವವಾಗಿದ್ದವರು. ಎಂತಹ ಕಿರಿಯರ ಜೊತೆಗೂ ...ದಯದಿಂದ ಬೆರೆತು, ತಮ್ಮ ಜೀವನಾನುಭವದಿಂದ ...ಂದಣ ಹೋರಾಟದ ಬಗ್ಗೆ ದಾರಿ ತೋರುವ ...ಯಶೀಲರಾಗಿದ್ದರು. ವಿಷಯ ಸ್ಪಷ್ಟವಿದ್ದಾಗ ರಾಜಿ ಇಲ್ಲದ ...ರ ಮಾತು, ವಿಷಯ ಅಸ್ಪಷ್ಟವಿದ್ದಾಗ ನಿಧಾನಿಸಿ ...ಭವದಿಂದ ಅರಿಯುವ ಹಿತವಚನ, ವಿಷಯ ...ಷ್ಟವಿದ್ದಾಗ ಹೋರಾಟದ ಛಲ ಸಹಿತ ಸಹನಶೀಲವಾಗಿ ...ಪಕ್ಕೆ ಕಾಯುವ ನಿಜಗುಣ–ಇವಿಷ್ಟೂ ಸಮತೂಕವನ್ನು ... ವೇದಿಕೆಯ ಕಲಾಪಗಳಲ್ಲಿ ನಾವು ಅರಿತು ಬೆಳಗಿದ್ದೇವೆ.

ಎಚ್ಎಲ್ಕೆ ಅವರ ನಿಧನದೊಂದಿಗೆ, ನಮ್ಮ ...ಹಾಮನೆಯ ನೈಜ ಹಿರಿ ಶರಣರೊಬ್ಬರನ್ನು ಕಳಕೊಂಡು ... ಅನಾಥರಾಗಿದ್ದೇವೆ. ಆದರೆ ಶರಣರ ಮಹಾಮನೆಯಲ್ಲಿ ...ವಿನ ಅಂಗೈ ಜ್ಯೋತಿಯೇ ಇಷ್ಟಲಿಂಗ. ಎಚ್ಎಲ್ಕೆ ... ಅರಿವಿನ ಅಂಗೈ ಜ್ಯೋತಿಯಾಗಿ ನಮ್ಮ ದೈನಂದಿನ ...ರಾಟಗಳಿಗೆ ಸ್ಫೂರ್ತಿ ನೀಡುತ್ತಿರಲಿ ಎಂಬ ಸದಾಶಯ ...ಂದಿಗೆ, ಮಹಾಮನೆಯ ನಿಜ ಶರಣಂಗೆ ನಮಿಸುವೆವು.

...ರಾಜಶೇಖರ್, ಕೆ.ಫಣಿರಾಜ್, ದಿ.ಎಸ್.ಬೆಂಗ್ರೆ

ನಿಜವಾದ ಮಂಡ್ಯದ ಗಂಡು ಎಚ್.ಎಲ್.ಕೇಶವಮೂರ್ತಿ

...ಮಂಡ್ಯದಂತಹ ಊರನ್ನು ಮಂಡ್ಯದವರು ...ಡುವುದಕ್ಕೂ ನನ್ನಂಥ ಹೊರಗಿನವರು ನೋಡುವುದಕ್ಕೂ ...ಸವಿದೆ. ಅಪ್ಪಟ ಜವಾರಿ ಊರಿನ ಈ ಮಣ್ಣಿಗೆ ...ಯೇ ರೀತಿಯ ಒಂದು ಆಯಾಮವಿದೆ. ಈ ಊರಿಗೆ ...ಥ ದೂರದವನ ಕರುಳಬಳ್ಳಿಯ ಸಂಬಂಧ ಬೆಳೆಯಲು ...ವಮೂರ್ತಿ ಮತ್ತು ಇಲ್ಲಿನ ಮಣ್ಣಿನ ಜವಾರಿಯ ...ದೃವ್ಯ ಬಹಳ ಮುಖ್ಯ ಕಾರಣ. ಕೇಶವಮೂರ್ತಿ ...ಕೊಂಡ ಸುದ್ದಿ ತಿಳಿದ ನನಗೆ ನನ್ನ ಮನೆಯ ...ಯನೊಬ್ಬನನ್ನು ಕಳೆದುಕೊಂಡಂತೆ ಭಾಸವಾಯಿತು.

ಅವರು ಹಠ ಬಿಡದ ಹುಡುಗನ ಹಾಗೆ ಮಂಡ್ಯದಲ್ಲಿ ...ದರು. ಅವರು ಎದುರು ಹಾಕಿಕೊಂಡು ಹೋರಾಟ ...ದ ಘಟನೆಗಳನ್ನು ಹೇಳುತ್ತ ಹೋದರೆ ಅದೇ ಒಂದು ...ಕವಾದೀತು. ಇಡೀ ಮಂಡ್ಯದಂಥ ಊರನ್ನು ನನ್ನಂಥವರು ಅಭಿಮಾನದಿಂದ ನೋಡಲಿಕ್ಕೆ ಸಾಧ್ಯವಾಗಿರುವ ಕಾರಣ ಕೇಶವಮೂರ್ತಿ ಇಲ್ಲಿ ಬೆಳೆಸಿದ ಒಂದು ಪ್ರತಿರೋಧದ ವಾತಾವರಣ.

ಅವರ ಮನೆ ಊರ ಹೊರಗಿದೆ. ಮಂಡ್ಯದ ಕಲ್ಲಹಳ್ಳಿ ಬಡಾವಣೆಯ ಮನೆ ಮಾರಿ ಅವರು ಊರ ಹೊರಗಿನ ಒಂದು ಹೌಸಿಂಗ್‌ಬೋರ್ಡ್ ಕ್ವಾರ್ಟರ್ಸ್‌ನಲ್ಲಿ ಬದುಕುತ್ತಿದ್ದರು. ಅಚ್ಚರಿ ಎಂದರೆ ದೇಹವನ್ನು ಅಗ್ನಿಗೆ ಹಾಕಿದ ಜಾಗ ಕೂಡ ಮನೆಯ ಹತ್ತಿರವೇ ಇದೆ. ಊರ ಹೊರಗಿನ ಮನೆ ಹಾಗೂ ಹತ್ತಿರದ ಸುಡುಗಾಡು ಇವೆರಡೂ ನನಗೆ ಬೇರೆಯೇ ಅರ್ಥವನ್ನು ಹೇಳಿದವು.

ಮಂಡ್ಯದಲ್ಲಿ ಅಂತರ್ಜಾತಿ ಮದುವೆಯ ಸಮಸ್ಯೆಗಳಾದರೆ ಅಲ್ಲಿ ಕೇಶವಮೂರ್ತಿಗಳು ಕಡ್ಡಾಯವಾಗಿ ಹಾಜರಿರಲೇಬೇಕು. ಕೃಷಿ ಕೂಲಿ ಕಾರ್ಮಿಕರ ಹೋರಾಟ, ಮಹಿಳಾ ಚಳವಳಿ, ರೈತಪರ ಹೋರಾಟಗಳು ಹೀಗೆ ಬಹುಮುಖಿ ಹೋರಾಟಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಕೇಶವಮೂರ್ತಿ, ಮಂಡ್ಯದ ನಿಜವಾದ ಸಾಕ್ಷಿಪ್ರಜ್ಞೆಯಾಗಿದ್ದರು.

ಮಂಡ್ಯದ ಮೇಲೆ ಈಗ ದೊಡ್ಡ ಜವಾಬ್ದಾರಿ ಇದೆ. ಫ್ಯಾಸಿಸ್ಟ್ ಧೋರಣೆ ಬಹಳ ವೇಗವಾಗಿ ಬೆಳೆಯುತ್ತಿರುವ, ಹರಡುತ್ತಿರುವ ಇಂದಿನ ವಾತಾವರಣದಲ್ಲಿ ಕೇಶವಮೂರ್ತಿ ಅಂಥವರ ಗೈರುಹಾಜರಿ ಎದ್ದು ಕಾಣುತ್ತದೆ. ಅವರು ಇದ್ದಾರೆ ಎನ್ನುವುದೇ ಚಳವಳಿಗೆ ಆತ್ಮಬಲವಾಗಿತ್ತು, ಅವರು ಇಲ್ಲದಾಗ ಈ ತರದ ಒಂದು ಪ್ರಜ್ಞೆಯನ್ನು ಉಳಿಸಿಕೊಂಡು ಹೋಗುವ ಹೊಣೆಗಾರಿಕೆ ಮಂಡ್ಯದ ಪ್ರಜ್ಞಾವಂತರ ಮೇಲಿದೆ. ಅವರು ಎಷ್ಟು ನಿಷ್ಠುರ ಎಂದರೆ ರಾಜಕಾರಣಿಗಳಿಂದ ತುಂಬಿದ ಸಭೆಯಲ್ಲಿ ಅವರ ಎದುರಿಗಿಯೇ ಜನರನ್ನು ಉದ್ದೇಶಿಸಿ ಒಂದು ಮಾತನ್ನು ಹೇಳುತ್ತಿದ್ದರು, "ನೀವು ಎಲ್ಲಿಯವರೆಗೆ ರಾಜಕಾರಣಿಗಳ ಮಾತಿಗೆ ಚಪ್ಪಾಳೆ ಹೊಡೆಯುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ನೀವು ಉದ್ಧಾರವಾಗಲ್ಲ" ಅಂತ. ಅದನ್ನು ಕೇಳಿ ಜನ ಖುಷಿಯಿಂದ ಇನ್ನಷ್ಟು ಜೋರಾಗಿ ಚಪ್ಪಾಳೆ ಹೊಡೆಯುತ್ತಿದ್ದರು!

ನಾಗಮಂಗಲ ಸಾಹಿತ್ಯ ಸಮ್ಮೇಳನದಲ್ಲಿ ಕೇಶವಮೂರ್ತಿ ಅಧ್ಯಕ್ಷರಾಗಿದ್ದರು. ಅಧ್ಯಕ್ಷೀಯ ಭಾಷಣಕಾರರಾಗಿ ಅವರು ಮಾತನಾಡಿದ್ದು ಮೂರೇ ಮೂರು ಮಾತು. ಅದರಲ್ಲಿ ಅವರು ಹೇಳಿದ ಮಾತು ಇಲ್ಲಿ ಉಲ್ಲೇಖಿಸುತ್ತೇನೆ; ವೇದಿಕೆಯಲ್ಲಿ ನಿರೂಪಕರು ಬೆಂಗಳೂರಿನಿಂದ ಬಂದಿದ್ದರು. ನಾಗಮಂಗಲ ಅಂತಹ ನಾಡು ಇಂತಹ ನಾಡು ಅಂತ ಅವರು ವರ್ಣನೆ ಮಾಡುತ್ತಿದ್ದರು. ಕೇಶವಮೂರ್ತಿಯವರು ಭಾಷಣದಲ್ಲಿ ಅದನ್ನು ಪ್ರಸ್ತಾಪಿಸಿದರು. "ನಾಗಮಂಗಲ ಅಂಥ ನಾಡು, ಇಂಥ ನಾಡು, ಪ್ರತಿಭೆಗಳ ಬೀಡು ಅಂತ ನಿರೂಪಕರು ಹೇಳ್ತಾ ಇದ್ದಾರೆ, ನಿರೂಪಣೆ ಮಾಡಲಿಕ್ಕೆ ಒಂದು ಪ್ರತಿಭೆಯೂ ನಾಗಮಂಗಲದಲ್ಲಿ ಸಿಗಲಿಲ್ಲವೇ? ಅದಕ್ಕೆ ಇವರನ್ನು ಬೆಂಗಳೂರಿನಿಂದ ಸಂಭಾವನೆ ಕೊಟ್ಟು ಕರೆಸಬೇಕಿತ್ತಾ?" ಅಂದ್ರು. ಇವರ ಮಾತು ಕೇಳಿದ ಮೇಲೆ ಬೆಂಗಳೂರಿನ ನಿರೂಪಕರು ವೇದಿಕೆ ಮೇಲೆ ಹತ್ತಲೇ ಇಲ್ಲ.

ಹೊಸ ತಲೆಮಾರಿನ ಹುಡುಗರ ಬಗ್ಗೆ ಕೇಶವಮೂರ್ತಿಯವರಿಗೆ ಅಪಾರವಾದ ಭರವಸೆ ಇತ್ತು, ಅಂಥ ಚಿಕ್ಕಚಿಕ್ಕ ಘಟಕಗಳನ್ನು ಅವರು ಒಗ್ಗೂಡಿಸಲಿಕ್ಕೆ ಹೆಣಗಾಡತ್ತಾ ಇದ್ದರು. ಪ್ರತಿರೋಧವೇ ಇಲ್ಲದ ವ್ಯವಸ್ಥೆಯ ಬಗ್ಗೆ ಅವರಿಗೆ ಬೇಸರವಿತ್ತು, ಇದಕ್ಕಾಗಿ ಒಂದಿಷ್ಟು ಹುಡುಗರನ್ನು ತಯಾರಿಸಬೇಕೆಂದು ಚಡಪಡಿಸುತ್ತಿದ್ದರು. ಅದನ್ನು ಸಾಯುವರೆಗೂ ಬಿಡದೆ ಸಾಧಿಸಿದರು.

ವೈಯಕ್ತಿಕ ಜೀವನದಲ್ಲಿ ಕೇಶವಮೂರ್ತಿ ತುಂಬಾ ನೋವು ಅನುಭವಿಸಿದರೂ ಸಾರ್ವಜನಿಕವಾಗಿ ಅದನ್ನು ಎಲ್ಲಿಯೂ ವ್ಯಕ್ತಪಡಿಸಲಿಲ್ಲ, ಬದಲಿಗೆ ಸಾಮಾಜಿಕ ಜೀವನದಲ್ಲಿ ಆ ನೋವನ್ನು ಮರೆತರು. ಇದ್ದೊಬ್ಬ ಮಗ ಅಪಘಾತದಲ್ಲಿ ತೀರಿಕೊಂಡ ಮೇಲೆ ಸೊಸೆಗೆ ಅರ್ಧ ಪಾಲು ಕೊಟ್ಟು ಮತ್ತೊಂದು ಮದುವೆ ಮಾಡಿದರು. ಇಂಥ ಸಂಗತಿಗಳೆಲ್ಲಾ ಕೇಶವಮೂರ್ತಿಯವರನ್ನು ವ್ಯಕ್ತಿಗತ ಬದುಕಿನ ಆಚೆಯಿಟ್ಟು ನೋಡುವ ಬಗೆಯನ್ನು ಕಲಿಸಿಕೊಡುತ್ತವೆ.

ಮಂಡ್ಯದ ಚಂದದ ಭಾಷೆಯನ್ನು ಕೇಶವಮೂರ್ತಿಯವರು ತಮ್ಮ ವಿನೋದ ಸಾಹಿತ್ಯದಲ್ಲಿ ಅದ್ಭುತವಾಗಿ ಬಳಸಿದರು. ಮಂಡ್ಯದ ಗ್ರಾಮೀಣ ಭಾಷೆ ಅದು ಸಿನಿಮಾದಲ್ಲಿ ಬರುವ ತುಂಡು ತುಂಡು ಭಾಷೆಯಲ್ಲ, ಅದನ್ನು ಸಮಗ್ರವಾಗಿ ಅನುಭವಿಸಬೇಕಾದರೆ ಕೇಶವಮೂರ್ತಿಯವರ ಬರಹ ಓದಬೇಕು. ಕಟ್ಟೆಪುರಾಣದ ಚಂದ್ರೇಗೌಡರು ಒಮ್ಮೆ ಸಮಾರಂಭದಲ್ಲಿ ಹೇಳಿದ ಮಾತು ನೆನಪಾಗುತ್ತದೆ. "ನನಗೆ ಮಂಡ್ಯದ ಭಾಷೆ ಇಷ್ಟೊಂದು ಸುಂದರವಾಗಿ ಬರಿಯಬಹುದು ಅಂಥ ಕಲಿಸಿಕೊಟ್ಟವರೇ ಕೇಶವಮೂರ್ತಿ ಗಳು" ಅಂತ.

ಎಂಜಿನಿಯರಿಂಗ್ ಓದಿದರೂ ಅವರು ಇಂಜಿನಿಯರ್ ಆಗಿ ಕಾಣಿಸಿಕೊಳ್ಳಲಿಲ್ಲ, ಪ್ರಾಧ್ಯಾಪಕರಾಗಿದ್ದರೂ ವಿಶ್ವವಿದ್ಯಾಲಯದ ಭಾಷೆಯಲ್ಲಿ ಮಾತನಾಡಲಿಲ್ಲ, ಬಹಳ ಮುಖ್ಯವಾಗಿ ಅವರು ಊರು ಬಿಟ್ಟು ಬೆಂಗಳೂರಿಗೆ ಹೋಗಲಿಲ್ಲ, ಹಾಗಂತ ಮಂಡ್ಯದ ಬಗ್ಗೆ ಅವರಿಗೆ ಹತಾಶೆಯೂ ಇರಲಿಲ್ಲ, ಇದ್ದಂಗ ಇದ್ದು ಇಲ್ಲಿ ನನಗೆ ಸಾಧ್ಯವಿದ್ದಷ್ಟನ್ನು ಮಾಡಿಯೇ ತೀರುತ್ತೇನೆಂದು ಮಾಡಿಯೇ ತೋರಿಸಿದರು.


ಅವರಿಗೆ ವ್ಯವಹಾರ ಗೊತ್ತಿರಲಿಲ್ಲ, ಪತ್ರಿಕೆ ಮಾಡಿದರು, ಸಾಲಕ್ಕಾಗಿ ಮಾರಿದರು. ಪ್ರಾಧ್ಯಾಪಕರಾದರೂ ಸಂಬಳದಾರರಾಗಲಿಲ್ಲ, ನಾಲ್ಕು ಜನ ವ್ಯವಹಾರದ ಮಾತನಾಡುತ್ತಿದ್ದರೆ ಅವರು ಏಕದಂ ಮೌನಿಯಾಗುತ್ತಿದ್ದರು ಇಲ್ಲವೇ ಎದ್ದು ಹೋಗುತ್ತಿದ್ದರು. ಅಪಾರವಾದ ಅವರ ನೈತಿಕ ಸಿಟ್ಟಿನ ಕಾರಣಕ್ಕಾಗಿ ಕೆಲವರು ಅವರ ಜೊತೆ ಮಾತನಾಡಲೂ ಹೆದರುತ್ತಿದ್ದರು. ಆಶಾವಾದಿಯಾದ ಕೇಶವಮೂರ್ತಿ ನಾಲ್ಕಕ್ಷರ ಬಲ್ಲ ಹುಡುಗನ ಹೆಗಲ ಮೇಲೆ ಕೈಯಿಟ್ಟು ಮಾತಾಡಿಸುವ ಪ್ರೀತಿಯುಳ್ಳವರಾಗಿದ್ದರು.

ಓದು ಮತ್ತು ಹೋರಾಟಗಳಿಂದ ರೂಪುಗೊಂಡ ಕೇಶವಮೂರ್ತಿ ಮಂಡ್ಯದ ನಿಜವಾದ ದಾರಿಯಾಗಿದ್ದರು. ರಾಜಕೀಯ ಹಾಗೂ ಸಿನಿಮಾ ಪರಿಭಾಷೆಯಲ್ಲಿ 'ಮಂಡ್ಯದ ಗಂಡು' ಪದವನ್ನು ಪದೇ ಪದೇ ಬಳಸಲಾಗುತ್ತದೆ. ಈ ಪರಿಭಾಷೆಯಿಂದ ಬೇರ್ಪಡಿಸಿ ಮಂಡ್ಯದ ಗಂಡು ಪದವನ್ನು ಬಳಸುವುದಾದರೆ ಕೇಶವಮೂರ್ತಿಯವರನ್ನು ನಿಸ್ಸಂದೇಹವಾಗಿ 'ಮಂಡ್ಯದ ಗಂಡು' ಅಂತ ಕರಿಬಹುದು.

ಇತಿಹಾಸದ ಹಲವು ಹೋರಾಟಗಳಿಗೆ ಸಾಕ್ಷಿಯಾದ ನೆಲದಿಂದ ಒಂದು ಜೀವ ಎದ್ದುಹೋಗಿದೆ. ಜೀವ ಮಾತ್ರ ಹೋಗಿದೆ, ಆದರೆ ಅವರ ಆಲೋಚನೆ ಅಳಿಸಿಹೋಗಲು ಬಿಡಬಾರದು. ಮಂಡ್ಯದ ಮುಂದೆ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಿದೆ. ಮಂಡ್ಯದ ಜನ ಅದನ್ನು ಬಿಡಿಸಬೇಕೆನ್ನುವುದೇ ನನ್ನಾಸೆ.

■ ಬಸವರಾಜ ಹೂಗಾರ, ಧಾರವಾಡ

ಎಚ್ಚೆಲ್ಕೆ ಮತ್ತು ಇಟ್ಟಿಗೆ ಸಭೆ



ಲಂಕೇಶರು ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ ... ಪ್ರತಿಭಟನಾ ಕಾರ್ಯಕ್ರಮ ರೂಪಿಸಿ, ಚಿಡ್ಡಿಗಳ ...ಸವಾದ ಶಿವಮೊಗ್ಗದಲ್ಲೇ ಒಂದು ಬೃಹತ್ ...ಟನಾ ಸಭೆ ಏರ್ಪಡಿಸುವ ತೀರ್ಮಾನ ಮಾಡಿ, ... ಪೂರ್ವಭಾವಿ ಚಟುವಟಿಕೆಗಾಗಿ ಶಿವಮೊಗ್ಗಕ್ಕೆ ...ವಮೂರ್ತಿ ಮತ್ತು ರಾಮದಾಸರನ್ನು ಕಳಿಸಿದ್ದರು. ...ಲ್ಲಾ ಈ ಪ್ರಾಂತಕ್ಕೆ ಬಂದಮೇಲೆ ಕಡಿದಾಳು ...ಣ್ಣನವರ ಮನೆಗೆ ಭೇಟಿ ಕೊಡಲೇಬೇಕು. ಅದೊಂದು ...ಲ. ಅಂದರೆ ನಮ್ಮ ವಿರುದ್ಧ ನಾವೇ ಹೋರಾಡುತ್ತಿದ್ದ ಕಾಲ. ನಂಜುಂಡಸ್ವಾಮಿಯವರ ಕನ್ನಡ ದೇಶ ಮತ್ತು ಲಂಕೇಶರ ಪ್ರಗತಿ ರಂಗ ಭವಿಷ್ಯದ ಯಾವ ಅನಾಹುತದ ನೆದರಿಲ್ಲದೆ ಜಗಳಕ್ಕೆ ಬಿದ್ದ ಕಾಲ. ಅಂತಹ ಸಮಯದಲ್ಲಿ ಪ್ರಗತಿರಂಗದ ಸಂಚಾಲಕರಿಬ್ಬರು ಶಿವಮೊಗ್ಗಕ್ಕೆ ಬಂದು, ಇಟ್ಟಿಗೆ ವಿರುದ್ಧ ಪ್ರತಿಭಟನೆಗೆ ಸೂಕ್ತ ಪ್ರದೇಶ ಮತ್ತು ಸೂಕ್ತ ಕಾಲವೆಂದು ತೀರ್ಮಾನಿಸಿ, ಕಡಿದಾಳು ಶಾಮಣ್ಣನವರ ಮನೆಗೆ ಹೋದರು. ಶಾಮಣ್ಣ ದಂಪತಿಗಳು ಏಡಿ ಸಾರಿನ ಅಡುಗೆ ಮಾಡಿಕೊಂಡು ಕಾಯುತ್ತಿದ್ದರು. ಸಹಜವಾಗಿ ತಮ್ಮ ತಮ್ಮ ನಾಯಕರುಗಳ ಅಸಾಮಾನ್ಯ ವಿದ್ವತ್ತು ಮತ್ತು ಹಠಮಾರಿತನಗಳು ಬಗ್ಗೆ ಹರಟೆ ನಂತರ ಸಮೀಪದಲ್ಲೇ ಇದ್ದ ಸುಂದರೇಶ್ ಮನೆಗೆ ಹೋದರು.

ಸುಂದರೇಶ್ ಎಲ್ಲರೂ ಪ್ರೀತಿಸುವ ಮತ್ತು ಗೌರವ ಕೊಡುವಂತಹ ದೊಡ್ಡ ಮನಸ್ಸಿನ ವ್ಯಕ್ತಿ, ತಮ್ಮ ಹಳೆಯ ಗೆಳೆಯರು ಮನೆಯ ಹತ್ತಿರಕ್ಕೆ ಬಂದಾಗ ಅವರ ಸಂಭ್ರಮ ಹೇಳತೀರದಾಗಿತ್ತು, "ರಾಂದಾಸು ಏನ್ರಿ, ದಿಢೀರನೆ ಬಂದಿದ್ದೀರಲ್ಲಾ" ಎಂದರು. ಆಗ ರಾಂದಾಸ್ "ನೋಡಿ ಅಯೋಧ್ಯೆಲಿ ರಾಮಮಂದಿರ ಕಟ್ಟಕ್ಕೆ ಇಲ್ಲಿಂದ ಇಟ್ಟಿಗೆ ತಗೊಂಡು ದಾರಿ ಉದ್ದಕ್ಕೂ, ಗಲಭೆ ಮಾಡಿಕೊಂಡು ದೇಶಕ್ಕೆ ಕೊಳ್ಳಿ ಇಡತಾ ಇದಾರೆ. ಇಟ್ಟಿಗೆ ಹೋಗೋದನ್ನ ತಡಿಬೇಕು. ಅದ್ಕೆ ನೀವು ನಮ್ಮ ಜೊತೆ ಬನ್ನಿ. ಶಿವಮೊಗ್ಗದಲ್ಲೊಂದು ಪ್ರತಿಭಟನೆ ಸಭೆ ಮಾಡಣ" ಎಂದರು. ಕೂಡಲೇ ಏರುದನಿಯಲ್ಲಿ ಸುಂದರೇಶ್ "ಏನು ಮಾಡ್ತ ಅವ್ರುನ್ರಿ ಅವ್ರುನು ಶೆಟ್ರಿ? ಒಳ್ಳೆ ರಾಜಭವನ ಸಿಕ್ಕದೆ ಅಂತ ಮನಿಗಿದ್ದನೇನೊ" ಎಂದು ಅಂದಿನ ರಾಜ್ಯಪಾಲ ವೆಂಕಟಸುಬ್ಬಯ್ಯನ ಮೇಲೆ ರೇಗಿದರು. ಕಡೆಗೆ "ನಾವು ನಿಮ್ಮ ಜೊತೆ ಬರಲು ನಮ್ಮ ನಾಯಕರ ಒಪ್ಪಿಗೆ ಬೇಕು. ಲಂಕೇಶ್ ಮತ್ತು ನಂಜುಂಡಸ್ವಾಮಿಯವರ ಜಗಳ ನೋಡಿದರೆ ಅದೂ ಸಾಧ್ಯವಾಗಲಾರದು" ಎಂಬ ಅಸಹಾಯಕ ಮಾತುಗಳನ್ನಾಡಿದರು.

ಕಡೆಗೆ "ಇಷ್ಟೊತ್ತಿನಲ್ಲಿ ವಾಪಸು ಹೋಗುವುದು ಬೇಡ. ಇಲ್ಲೇ ಇದ್ದು ಬೆಳಗ್ಗೆ ಹೋಗಿ" ಎಂದು ಸುಂದರೇಶ್ ಎಷ್ಟು ಕೇಳಿಕೊಂಡರೂ ಎಚ್ಚೆಲ್ಕೆ ಮತ್ತು ರಾಮದಾಸ್ ಹೊರಟೇಬಿಟ್ಟರು. ಆ ಕತ್ತಲೆಯಲ್ಲಿ ತೋಟದ ಮನೆ ಬಾಗಿಲಲ್ಲಿ ನಿಂತ ಸುಂದರೇಶ್ "ರೀ ರಾಂದಾಸು, ಇಷ್ಟೊತ್ತಿನಲ್ಲಿ ಎಲ್ಲಿಗೋಗ್ತಿರಿ. ಬನ್ರಿ" ಎಂಬ ದನಿ ಬಹಳ ದೂರ ಹಿಂಬಾಲಿಸಿತು. ಬರುವಾಗ ದಾರಿಯಲ್ಲಿ ಹೆಚ್ಚೆಲ್ಕೆಯವರು "ಚಂದ್ರೇಗೌಡ್ರೆ, ನೀವು ಇನ್ನೂ ಓದಾಡಬೇಕು. ಹಿಂಗಿದ್ರಾಗಲ್ಲ" ಎಂದರು. "ಸಾರ್, ನಾನು ಲೈಬ್ರರಿ ಇಲಾಖೆಲಿದ್ದಿನಿ. ನನ್ನ ಚಟುವಟಿಕೆ ನೋಡಿ ಯಾರೊ ಸರಕಾರಕ್ಕೆ ದೂರು ಕೊಟ್ಟರೋದ್ರಿಂದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ತನಿಖೆ ಮಾಡಕ್ಕೆ ಆಜ್ಞೆ ಮಾಡ್ಯವ್ರೆ. ನಮ್ಮ ಇಲಾಖೆ ನಿರ್ದೇಶಕರಾದ ಮಲ್ಲೇಶಪ್ಪನವರ ಔದಾರ್ಯದಿಂದ ಯಂಗೋ ಬಚಾವಾಗಿದ್ದಿನಿ. ಅದ್ರು ಓಡಾಡ್ತಯಿದ್ದಿನಿ ಸಾರ್" ಎಂದೆ. ಕೇಶವಮೂರ್ತಿಯವರು ಮತ್ತೆ ಮಾತನಾಡಲಿಲ್ಲ.

ಆದರೆ ಪ್ರತಿಭಟನಾ ಸಭೆ ದಿವಸ ನಮ್ಮ ನಮ್ಮ ಸಂಸಾರದವರನ್ನೆಲ್ಲಾ ಕರೆಸಿ ಮೆರವಣಿಗೆ ಸೇರಿಸಿದ್ದಾಯ್ತು. ಆಗ ಶಿವಮೊಗ್ಗದ ಮೂಲೆಮುಡಕಲನ್ನೆಲ್ಲಾ ಸುತ್ತಿ ಮುನಿಸಿಪಾಲಿಟಿ ಜಾಗಕ್ಕೆ ಬಂದಾಗ ಕತ್ತಲಾಗಿತ್ತು. ಹೆಚ್ಚೆಲ್ಕೆ ಮತ್ತು ಲಂಕೇಶ್ ಅದ್ಭುತವಾಗಿ ಮಾತನಾಡಿದರು; ಅದಕ್ಕೂ ಮೊದಲು ಒಂದು ಕೂಗು ಮಾರಿ ಪ್ರತಿಭಟನೆ ಉದ್ದೇಶ ಮರೆತು "ಗುಂ" ಕಾಲದ ರಾಜಕಾರಣದ ಭಾಷಣ ಬಿಗಿಯಿತು. ಲಂಕೇಶ್ ಕರೆ ತರುತ್ತಿದ್ದ ಈ ಅಸಂಬದ್ಧವನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ, ಇದಕ್ಕೆ ಊಟ ಮಾಡಿ ಕಳಿಸುವ ಜವಾಬ್ದಾರಿಯೂ ನಮ್ಮ ಮೇಲೆ ಬೀಳುತ್ತಿತ್ತು, ಹೋಗುವಾಗ ನನ್ನ ವಾಟಸ್ಸೆ ತರ "ಟ್ವೆಂಟಿ ರುಪೀಸ್ ಇದ್ರೆ ಕೊಡಿ" ಎನ್ನುತ್ತಿತ್ತು, ಈಗದು ಎಲ್ಲಿ ಸೇರಬೇಕೊ ಅಲ್ಲಿ ಸೇರಿ ತನ್ನ ಬಾಯಿ ಕೆಲಸ ಮುಂದುವರಿಸಿದೆ. ಪ್ರಗತಿರಂಗದ ಜೊತೆ ಇಂತ ಅನಿಷ್ಟ ನೆನಪುಗಳು ಕಾಡುವುದೊಂದು ವಿಪರ್ಯಾಸ!

■ ಬಿ.ಚಂ

ಕೊಡಗು: ಪರಿಸರ ಸೂಕ್ಷ್ಮ ಪ್ರದೇಶ ಎಂಬ ಗುಮ

ಪಶ್ಚಿಮಘಟ್ಟದ ಪ್ರದೇಶದಲ್ಲಿ ವಾಸಿಸುವ ಮತ್ತು ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ರೈತಾಪಿ ವರ್ಗಕ್ಕೆ ಮತ್ತೆ ಆತಂಕವನ್ನು ಕೇಂದ್ರ ಸರಕಾರ ಸೃಷ್ಟಿಸಿದೆ. ಕಸ್ತೂರಿ ರಂಗನ್ ಸಮಿತಿ ವರದಿಯ ಆಧಾರದಲ್ಲಿ ಈ ಭಾಗದಲ್ಲಿ ಹಲವು ಗ್ರಾಮಗಳನ್ನು ಸೂಕ್ಷ್ಮ ಪರಿಸರ ತಾಣ ಎಂದು ಘೋಷಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಮೂರನೆಯ ಕರಡು ಅಧಿಸೂಚನೆಯನ್ನು ಕೇಂದ್ರ ಪರಿಸರ ಖಾತೆ ಹೊರಡಿಸಿದೆ. ಜೊತೆಗೆ ಇದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಲು 60 ದಿನಗಳ ಸಮಯಾವಕಾಶವನ್ನು ನೀಡಿದೆ.

ಎಂದಿನಂತೆ ನಮ್ಮ ಕರ್ನಾಟಕ ಸರಕಾರ ನಿದ್ರಾವಸ್ಥೆಯಲ್ಲಿ ಇದೆ. ಕರ್ನಾಟಕ ರಾಜ್ಯದ ಅರಣ್ಯ ಮತ್ತು ಪರಿಸರ ಖಾತೆಯ ಸಚಿವ ರಮಾನಾಥ್ ರೈ ಈಗ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಆದರೆ ಅರಣ್ಯ ಇಲಾಖೆ ಬಹಳ ಹಿಂದಿನಿಂದಲೇ ಅನಾರೋಗ್ಯದಿಂದಿದೆ. ಸಾರ್ವಜನಿಕ ಕಾಳಜಿಗಿಂತ ಅರಣ್ಯ ಇಲಾಖೆಗೆ ಇರುವುದು ಸಾರ್ವಜನಿಕರಿಗೆ ಕಿರುಕುಳ ನೀಡುವ ಆಸಕ್ತಿ. ಅರಣ್ಯ ಇಲಾಖೆ ಬಿಳಿಯಾನೆಗಳಿಂದ ತುಂಬಿಹೋಗಿದೆ. ಅರಣ್ಯವನ್ನು ನಿಜ ಅರ್ಥದಲ್ಲಿ ಸಂರಕ್ಷಿಸುವಂತಹ ಕೆಳ ಹಂತದ ಸಿಬ್ಬಂದಿ ವರ್ಗದವರು ಇಲ್ಲ. ಎಲ್ಲಾ ಐ.ಎಫ್.ಎಸ್. ಅಧಿಕಾರಿಗಳು ಆಯಕಟ್ಟಿನ ಸ್ಥಾನಗಳಲ್ಲಿ ಕುಳಿತುಕೊಂಡು ಯೋಜನೆಗಳನ್ನು ರೂಪಿಸುವುದು ಮತ್ತು ಹಣ ಲಪಟಾಯಿಸುವುದರಲ್ಲಿ ತಲ್ಲೀನರಾಗಿದ್ದಾರೆ. ಹಾಗಾಗಿ ಜನಸಾಮಾನ್ಯರ ಸಂಕಷ್ಟಗಳು ಅವರ ಗಮನಕ್ಕೆ ಬರುವುದಿಲ್ಲ.

ಕೇಂದ್ರ, ರಾಜ್ಯ ಸರಕಾರದಿಂದ ವಂಚನೆ


ಸೂಕ್ಷ್ಮ ಪರಿಸರ ತಾಣದ ಘೋಷಣೆಯ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನರಿಗೆ ವಂಚಿಸಿವೆ. ಆರಂಭದಿಂದಲೂ ತನ್ನ ನಿರ್ಧಾರಗಳನ್ನು ಜನರ ಮೇಲೆ ಹೇರುವ ಸಂಸ್ಕೃತಿಯನ್ನು ಪಾಲಿಸುತ್ತಾ ಬಂದಿದ್ದು, ಈಗಲೂ ಮತ್ತೆ ಅದೇ ತಪ್ಪನ್ನು ಮಾಡುತ್ತಿವೆ. ಪಶ್ಚಿಮಘಟ್ಟ ಪ್ರದೇಶ ಸಂರಕ್ಷಣೆಯ ವಿಚಾರದ ಬಗ್ಗೆ ಯಾರಿಗೂ ಅಭಿಪ್ರಾಯ ವ್ಯತ್ಯಾಸವಿಲ್ಲ. ಪಶ್ಚಿಮಘಟ್ಟದಲ್ಲಿ ಇರುವ ಅರಣ್ಯ ಪ್ರದೇಶಗಳು ಸಂರಕ್ಷಣೆಯಾಗಬೇಕು ಮತ್ತು ಇನ್ನಷ್ಟು ದಟ್ಟ ಅರಣ್ಯವಾಗಿ ಬೆಳೆಯಬೇಕು. ಜೊತೆಗೆ ಕಾಡಿನಲ್ಲಿ ವಾಸಿಸುವ ಪ್ರಾಣಿಗಳಿಗೆ ಆಹಾರ, ನೀರು ಸಿಗುವಂತೆ ಆಗಬೇಕು ಎನ್ನುವ ವಿಚಾರದಲ್ಲಿ ಯಾರೂ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ.

ಆದರೆ ಅರಣ್ಯ ವಲಯವನ್ನು ಸಂರಕ್ಷಿಸುವ ವಿಚಾರವನ್ನು ಮುಂದಿಟ್ಟುಕೊಂಡು ಖಾಸಗಿ ಜಮೀನಿನ ಮೇಲೆ ಆಧಿಪತ್ಯವನ್ನು ಸಾರಲು ಅರಣ್ಯ ಇಲಾಖೆ ಹೊರಟಿರುವುದಕ್ಕೆ ಆಕ್ಷೇಪಗಳು ಇವೆ. ಖಾಸಗಿ ಜಮೀನು ಕೃಷಿಗೆ ಒಳಪಟ್ಟಿದ್ದು, ಅಲ್ಲಿ ಕೃಷಿ ಮಾಡುವ ವಿಚಾರದಲ್ಲಿ ನಿಯಮಗಳು, ನಿರ್ಬಂಧಗಳು ಮತ್ತು ನಿಯಂತ್ರಣಗಳನ್ನು ಹೇರುತ್ತದೆ ಎನ್ನುವ ಆತಂಕ ಇಲ್ಲಿಯ ಜನರಲ್ಲಿ ಇದೆ.

ಆರು ರಾಜ್ಯಗಳಲ್ಲಿ ಹರಡಿಕೊಂಡಿರುವ ಪಶ್ಚಿಮಘಟ್ಟ ಪ್ರದೇಶದಲ್ಲಿ ಒಟ್ಟು ನಾಲ್ಕು ಸಾವಿರಕ್ಕೂ ಹೆಚ್ಚು ಗ್ರಾಮಗಳಿವೆ. ಅವುಗಳಲ್ಲಿ 1,700 ಗ್ರಾಮಗಳು ಕರ್ನಾಟಕದಲ್ಲಿಯೇ ಇವೆ. ಉತ್ತರ ಕನ್ನಡದಲ್ಲಿ ಹೆಚ್ಚಿನ ಪ್ರದೇಶ ಈ ವ್ಯಾಪ್ತಿಗೆ ಒಳಪಡುತ್ತದೆ. ಆದರೆ ಹೆಚ್ಚಿನ ಆತಂಕವನ್ನು ವ್ಯಕ್ತಪಡಿಸುತ್ತಿರುವ ಜಿಲ್ಲೆ ಕೊಡಗು. ಇದಕ್ಕೆ ಕಾರಣ ಕೊಡಗು ಅತ್ಯಂತ ಪುಟ್ಟ ಜಿಲ್ಲೆಯಾಗಿದ್ದು, 55 ಗ್ರಾಮಗಳು ಸೂಕ್ಷ್ಮ ಪರಿಸರ ವಲಯದಲ್ಲಿ ಗುರುತಿಸಲ್ಪಟ್ಟಿವೆ.

ಇದಕ್ಕೆಲ್ಲಾ ಮೂಲಕಾರಣ ಯುನೆಸ್ಕೋದ ವಿಶ್ವಪಾರಂಪರಿಕ ತಾಣದ ಪಟ್ಟ ಎನ್ನುವ ಬಿಸಿಲು ಕುದುರೆ ಏರಲು ಸರ್ಕಾರಗಳು ಹೊರಟಿರುವುದು. ಕೊಡಗಿನಲ್ಲಿರುವ ಹಲವು ಡೋಂಗಿ ಪರಿಸರವಾದಿಗಳು ಸುಮಾರು 2004ರಲ್ಲಿ ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ತಲಕಾವೇರಿಯನ್ನು ಸೇರಿಸಿ 'ಗ್ರೇಟರ್ ತಲಕಾವೇರಿ' ಎಂದು ಘೋಷಿಸಬೇಕು ಮತ್ತು ಇದರ ಮೇಲೆ ನಿಯಂತ್ರಣಗಳನ್ನು ಹೇರಬೇಕು ಎಂದು ಏಕಪಕ್ಷೀಯವಾಗಿ ರಾಜ್ಯ ಸರಕಾರದ ಮೇಲೆ ಪ್ರಭಾವವನ್ನು ಬೀರಿದರು. ಪರಿಸರವಾದ ಒಂದು ಆಕರ್ಷಣೀಯ ದಂಧೆಯಾಗಿದೆ. ಕಾರಣ ಯಥೇಚ್ಛ ವಿದೇಶಿ ಹಣಕಾಸಿನ ಹರಿವು, ವಿದೇಶಿ ಪ್ರವಾಸ, ಐಷಾರಾಮಿ ಹೋಟೇಲುಗಳಲ್ಲಿ ತಂಗಲು ವ್ಯವಸ್ಥೆ ಐಷಾರಾಮಿ ವಾಹನಗಳ ಸೌಲಭ್ಯ ಮತ್ತು ಸಂಪರ್ಕಗಳ ಬೆಳವಣಿಗೆ ಇದರಿಂದ ಸಾಧ್ಯವಾಗುತ್ತದೆ.

ನಮ್ಮ ರಾಜ್ಯದ ನಂಬರ್ 1 ಮುಖ್ಯಮಂತ್ರಿ ಎನಿಸಿಕೊಂಡಿದ್ದ (?) ಎಸ್.ಎಂ. ಕೃಷ್ಣ ಸರಕಾರ ಅಸ್ತಿತ್ವದಲ್ಲಿ ಇದ್ದಾಗ, ವಿಧಾನಸೌಧದ ಕೊಠಡಿ 204ರಲ್ಲಿ ಈ ಬಗ್ಗೆ ಸಭೆ ನಡೆದಿತ್ತು, ಆದರೆ ಸಭೆಯ ಬಗ್ಗೆ ಕೊಡಗಿನ ಜನಪ್ರತಿನಿಧಿಗಳಿಗೆ ಯಾವುದೇ ಮಾಹಿತಿ ಇರಲಿಲ್ಲ, ಅಂದರೆ ಪರ್ಯಾಯ ಸರಕಾರವನ್ನು ಡೋಂಗಿ ಪರಿಸರವಾದಿಗಳು ನಡೆಸುತ್ತಾ ಬಂದಿದ್ದಾರೆ ಎನ್ನುವುದು ಖಚಿತ. ಆ ಸಭೆಯಲ್ಲಿ ಗ್ರೇಟರ್ ತಲಕಾವೇರಿ ಘೋಷಣೆಯಾದ ನಂತರ, ಯುನೆಸ್ಕೋದಿಂದ ವಿಶ್ವಪಾರಂಪರಿಕ ತಾಣದ ಪಟ್ಟ



ಪಡೆಯುವುದರ ಜೊತೆಯಲ್ಲಿ ಸಾಕಷ್ಟು ಹಣಕಾಸಿನ ಸೌಲಭ್ಯವನ್ನೂ ಪಡೆದು, ಈ ಭಾಗದ ಜನರನ್ನು ತೆರವುಗೊಳಿಸುವುದು ಎನ್ನುವ ವಿಚಾರವೂ ಚರ್ಚೆಯಾಗಿತ್ತು. ಇದರ ಮುಂದುವರಿದ ಭಾಗವೇ ಪಶ್ಚಿಮಘಟ್ಟದ 39 ತಾಣಗಳನ್ನು ಯುನೆಸ್ಕೋ ವಿಶ್ವಪಾರಂಪರಿಕ ನೈಸರ್ಗಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಳಿಸುವ ಪ್ರಕ್ರಿಯೆಯಾಗಿದೆ.

ಆಶ್ಚರ್ಯವೆಂದರೆ ಯಾವ ಪ್ರದೇಶವನ್ನು ಸೂಕ್ಷ್ಮ ಪರಿಸರ ತಾಣ ಎಂದು ಘೋಷಿಸಲು ಸಿದ್ಧತೆಗಳನ್ನು ಮಾಡುತ್ತಿದ್ದಾರೋ, ಆ ಭಾಗದಲ್ಲಿ ಜನರು ವಾಸಿಸುತ್ತಿದ್ದಾರೆ ಎಂಬ ಪರಿವೆಯೇ ಇಲ್ಲದಂತೆ ತೀರ್ಮಾನವನ್ನು ಸರಕಾರಗಳು ಮತ್ತು ಪರಿಸರವಾದಿಗಳು ತೆಗೆದುಕೊಳ್ಳುತ್ತಿದ್ದಾರೆ. ಸರಕಾರವನ್ನು ಪರಿಸರವಾದಿಗಳು ನಿಯಂತ್ರಿಸುತ್ತಿದ್ದಾರೆ. ಆರೋಗ್ಯಪೂರ್ಣವಾದ ಚರ್ಚೆಗೆ ಅವಕಾಶವೇ ಇಲ್ಲದ ರೀತಿಯಲ್ಲಿ ಎಲ್ಲವನ್ನು ನಿಯಂತ್ರಿಸಲಾಗುತ್ತಿದೆ. ಯಾವುದೇ ಮುಖ್ಯವಾಹಿನಿಯ ಪತ್ರಿಕೆಯನ್ನು ತೆಗೆದು ನೋಡಿದರೆ ಅದರಲ್ಲಿ ಕಂಡುಬರುವುದು ಸೂಕ್ಷ್ಮ ಪರಿಸರ ತಾಣದ ಪರವಾಗಿನ ಲೇಖನಗಳೇ ವಿನಹ, ವಾಸ್ತವ ವಿಚಾರಗಳ ಬಗ್ಗೆ ಚರ್ಚೆಯೇ ಇಲ್ಲ, ತಾವೇ ಬುದ್ಧಿವಂತರು, ಉಳಿದವರೆಲ್ಲ ತಲೆ ಖಾಲಿ ಇರುವವರು ಎನ್ನುವ ಅರ್ಥದಲ್ಲಿ ಬರೆಯುತ್ತಿದ್ದಾರೆ. ಅವರ ಪ್ರಕಾರ ಪಶ್ಚಿಮಘಟ್ಟ ಸಂರಕ್ಷಣೆಯಾದದ್ದು ಕಾನೂನುಗಳ ಮೂಲಕ. ಆದರೆ ವಾಸ್ತವವಾಗಿ ತಲತಲಾಂತರದಿಂದ ಪಶ್ಚಿಮಘಟ್ಟ ಸಂರಕ್ಷಣೆಯಾದದ್ದು ಯಾವ ಕಾನೂನಿನ ಮೂಲಕವೂ ಅಲ್ಲ; ಯಾವ ಪರಿಸರವಾದಿಗಳ ಪರಿಶ್ರಮದಿಂದಲೂ ಅಲ್ಲ ಎಂಬುದು ಅವರಿಗೆ ತಿಳಿದಿಲ್ಲ. ಪರಿಸರ ಮತ್ತು ಅಭಿವೃದ್ಧಿ ಒಂದಕ್ಕೆ ಒಂದು ಪೂರಕವಾಗಿ ಇರಬೇಕು ಎನ್ನುವುದೂ ಅವರಿಗೆ ಗೊತ್ತಿಲ್ಲ.

2011ರಲ್ಲಿ ಮಾಧವ ಗಾಡ್ಗಿಲ್‌ರವರು ಒಂದು ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದ್ದರು. ಈ ಸಮಿತಿ ರಚನೆಯ ವೇಳೆಯಲ್ಲಿ ಎಲ್ಲಾ ಆರು ರಾಜ್ಯಗಳ ಪಶ್ಚಿಮಘಟ್ಟ ವಲಯದಲ್ಲಿ ಸಮಿತಿಯವರು ಸಂಚರಿಸಬೇಕು, ಹಿತಾಸಕ್ತರ

> ಕೊಡಗು ಜಿಲ್ಲೆಗೆ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸೂಕ್ಷ್ಮ ಪರಿಸರ ತಾ ಘೋಷಿಸುವ ಕ್ರಮ ಸರಿಯಲ್ಲ. ಸರಕಾರಗಳು ಒಂದು ಕಡೆ ಜನಸಂಖ್ಯಾ ನಿಯಂತ್ರಣವ ಮಾಡಬೇಕು ಎಂದು ಹೇಳುತ್ತದೆ. ಮತ್ತೊಂದು ಕಡೆ ಎಲ್ಲವನ್ನೂ ಜನಸಂಖ್ಯೆ ಆಧಾರದಲ್ಲಿ ತೀರ್ಮಾನಿಸುತ್ತದೆ. ಹೆಚ್ಚು ಜನಸಂಖ್ಯೆ ಇರುವಲ್ಲಿಗೆ ಎಲ್ಲಾ ಸೌಲಭ್ಯ ದೊರೆಯುತ್ತದೆ. ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳು ಸೌಲಭ್ಯ ವಂಚಿತವಾಗುತ್ತ ಕೊಡಗು ಜಿಲ್ಲೆಯಲ್ಲಿ ಹಿಂದೆ ಮೂರು ವಿಧಾನಸಭಾ ಕ್ಷೇತ್ರಗಳು ಇತ್ತು. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಕೊಡಗು ಜಿಲ್ಲೆ ಒಂದು ಕ್ಷೇತ್ರವ ಕಳೆದುಕೊಳ್ಳ ಬೇಕಾಯಿತು. ಇದು ರಾಷ್ಟ್ರೀಯ ನೀತಿಯಾದ ಜನಸಂಖ್ಯಾ ನಿಯಂತ್ರಣವ ಪಾಲಿಸಿದ್ದಕ್ಕಾಗಿ ಕೊಡಗಿಗೆ ದೊರೆತ ಕೊಡುಗೆಯಾಗಿದೆ.

ಅಭಿಪ್ರಾಯವನ್ನು ಸಂಗ್ರಹಿಸಬೇಕು ಮತ್ತು ಅವರ ಆಕ್ಷೇಪಣೆಗಳನ್ನು ಕೇಳಿದ ನಂತರವಷ್ಟೇ ವರದಿಯನ್ನು ಸಿದ್ಧಪಡಿಸಬೇಕು ಎಂದು ಹೇಳಲಾಗಿತ್ತು, ಈ ಸಮಿತಿ ಮೈಸೂರಿನ ಕೊಡವ ಸಮಾಜದಲ್ಲಿ ಸಭೆ ಸೇರಿ, ಕೊಡಗಿನ ಹೊರಗೆ ವಾಸಿಸುವ ಮತ್ತು ಕೊಡಗಿನ ನಂಟನ್ನು ಕಳೆದುಕೊಂಡಿರುವ 40ರಿಂದ 50 ಜನರ ಅಭಿಪ್ರಾಯವನ್ನು ಸಂಗ್ರಹಿಸಿತು. ಅಭಿಪ್ರಾಯ ನೀಡಿದವರಿಗೂ, ಪಶ್ಚಿಮಘಟ್ಟಕ್ಕೂ ಯಾವುದೇ ಸಂಬಂಧ ಇರಲಿಲ್ಲ, ಮತ್ತೊಂದು ಕಡೆ ಕೇರಳದ ಪೀಚಿಯಲ್ಲಿ ಸಿಟಿಸನ್ ಫೋರಂ ಹೆಸರಿನಲ್ಲಿ ನಾಲ್ಕು ಮಂದಿ ಕೊಡಗಿನ ಡೋಂಗಿ ಪರಿಸರವಾದಿಗಳು ಸೂಕ್ಷ್ಮ ಪರಿಸರತಾಣ ಘೋಷಣೆಯಾಗುವವರೆಗೆ ಕೊಡಗು ಜಿಲ್ಲೆಯಲ್ಲಿಯೇ ಅಭಿವೃದ್ಧಿ ಕಾರ್ಯವನ್ನು ಸ್ಥಗಿತಗೊಳಿಸಬೇಕು ಎಂದು ಹೇಳಿದ್ದರು. ಇದು ಮಾಧವ ಗಾಡ್ಗಿಲ್ ಸಮಿತಿ ಮತ್ತು ಕಸ್ತೂರಿ ರಂಗನ್ ಸಮಿತಿ ಜನಾಭಿಪ್ರಾಯವನ್ನು ಸಂಗ್ರಹಿಸಿದ ಕ್ರಮವಾಗಿತ್ತು.

ಇಷ್ಟೊಂದು ದೋಷಪೂರ್ಣವಾದ ವರದಿಯನ್ನು ಮಾಧವ ಗಾಡ್ಗಿಲ್ ಸಮಿತಿ ನೀಡಿದಾಗ, ಆಕ್ಷೇಪಣೆಗಳು ಬಂದ ಹಿನ್ನೆಲೆಯಲ್ಲಿ ಕಸ್ತೂರಿ ರಂಗನ್ ಸಮಿತಿಯನ್ನು ರಚಿಸಲಾಗಿತ್ತು, ಈಗ ಕಸ್ತೂರಿ ರಂಗನ್ ಸಮಿತಿ ನೀಡಿದ ವರದಿಯ ಆಧಾರದಲ್ಲಿ ಕರಡು ಅಧಿಸೂಚನೆಯನ್ನು ಕೇಂದ್ರ ಸರಕಾರ ಈಗ ಮೂರನೇ ಬಾರಿ ಹೊರಡಿಸಿದೆ.

ಎರಡನೆಯ ಬಾರಿ ಕರಡು ಅಧಿಸೂಚನೆ ಹೊರಡಿಸಿದಾಗ, ಕೇರಳ ಮತ್ತು ಕರ್ನಾಟಕ ಭಾಗದ ಜನತೆ ಪೂರ್ಣವಾಗಿ ಅಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಎಚ್ಚೆತ್ತುಕೊಂಡಿದ್ದರು.



ಹಾಗಾಗಿ ಕೊಡಗು ಜಿಲ್ಲೆಯೊಂದರಿಂದಲೇ ಸುಮ 10 ಸಾವಿರಕ್ಕೂ ಹೆಚ್ಚು ಲಿಖಿತ ಆಕ್ಷೇಪಣೆಗಳು ಸಲ್ಲಿಸಲ್ಪ ರಾಜ್ಯ ಸರಕಾರಕ್ಕೆ ಈ ವಿರೋಧದ ಬಿಸಿ ಮುಟ್ಟಿದ್ದ ಜನಾಭಿಪ್ರಾಯವನ್ನು ಸಂಗ್ರಹಿಸಲು ಮತ್ತು ಸ್ಥಳ ಪರಿಶೀ ನಡೆಸಲು ಒಂದು ಸಂಪುಟ ಉಪಸಮಿತಿಯನ್ನು ರಚಿ ಕಾನೂನು ಸಚಿವರಾದ ಟಿ.ಬಿ.ಜಯಚಂದ್ರ, ಆರ ದೇಶಪಾಂಡೆ, ರಮಾನಾಥ್ ರೈ ಸೇರಿದಂತೆ ಐವರು ಹಿರಿ ಸಚಿವರು ಕರ್ನಾಟಕದ ಪಶ್ಚಿಮಘಟ್ಟ ವಲಯ ಪ್ರವಾಸವನ್ನು ಮಾಡಿದ್ದರು. ಇದಕ್ಕೂ ಮುನ್ನ ಅ ಇಲಾಖೆಯ ಹಿರಿಯ ಅಧಿಕಾರಿಗಳು ಕೂಡ ಜನಾಭಿಪ್ರಾ ಸಂಗ್ರಹಿಸಲು ಪ್ರವಾಸ ಮಾಡಿದ್ದರು.

ಈ ಆಧಾರದಲ್ಲಿ ರಾಜ್ಯ ಸರಕಾರ ಸೂಕ್ಷ್ಮ ಪರ ವಲಯ ಘೋಷಣೆಗೆ ಆಕ್ಷೇಪಣೆಯನ್ನು ಸಲ್ಲಿಸಿತ್ತು. ಅ ಸಮಯಕ್ಕೆ ಸರಿಯಾಗಿ ಆಕ್ಷೇಪಣೆಯನ್ನು ಸಲ್ಲಿಸಿರ ಇದಾದ ನಂತರವೂ ಕೇಂದ್ರ ಸರಕಾರ ಈಗ ಮತ್ತೊ ಮೂರನೆಯ ಬಾರಿಗೆ ಕರಡು ಅಧಿಸೂಚನೆಯನ್ನು ಹೊ ಸಿದೆ. ಇದಕ್ಕೆ ಪ್ರಮುಖವಾದ ಕಾರಣ ಅಂತರರಾಷ್ಟ್ರೀ ಮಟ್ಟದಲ್ಲಿ ಕೇಂದ್ರ ಸರಕಾರದ ಮೇಲೆ ಇದನ್ನು ಜ ಗೊಳಿಸಲು ಇರುವ ಒತ್ತಡ ಎನ್ನಲಾಗಿದೆ. ವಿಶ್ವಪಾರಂಪ ತಾಣದ ಪಟ್ಟ ದೊರೆಯುವಾಗ ಇದ್ದಂತಹ ನಿರ್ಬಂಧ ಪೈಕಿ ಇದು ಒಂದು ಎನ್ನಲಾಗಿದ್ದು, ಆದ್ದರಿಂದ ಕೇ ಸರಕಾರವು ಈ ವಿಚಾರದಲ್ಲಿ ಅಸಹಾಯಕವಾ ಎನ್ನಲಾಗುತ್ತಿದೆ.

ಸೋಂಭೇರಿ ಕರ್ನಾಟಕ ಸರಕಾರ

ಕೇಂದ್ರ ಸರಕಾರಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸ ವಿಚಾರದಲ್ಲಿ ದಕ್ಷಿಣ ಭಾರತದ ಎರಡು ಪ್ರಮು ರಾಜ್ಯಗಳಾದ ಕೇರಳ ಮತ್ತು ಕರ್ನಾಟಕದ ನಡ ಎಷ್ಟೊಂದು ವ್ಯತ್ಯಾಸವಿತ್ತು ಎನ್ನುವುದು ಚರ್ಚಿಸಬೇಕ ವಿಚಾರ. ಕೇರಳ ಸರಕಾರವು ಓಮನ್ ಮತ್ತು ಓಮ ಎಂಬ ಸಮಿತಿಯೊಂದನ್ನು ಪಶ್ಚಿಮಘಟ್ಟ ವಲಯ ಸೂಕ್ಷ್ಮ ಪರಿಸರ ತಾಣವನ್ನಾಗಿ ಘೋಷಿಸಲ್ಪಡುವ ಪ್ರದೇ ವಾಸ್ತವತೆಯನ್ನು ಅರಿತುಕೊಳ್ಳಲು ರಚಿಸಿತ್ತು. ಆ ಸಮಿತಿ ಸೂಕ್ಷ್ಮ ಪರಿಸರ ತಾಣ ಎಂದು ಘೋಷಿಸಲ್ಪಡ ಪ್ರತಿಯೊಂದು ಗ್ರಾಮಕ್ಕೂ ತೆರಳಿ, ಅಲ್ಲಿ ಇರುವ ಅರ ಪ್ರದೇಶವೆಷ್ಟು, ಖಾಸಗಿ ಜಮೀನು ಎಷ್ಟು ಎಂಬು ಸಂಪೂರ್ಣ ಮಾಹಿತಿಯನ್ನು ಪಡೆದು, ನಕ್ಷೆಯನ್ನು ಕೂ ಸಿದ್ಧಪಡಿಸಿ, ಜನಾಭಿಪ್ರಾಯವನ್ನು ಸಂಗ್ರಹಿಸಿ ವರದಿಯ ರಾಜ್ಯ ಸರಕಾರಕ್ಕೆ ಸಲ್ಲಿಸಿತ್ತು.

ಆದರೆ ಕರ್ನಾಟಕದಲ್ಲಿ ಜನರ ಒತ್ತಡಕ್ಕೆ ಮಣಿ ಅಧಿಕಾರಿಗಳ ತಂಡ ಜಿಲ್ಲೆಯ ಕೇಂದ್ರ ಸ್ಥಾನಕ್ಕೆ ಬಂದ ಜನಾಭಿಪ್ರಾಯವನ್ನು ಸಂಗ್ರಹಿಸಿತ್ತು. ಯಾವುದೇ ಒಂ ಪ್ರದೇಶಕ್ಕೂ ಭೇಟಿ ನೀಡಲಿಲ್ಲ, ಅದೇ ರೀತಿಯಲ್ಲಿ ಸಂಪು ಉಪಸಮಿತಿ ಕೂಡ ಕಾರ್ಯ ನಿರ್ವಹಿಸಿತ್ತು. ಹಾಗಾ ಕೇರಳ ರಾಜ್ಯದ ವರದಿಗೂ, ಕರ್ನಾಟಕ ರಾಜ್ಯ ಸರಕಾರ ವರದಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಇದರ ಪರಿಣಾ ಏನು ಎಂದರೆ ಎರಡನೇ ಕರಡು ಅಧಿಸೂಚನೆಯ ಕೇರಳ ರಾಜ್ಯದ 13 ಸಾವಿರ ಚದರ ಕಿ.ಮೀ.ನಷ್ಟು ಪ್ರದೇಶ ಗುರುತಿಸಲ್ಪಟ್ಟಿದ್ದು, ಅಂದಾಜು 3 ಸಾವಿರ ಚದ ಕಿ.ಮೀ.ನಷ್ಟು ಪ್ರದೇಶವು ವಿನಾಯಿತಿಯನ್ನು ಪಡೆಯಿತ ಇದನ್ನು ಕೇರಳ ರಾಜ್ಯ ಸರಕಾರವು ಒಪ್ಪಿಕೊಂಡಿಲ್ಲ. ಈಗಲ ಅವರು ಮತ್ತೆ ಆಕ್ಷೇಪಣೆಯನ್ನು ಸಲ್ಲಿಸಲು ಮುಂದಾಗಿದ್ದ ಜೊತೆಗೆ ಅಲ್ಲಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ.

ಈಗ ಕರ್ನಾಟಕ ಸರಕಾರದ ನಿರ್ಲಕ್ಷ್ಯ ಮನೋಭಾವ ಜನತೆ ಸಂಕಷ್ಟವನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿ ಮುಂದೆಯೂ ಕರ್ನಾಟಕ ರಾಜ್ಯ ಸರಕಾರ ಆಕ್ಷೇಪಣೆಯ ಸರಿಯಾದ ರೀತಿಯಲ್ಲಿ ಸಲ್ಲಿಸುತ್ತದೆ ಎನ್ನುವುದಕ್ಕೆ ಯಾವುದ ಮುನ್ಸೂಚನೆಗಳು ಇಲ್ಲ. ಅವರಿಗೆ ಮಲೆನಾಡು ಭಾಗ ಜನಜೀವನದ ಬಗ್ಗೆ ಕಾಳಜಿ ಇಲ್ಲ.

⏭ 08

ಪ್ರತಾಪ ಸಿಂಹನ ಹೆಗಲು ಎಲ್ಲಿ?


ಮಡಿಕೇರಿಯಲ್ಲಿ ಎರಡು ವರ್ಷಗಳ ಹಿಂದೆ ಕಸ್ತೂರಿ ರಂಗನ್ ವರದಿಯನ್ನು ವಿರೋಧಿಸಿ ಬೃಹತ್ ಪ್ರತಿಭಟನೆಯೊಂದನ್ನು ನಡೆಸಲಾಗಿತ್ತು, ಈ ಪ್ರತಿಭಟನಾ ಸಭೆಯಲ್ಲಿ ಕಡೂರಿನ ಶಾಸಕ ವೈ.ಎಸ್.ವಿ. ದತ್ತ ಕೂಡ ಭಾಗವಹಿಸಿದ್ದರು. ಈ ಭಾಗದ ಸಂಸದರಾದ ಪ್ರತಾಪ ಸಿಂಹ, ಶಾಸಕರುಗಳಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಮಾಜಿ ಶಾಸಕರಾದ ಎ.ಕೆ. ಸುಬ್ಬಯ್ಯ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷದವರು ಸೇರಿದ್ದರು. ಕಾಂಗ್ರೆಸ್ ನಾಯಕರು ಅಸ್ಪೃಶ್ಯತೆಯನ್ನು ನಾಯಕರ ಮಟ್ಟದಲ್ಲಿ ತೋರಿದ್ದರೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಸಭೆಯಲ್ಲಿ ರಾಜಕೀಯವನ್ನು ಬೆರೆಸದೆ ಎಲ್ಲರೂ ಒಕ್ಕೊರಲಿನಿಂದ ಕಸ್ತೂರಿ ರಂಗನ್ ವರದಿಯನ್ನು ವಿರೋಧಿಸುವ ನಿರ್ಣಯವನ್ನು ಕೈಗೊಂಡಿದ್ದರು. ಆದರೆ ವಿಷಕಾರುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ಮತ್ತು ಅನವಶ್ಯಕವಾಗಿ ಗೊಂದಲವನ್ನು ಸೃಷ್ಟಿಸುವ ಮನೋಭಾವದ ಪ್ರತಾಪ ಸಿಂಹ, ಹಿಂದಿನ ಸರಕಾರದ ಮತ್ತು ಹಿಂದಿನ ಸಂಸದರ ವಿಚಾರವನ್ನು ಪ್ರಸ್ತಾಪಿಸುವುದರ ಮೂಲಕ ಸ್ವಪಕ್ಷೀಯರಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರ ಸಿಟ್ಟಿಗೆ ಒಳಗಾಗಿದ್ದರು.

ಪ್ರತಾಪ ಸಿಂಹ ಬಾಲಿಶವಾಗಿ ವರ್ತಿಸಿದ್ದರಿಂದ ಬೇಸತ್ತಿದ್ದ ವೈ.ಎಸ್.ವಿ.ದತ್ತ ಸಭೆಯಿಂದ ನಿರ್ಗಮಿಸಿದ್ದರು. ಇದು ಕೆ.ಜಿ. ಬೋಪಯ್ಯನವರ ಅಸಹನೆಗೆ ಕಾರಣವಾಗಿತ್ತು, ಹಾಗಾಗಿ ವೇದಿಕೆಯಲ್ಲಿಯೇ ಪರಸ್ಪರ ದೋಷಾರೋಪಣೆಯನ್ನು ಮಾಡಿ, ಏಕವಚನದಲ್ಲಿ ಮಾತನಾಡಿ, ಪರಸ್ಪರ ತಳ್ಳಾಟಕ್ಕೂ ಕಾರಣವಾಗಿತ್ತು, ಇದಾದ ನಂತರ ತಾನೇನೋ ಮಹತ್ತರವಾದ ಸಾಧನೆಯನ್ನು ಮಾಡುತ್ತೇನೆ ಎಂದು ಹೇಳುತ್ತಾ, ಕೊಡಗಿನ ಯಾವ ಭಾಗಕ್ಕೆ ತೆರಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದರೂ "ಕಸ್ತೂರಿ ರಂಗನ್ ವರದಿಯ ಬಗ್ಗೆ ನಿಶ್ಚಿಂತೆಯಿಂದ ಇರಿ. ಆ ವಿಚಾರವನ್ನು ನನ್ನ ಹೆಗಲಿಗೆ ಹಾಕಿ ಬಿಟ್ಟುಬಿಡಿ. ನಾನು ನೋಡಿಕೊಳ್ಳುತ್ತೇನೆ" ಎಂದು ಮೂಗಿಗೆ ತುಪ್ಪ ಸವರುವ ಕಾರ್ಯವನ್ನು ಸಿಂಹ ಮುಂದುವರೆಸಿದ್ದರು. ಕನಿಷ್ಠ ಕೇಂದ್ರ ಸರಕಾರ ಈ ಕುರಿತು ಕರೆದಿದ್ದ ಸಭೆಯಲ್ಲಿ ಕೂಡ ಆತ ಭಾಗವಹಿಸಲಿಲ್ಲ. ಪಾಪ ವಿಷಕಾರಕ ಲೇಖನಗಳನ್ನು ಬರೆಯುವ ಭರಾಟೆಯಲ್ಲಿ ಅವರು ತಾನು ಪ್ರತಿನಿಧಿಸುವ ಜನರ ವಿಚಾರಗಳ ಬಗ್ಗೆ ಚಿಂತಿಸಲು ಸಮಯವಿಲ್ಲದೆ ಒದ್ದಾಡಿರಬೇಕು. ಹಾಗಾಗಿ ಅವರ ಹೆಗಲು ಈಗ ಎಲ್ಲಿದೆ ಎಂದು ಕೊಡಗಿನ ಜನತೆ ಹುಡುಕುವಂತಾಗಿದೆ.

ಈಗ ಗುಂಡ್ಲುಪೇಟೆ ಮತ್ತು ನಂಜನಗೂಡಿನ ಉಪಚುನಾವಣೆಯ ಪ್ರಚಾರದಲ್ಲಿ ತೊಡಗಿರುವುದರಿಂದ ಪಾಪ ಅವರಿಗೂ ಮತ್ತು ಅದೇ ಭಾಗದ ಸಂಸದ ಧ್ರುವನಾರಾಯಣ್‌ರವರಿಗೂ ಜನರ ಸಮಸ್ಯೆ ಅರಿಯಲು ಸಮಯ ಸಿಗಲಿಕ್ಕಿಲ್ಲ.

ಮಂಡ್ಯ: ಗಂಡನ ಕೊಲೆಗೆ ಸುಪಾರಿ ಕೊಟ್ಟ ಟೀಚರಮ್ಮ!



ಕೊಲೆಗೀಡಾದ ಶಶಿಭೂಷಣ್

ಮಾರ್ಚ್ 31ರ ಬೆಳಗ್ಗೆ 9.30ಕ್ಕೆ ಸರಿಯಾಗಿ ಕೆ.ಎಂ.ದೊಡ್ಡಿ ಹತ್ತಿರದ ಅರೆಚಾಕನಹಳ್ಳಿಯಲ್ಲಿ ಸಿನಿಮೀಯ ರೀತಿಯ ಹತ್ಯೆಯೊಂದು ನಡೆದುಹೋಯ್ತು. ಪಲ್ಸರ್ ಬೈಕನ್ನೇರಿ ತನ್ನ ಪಾಡಿಗೆ ತಾನು ಹೋಗುತ್ತಿದ್ದ ನಲವತ್ತೈದು ವಯಸ್ಸಿನ ವ್ಯಕ್ತಿಯೊಬ್ಬನ ಮೇಲೆ ಏಕಾಏಕಿ ದಾಳಿ ಮಾಡಿದ ಹಂತಕರು ಅಡ್ಡಡ್ಡ ಕೊಚ್ಚಿ ತಾವು ಬಂದಿದ್ದ ಕಾರಿನಲ್ಲಿ ಪರಾರಿಯಾಗಿದ್ದರು. ಜನರ ಕಣ್ಣೆದುರೇ ಕ್ಷಣಮಾತ್ರದಲ್ಲಿ ಮಿಂಚಿಹೋದ ಆ ದೃಶ್ಯ ಪಲ್ಸರ್ ಬೈಕಿನ ಮೇಲಿದ್ದ ವ್ಯಕ್ತಿಯನ್ನು ಹೆಣವಾಗಿ ಮಲಗಿಸಿತ್ತು. ರಕ್ತದ ಮಡುವಿನಲ್ಲಿ ವಿಲವಿಲ ಒದ್ದಾಡಿದ ಅವನ ರಕ್ಷಣೆಗೆ ಜನ ಧಾವಿಸುವುದರ ಒಳಗೇ ವ್ಯಕ್ತಿಯ ಪ್ರಾಣಪಕ್ಷಿ ಹಾರಿಹೋಗಿತ್ತು. ಹತ್ತಿರದಲ್ಲೆಲ್ಲಾದರು ಸಿನಿಮಾ ಶೂಟಿಂಗ್ ನಡೆಯುತ್ತಿದೆಯಾ ಅಂತ ಜನ ಕ್ಷಣಕಾಲ ದಂಗಾಗಿ ಕ್ಯಾಮೆರಾ ಕಣ್ಣಿಗೆ ಹುಡುಕಾಡಿದ್ದೂ ಆಯ್ತು. ಆದರೆ ಅದು ಅಸಲೀ ಹತ್ಯೆಯಾಗಿತ್ತು!

ಹಾಗೆ ಕೊಲೆಯಾಗಿ ಹೋದವನು ಬಿದರಹಳ್ಳಿ ಹೊಸಹಳ್ಳಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಶಶಿಭೂಷಣ್. ಅದಕ್ಕಿಂತಲೂ ವಿಪರ್ಯಾಸವೆಂದರೆ ಅವನ ಕೊಲೆಗೆ ಸುಪಾರಿ ಕೊಟ್ಟಿದ್ದು ಸಾಕ್ಷಾತ್ ಅವನ ಕೈಹಿಡಿದ ಮಡದಿ ಶಾಂತಮ್ಮ. ಆಕೆಯೂ ಟೀಚರು!!

ಆಕ್ಸಿಡೆಂಟ್ ಮರ್ಡರ್!

ಶಾಲೆಗೆ ರಜೆಯಿದ್ದರೂ ಮಕ್ಕಳಿಗೆ ಬಿಸಿಯೂಟ ತಪ್ಪಿಸಬಾರದೆಂದು ಸರ್ಕಾರ ಆದೇಶ ಮಾಡಿರುವುದರಿಂದ ಮಾರ್ಚ್ 31ರಂದು ಶಶಿಭೂಷಣ್ ತರಕಾರಿ ತೆಗೆದುಕೊಂಡು ಬಿದರಹೊಸಹಳ್ಳಿಯ ಶಾಲೆಗೆ ಹೊರಟಿದ್ದ. ಅರೆಚಾಕನಹಳ್ಳಿ ಬಳಿ ಶಶಿಭೂಷಣ್ ಬೈಕ್‌ಗೆ ಹಿಂದಿನಿಂದ ಬಂದ ಕಾರೊಂದು ಗುದ್ದಿತ್ತು. ಶಶಿಭೂಷಣ್ ತರಕಾರಿ ಸಮೇತ ರಸ್ತೆಗೆ ಬಿದ್ದಿದ್ದ. ಕೂಡಲೇ ಕಾರಿನಿಂದ ಇಳಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಅವನ ಮೇಲೆ ದಾಳಿ ನಡೆಸಿ ಕ್ಷಣಾರ್ಧದಲ್ಲೇ ಪರಾರಿಯಾಗಿದ್ದರು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡಿದ ಆತ ಗೋಣು ಚೆಲ್ಲಿಕೊಂಡು ಹೆಣವಾಗಿದ್ದ.

ಸ್ಥಳಕ್ಕೆ ಬಂದ ಪೊಲೀಸರು ಶಶಿಭೂಷಣ್ ಮರ್ಡರ್ ಆಗಿರುವ ಬಗ್ಗೆ ಆತನ ಹೆಂಡತಿ ಶಾಂತಮ್ಮಗೆ ಫೋನ್ ಮಾಡಿ ವಿಷಯ ತಿಳಿಸಿದ್ದರು. ಮಗಳು ನವ್ಯಶ್ರೀ ಜೊತೆಗೆ ಆಗಮಿಸಿದ ಶಾಂತಮ್ಮ ಬಿದ್ದು ಗೋಳಾಡಿದ್ದಳು. ಯಾರ ಮೇಲಾದ್ರೂ ಅನುಮಾನ ಇದೆಯ ಅಂತ ಪೊಲೀಸರು ಕೇಳಿದಾಗ "ನನ್ನ ಗಂಡ ಬಡ್ಡಿ ವ್ಯವಹಾರ ಮಾಡುತ್ತಿದ್ದ. ಸಾಕಷ್ಟು ಮಂದಿಗೆ ಬಡ್ಡಿಗೆ ಹಣ ಕೊಟ್ಟಿದ್ದ. ಹಣ ಪಡೆದವರು ಮಾಡಿರಬೇಕು. ಇಲ್ಲಾಂದ್ರೆ ನನ್ನ ಗಂಡ ಗಂಟೆಗಟ್ಟಲೆ ಹುಡುಗಿಯರ ಜೊತೆ ಚಾಟಿಂಗ್ ಮಾಡ್ತಿದ್ದ. ಈ ಹಿನ್ನೆಲೆಯಲ್ಲಿ ಮರ್ಡರ್ ಆಗಿದ್ಯೋ ಗೊತ್ತಿಲ್ಲ" ಅಂತ ಕತೆ ಹೊಡೆದಿದ್ದಳು.




ಮಗಳು ನವ್ಯಶ್ರೀ

ವಿಚಿತ್ರ ಕ್ಯಾರೆಕ್ಟರ್

ಕೊಲೆಯಾದ ಶಶಿಭೂಷಣ್ ಪಕ್ಕಾ ಶೋಕಿವಾಲ. ಚೆನ್ನಾಗಿ ಡ್ರೆಸ್ ಮಾಡಿಕೊಂಡು ಹೊರಗಿನವರಿಗೆ ಜೆಂಟಲ್‌ಮನ್ ಥರಾ ಕಾಣುತ್ತಿದ್ದ ಆತ ಮನೆಯಲ್ಲಿ ಹೆಂಡತಿ, ಮಗಳಿಗೆ ಸಖತ್ ಟಾರ್ಚರ್ ಕೊಡುತ್ತಿದ್ದ. ಮದುವೆಯಾದಾಗಿನಿಂದಲೂ ಗಂಡ-ಹೆಂಡತಿ ಮಧ್ಯೆ ಹೊಂದಾಣಿಕೆಯೇ ಇರಲಿಲ್ಲ. ಆದ್ರೂ ಒಂದು ಹೆಣ್ಣು-ಒಂದು ಗಂಡು ಮಗುವಿಗೆ ತಂದೆತಾಯಿಯಾಗಿದ್ದರು. ಮಗಳು ನವ್ಯಶ್ರೀ ರಾಮನಗರದ ಕಾಲೇಜೊಂದರಲ್ಲಿ ಓದುತ್ತಿದ್ದರೆ, ಮಗ 8ನೇ. ಕ್ಲಾಸ್‌ನಲ್ಲಿ ಓದುತ್ತಿದ್ದಾನೆ. ಹೆಂಡತಿ ಶಾಂತಮ್ಮ ಕೂಡ ಮಂಡ್ಯ ತಾಲ್ಲೂಕಿನ ಕಾಳೇನಹಳ್ಳಿ ಶಾಲೆಯ ಮುಖ್ಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಳೆ.

ಗಂಡ-ಹೆಂಡತಿ ಇಬ್ಬರಿಗೂ ಕೈತುಂಬಾ ಸಂಬಳ ಬರುತ್ತಿತ್ತು. ಆದರೆ ದಿನನಿತ್ಯ ಮನೆಯಲ್ಲಿ ಜಗಳ. ಶಿಕ್ಷಕ ವೃತ್ತಿಯ ಜೊತೆಗೆ ಶಶಿಭೂಷಣ್ ಭರ್ಜರಿ ಬಡ್ಡಿ ವ್ಯವಹಾರದಲ್ಲೂ ಕುದುರಿಕೊಂಡಿದ್ದ. ಸ್ವರ್ಣಸಂದ್ರ ಬಡಾವಣೆಯಲ್ಲಿ ಎರಡು ಅಂತಸ್ತಿನ ಮನೆ, ಊರಿನಲ್ಲಿ ಜಮೀನು, ಬಡ್ಡಿಗೆ ಚೆಲ್ಲಾಡಿಕೊಂಡಿದ್ದ ಕೋಟ್ಯಾಂತರ ರೂಪಾಯಿ ಹೀಗೆ ಸಖತ್ತಾಗೇ ಕಮಾಯಿಸಿದ್ದ. ಹೆಂಡತಿ ಶಾಂತಮ್ಮಳ ಮೇಲೆ ಅದೇನು ದ್ವೇಷವೋ ಗೊತ್ತಿಲ್ಲ. ಕೂತಲ್ಲಿ ನಿಂತಲ್ಲಿ ಅವಾಚ್ಯವಾಗಿ ಬೈಯುತ್ತಿದ್ದ.



ಭೀಕರವಾಗಿ ಕೊಲೆಯಾದ ಶಶಿಭೂಷಣ್


ವಿಚಿತ್ರ ಕ್ಯಾರೆಕ್ಟರ್ ಹೊಂದಿದ್ದ ಈತನಿಗೆ ಮೊಬೈಲ್‌ನಲ್ಲಿ ಮಾತನಾಡೋ ಚಟ ಜಾಸ್ತಿ. ಸಂಜೆ ಮನೆಗೆ ಬಂದನಂತರ ಮೇಲಿನ ಮಹಡಿಗೆ ಹೋಗಿ ಗಂಟೆಗಟ್ಟಲೆ ಮಾತನಾಡ್ತಿದ್ದ. ಹೆಂಡತಿ ಶಾಂತಮ್ಮ ಗಂಟೆಗಟ್ಟಲೆ ಯಾರ ಜೊತೆ ಮಾತನಾಡ್ತೀರಿ ಎಂದು ಕೇಳಿದರೆ ನೀನ್ಯಾರೆ ಕೇಳೋಕೆ ಎಂದು ಜಗಳ ಮಾಡುತ್ತಿದ್ದ. ನನ್ನ ಮೊಬೈಲ್ ಯಾರೂ ಮುಟ್ಟಬಾರದು ಎಂದು ಎಚ್ಚರಿಕೆ ಕೊಟ್ಟಿದ್ದ. ಇಂತಹ ಮೆಂಟಲ್ ಗಿರಾಕಿ ಶಶಿಭೂಷಣ್‌ನ ಮಗಳು ನವ್ಯಶ್ರೀ ಹುಡುಗರ ಜೊತೆ ಬೋಲ್ಡ್ ಆಗಿ ಫ್ರೆಂಡ್‌ಶಿಪ್ ಮಾಡುತ್ತಿದ್ದಳು. ಈಕೆಗೆ ಗೆಳೆಯರ ಫೋನ್ ಬಂದರೆ ಸಾಕು ಸಿಡಿಮಿಡಿಗೊಳ್ಳುತ್ತಿದ್ದ ಶಶಿಭೂಷಣ್, ಮಗಳೆನ್ನದೆ ಕೆಟ್ಟದಾಗಿ ಬೈಯುತ್ತಿದ್ದ. ಕೆಲ ತಿಂಗಳ ಹಿಂದೆ ಒಂದಷ್ಟು ದಿನಗಳ ಕಾಲ ಮನೆ ಬಿಟ್ಟುಹೋಗಿದ್ದ ನವ್ಯಶ್ರೀ ಮತ್ತೆ ಮನೆಗೆ ಬಂದಾಗ ಶಶಿಭೂಷಣ್ ಆಕೆಯನ್ನು ಮನೆಗೆ ಸೇರಿಸಿಕೊಂಡಿರಲಿಲ್ಲ. ಮನೆಯಲ್ಲಿ ಎಲ್ಲವೂ ಈತನ ಆಣತಿಯಂತೆಯೇ ನಡೆಯಬೇಕಿತ್ತು. ಈತನ ಇಚ್ಛೆಗೆ ವಿರುದ್ಧವಾಗಿ ನಡೆದರೆ ಹೆಂಡತಿ, ಮಕ್ಕಳಿಗೆ ಕೋಲಿನಿಂದ ಬಾರಿಸುತ್ತಿದ್ದ. ಮನೆಯಲ್ಲಿ ಇಂತಹ ವಿಚಿತ್ರ ಕ್ಯಾರೆಕ್ಟರ್ ಹೊಂದಿದ್ದ ಶಶಿಭೂಷಣ್ ತಾನು ಕೆಲಸ ಮಾಡುತ್ತಿದ್ದ ಬಿದರಹೊಸಹಳ್ಳಿಯಲ್ಲಿ ಒಳ್ಳೆಯ ಹೆಸರು ಪಡೆದಿದ್ದ. ವಿದ್ಯಾರ್ಥಿಗಳ ಪಾಲಿಗೆ ಮೆಚ್ಚಿನ ಮೇಷ್ಟ್ರಾಗಿದ್ದ.

ಸುಪಾರಿ ಕೊಟ್ಟು

ಶಶಿಭೂಷಣ್‌ನ ಟಾರ್ಚರ್ ಸಹಿಸಿಕೊಂಡು ರೋಸಿ ಹೋಗಿದ್ದ ಅಮ್ಮ-ಮಗಳು ಈತನಿಗೊಂದು ಗತಿಕಾಣಿಸಲೇಬೇಕೆಂದು ನಿರ್ಧರಿಸಿ ಬಿಟ್ಟಿದ್ದರು. ಕಾಳೇನಹಳ್ಳಿಯಲ್ಲಿ ಹೆಡ್‌ಮಿಸ್ ಆಗಿದ್ದ ಶಾಂತಮ್ಮಳಿಗೆ ಮೈಸೂರಿನ ಗಾಂಧಿನಗರದ ಸುರೇಶ್ ಎಂಬಾತನ ಪರಿಚಯವಿತ್ತು. ಯಾವ ರೀತಿಯ ಪರಿಚಯವೋ ಗೊತ್ತಿಲ್ಲ. ಆತನ ಬಳಿ ಶಶಿಭೂಷಣ್‌ನ ಟಾರ್ಚರ್ ಬಗ್ಗೆ ಹೇಳಿಕೊಂಡಿದ್ದ ಶಾಂತಮ್ಮ ಮುಕ್ತಿ ಕೊಡಿಸುವಂತೆ ಕೇಳಿಕೊಂಡಿದ್ದಳು. ಶಶಿಭೂಷಣ್‌ನನ್ನು ಕೊಂದು ಮುಗಿಸಿದರಷ್ಟೇ ನಮಗಾಗುತ್ತಿರುವ ಟಾರ್ಚರ್‌ಗೆ ಮುಕ್ತಿ ಸಿಗುತ್ತದೆಂದು ಸುರೇಶ್‌ನಿಗೆ ಹೇಳಿದ್ದಳು. ಆಗ ಸುರೇಶ ಸುಪಾರಿ ಕಿಲ್ಲರ್‌ಗಳನ್ನು ಅಡ್ಜಸ್ಟ್ ಮಾಡಿ ಶಶಿಭೂಷಣ್‌ನನ್ನು ಕೊಲ್ಲಲು 5 ಲಕ್ಷ ರೂ.ಗಳಿಗೆ ಮಾತುಕತೆ ಮುಗಿಸಿದ್ದ. ಅದರಂತೆ 20 ಸಾವಿರ ರೂ.ಗಳನ್ನು ಸುಪಾರಿ ಕಿಲ್ಲರ್‌ಗಳಿಗೆ ಅಡ್ವಾನ್ಸ್ ಕೊಟ್ಟು ಉಳಿದ ಹಣವನ್ನು ಶಶಿಭೂಷಣ್‌ನ ಕೊಲೆ ಮಾಡಿದ ನಂತರ ಕೊಡುವುದಾಗಿ ಶಾಂತಮ್ಮ ಹೇಳಿದ್ದಳು. ಶಶಿಭೂಷಣ್‌ನನ್ನು ಹಿಂದಿನಿಂದ ಕಾರಿನಲ್ಲಿ ಡಿಕ್ಕಿ ಹೊಡೆಸಿ ಸಾಯಿಸಿದರೆ ಯಾರಿಗೂ ಇದೊಂದು ಕೊಲೆ ಎಂಬ ಅನುಮಾನ ಬರುವುದಿಲ್ಲ ಆಕ್ಸಿಡೆಂಟ್ ಅಂದುಕೊಳ್ತಾರೆ ಅನ್ನೋ ಪಕ್ಕಾ ಸ್ಕೆಚ್ ರೆಡಿಮಾಡಿಕೊಂಡಿದ್ದ ಹಂತಕರು ಮಾರ್ಚ್ 31ಕ್ಕೆ ಮುಹೂರ್ತ ಫಿಕ್ಸ್ ಮಾಡಿದ್ದರು.

ಅವತ್ತು ಶಶಿಭೂಷಣ್ ಮನೆಯಿಂದ ಹೊರಡುತ್ತಿದ್ದಂತೆಯೇ ಶಾಂತಮ್ಮ ಮೊಬೈಲ್ ಹಂತಕರಿಗೆ ಮಾಹಿತಿ ರವಾನಿಸಿದ್ದಳು. ತನ್ನ ಮೊಬೈಲ್ ಬಳಸಿದರೆ ಸಿಕ್ಕಿ ಬೀಳುತ್ತೇನೆ ಅಂತ ಲೆಕ್ಕ ಹಾಕಿದ ಟೀಚರಮ್ಮ ಪಕ್ಕದ ಮನೆಯವರ ಮೊಬೈಲ್ ಮೂಲಕ ಮಾಹಿತಿ ಕೊಟ್ಟಿದ್ದಳು. ಮಗಳು ನವ್ಯಶ್ರೀ ತನ್ನ ಮೊಬೈಲ್ ಮೂಲಕ ಅಪ್ಪ ಶಶಿಭೂಷಣ್‌ನ ಫೋಟೋ, ಆತನ ಶಾಲೆಯ ಫೋಟೋವನ್ನು ವಾಟ್ಸ್‌ಆಪ್‌ನಲ್ಲಿ ಕಳುಹಿಸಿದ್ದಳು. ಸುಪಾರಿ ಹಂತಕರು ಮನೆಯಿಂದಲೇ ಶಶಿಭೂಷಣ್‌ನನ್ನು ಕಾರಿನಲ್ಲಿ ಫಾಲೋ ಮಾಡಿದ್ದಾರೆ. ಜನರ್‍ಯಾರೂ ಇಲ್ಲದ ಕಡೆ ಕೊಲೆಮಾಡಲು ಕಿಲ್ಲರ್‌ಗಳು ಪಕ್ಕಾ ಪ್ಲಾನ್ ಮಾಡಿದ್ದರು. ಅರೆಚಾಕನಹಳ್ಳಿ ದಾಟಿ ಮುಂದೆ ಹೋಗುತ್ತಿದ್ದಂತೆ ಹಿಂದಿನಿಂದ ಬಂದ ಸುಪಾರಿ ಹಂತಕರು ಆತನ ಪಲ್ಸರ್ ಬೈಕ್‌ಗೆ ಡಿಕ್ಕಿ ಹೊಡೆದಿದ್ದರು. ಕೆಳಗೆ ಬಿದ್ದ ಶಶಿಭೂಷಣ್‌ಗೆ ಸಣ್ಣಪುಟ್ಟ ಗಾಯವಾದವೇ ವಿನಾಃ ಸಾಯುವ ಸೂಚನೆ ಕಾಣಿಸಿರಲಿಲ್ಲ. ಅಲ್ಲಿಗೆ ಆಕ್ಸಿಡೆಂಟ್ ಮಾಡಿ ಸಾಯಿಸಬೇಕೆಂದು ನಿರ್ಧರಿಸಿದ್ದ ಸುಪಾರಿ ಹಂತಕರ ಸ್ಕೆಚ್ ವಿಫಲವಾಗಿದೆ. ಕೂಡಲೇ ಕಾರಿನಿಂದ ಇಳಿದ ಹಂತಕರು ಮಚ್ಚು-ಲಾಂಗಿನಿಂದ ಶಶಿಭೂಷಣ್ ನನ್ನು ಸಿಕ್ಕಸಿಕ್ಕಲ್ಲೇ ಕೊಚ್ಚಿ ಹಾಕಿ ಪರಾರಿಯಾಗಿದ್ದರು. ರಕ್ತದ ಮಡುವಿನಲ್ಲಿ ಕೆಲ ನಿಮಿಷ ಒದ್ದಾಡಿದ ಶಶಿಭೂಷಣ್ ಜನರ ಮುಂದೆಯೇ ಪ್ರಾಣ ಬಿಟ್ಟಿದ್ದ.

ವಿಷಯ ತಿಳಿದ ಮಳವಳ್ಳಿ ವಿಭಾಗದ ಡಿವೈಎಸ್ಪಿ ಮ್ಯಾಥ್ಯು ಥಾಮಸ್, ಕೆ.ಎಂ.ದೊಡ್ಡಿ ಠಾಣೆಯ ಸಿಪಿಐ ಶಿವ ಮಲವಯ್ಯ, ಪಿಎಸ್‌ಐಗಳಾದ ಅಯ್ಯನಗೌಡ, ಶ್ರೀಧರ್ ಬಂದು ಪರಿಶೀಲನೆ ನಡೆಸಿ ಎಸ್ಪಿ ಸುಧೀರ್ ಕುಮಾರ್‌ರೆಡ್ಡಿಗೆ ಮಾಹಿತಿ ನೀಡಿದ್ದರು. ಪ್ರಕರಣವನ್ನು ಕೈಗೆತ್ತಿಕೊಂಡ ಪೊಲೀಸರ ತಂಡ ಕೇವಲ 48 ಗಂಟೆಯೊಳಗೆ ಅಸಲೀ ಹಂತಕರ ಜಾಡು ಬೇಧಿಸಿ ಟೀಚರಮ್ಮ, ಅವಳ ಮಗಳಿಗೆ ಬೇಡಿಭಾಗ್ಯ ಕರುಣಿಸಿದ್ದರು.



ಟೀಚರ್ ಶಾಂತಮ್ಮ


ಮುಳುವಾಯ್ತು ವಾಟ್ಸ್‌ಆಪ್ ಸಂದೇಶ

ವಿಚಾರಣೆ ಶುರು ಮಾಡಿದ ಪೊಲೀಸರು ಶಾಂತಮ್ಮ, ನವ್ಯಶ್ರೀಯನ್ನು ಮಾತನಾಡಿಸಿದಾಗ ಆತನ ಹಣಕಾಸಿನ ಹಿನ್ನೆಲೆ, ಹುಡುಗಿಯರ ಜೊತೆ ಚಾಟಿಂಗ್ ವಿಷಯಗಳು ಬಯಲಿಗೆ ಬಂದವು. ಅಕ್ಕಪಕ್ಕದ ಮನೆಯವರ ಜೊತೆ ಮಾತಿಗಿಳಿದ ಪೊಲೀಸರಿಗೆ ಗಂಡ-ಹೆಂಡತಿ ನಡುವೆ ಪದೇಪದೇ ನಡೆಯುತ್ತಿದ್ದ ಜಗಳದ ಬಗ್ಗೆಯೂ ತಿಳಿದುಬಂತು. ಶಶಿಭೂಷಣ್‌ನ ಅಂತ್ಯಕ್ರಿಯೆ ಮುಗಿಯುವ ಮೊದಲೇ ಪೊಲೀಸರಿಗೆ ಹೆಂಡತಿ ಶಾಂತಮ್ಮಳ ಮೇಲೆ ಸಣ್ಣದಾಗಿ ಅನುಮಾನ ಶುರುವಾಗಿತ್ತು. ಮಾರನೇ ದಿನ ಅಮ್ಮ-ಮಗಳ ಮೊಬೈಲ್ ಪಡೆದ ಪೊಲೀಸರು ಮಾಹಿತಿಗಾಗಿ ತಡಕಾಡಿದಾಗ ನವ್ಯಶ್ರೀ ಮೊಬೈಲ್‌ನಿಂದ ಅಪರಿಚಿತ ನಂಬರ್‌ವೊಂದಕ್ಕೆ ಶಶಿಭೂಷಣ್‌ನ ಫೋಟೋ, ಆತನ ಶಾಲೆಯ ಫೋಟೋ, ಪಲ್ಸರ್ ಬೈಕ್‌ನ ಫೋಟೋಗಳು ರವಾನೆಯಾಗಿರೋದು ಗೊತ್ತಾಗಿತ್ತು. ಅಮ್ಮ-ಮಗಳನ್ನು ಠಾಣೆಗೆ ಕರೆತಂದು ವಿಚಾರಿಸಿದಾಗ ಮೊದಮೊದಲು ನಮಗೇನು ಗೊತ್ತೇ ಇಲ್ಲ ಎನ್ನುವ ಬಾಯಿಪಾಠ ಒಪ್ಪಿಸಿದ ಅವರು ಪೊಲೀಸ್ ಭಾಷೆ ಶುರುವಾಗುತ್ತಿದ್ದಂತೆಯೇ ಸುಪಾರಿ ಕೊಟ್ಟು ಕೊಲ್ಲಿಸಿದ ವೃತ್ತಾಂತವನ್ನು ಬಾಯ್ಬಿಟ್ಟಿದ್ದರು. ಅವರಿಬ್ಬರನ್ನು ಮಂಡ್ಯ ಜೈಲಿಗೆ ತಳ್ಳಿರುವ ಪೊಲೀಸರು ಸುಪಾರಿ ಹಂತಕರ ಬೆನ್ನು ಬಿದ್ದ ಪೊಲೀಸರು ಹಂತಕರನ್ನು ಫಿಕ್ಸ್ ಮಾಡಿಕೊಟ್ಟ ಸುರೇಶ್ ಮತ್ತು ಹಂತಕರಾದ ಮಹಾದೇವ್, ವೆಂಕಟೇಶ್‌ನನ್ನು ಬಂಧಿಸಿದ್ದಾರೆ.

ಗಂಡನ ಟಾರ್ಚರ್ ಅಸಾಧ್ಯವಾಗಿದ್ದರೆ ಅವನಿಂದ ಡೈವೋರ್ಸ್ ಪಡೆಯುವ ಅವಕಾಶವಿತ್ತು. ಹೇಳಿಕೇಳಿ ಶಾಂತಮ್ಮ ಟೀಚರು. ಇಂತಹ ದಾರಿಗಳ ಬಗ್ಗೆ ತಿಳಿದಿರುತ್ತೆ. ಆದರೆ ಡೈವೋರ್ಸ್ ಪಡೆದರೆ ಗಂಡ ಸಂಪಾದಿಸಿದ್ದ ಕೋಟಿಕೋಟಿ ಆಸ್ತಿ ಕೈಬಿಟ್ಟು ಹೋಗುತ್ತದೆ ಎಂಬ ಕಾರಣಕ್ಕೆ ಇಂತಹ ಮೂರ್ಖ ನಿರ್ಧಾರ ಮಾಡಿದ್ದಾಳೆ. ದುರಂತವೆಂದರೆ, ಹಾದಿಬಿಟ್ಟ ಅಮ್ಮನಿಗೆ ಮಗಳೂ ಸಾಥ್ ಕೊಟ್ಟು ಹೆತ್ತಪ್ಪನನ್ನೇ ಕೊಂದು ಮುಗಿಸಿದ್ದಾಳೆ. ಅಮ್ಮ-ಮಗಳ ಖತರ್ನಾಕ್ ಅವತಾರ ಕಂಡು ಮಂಡ್ಯ ಜಿಲ್ಲೆಯ ಜನ ಗಾಬರಿಯಿಂದ ಬೆಚ್ಚಿರುವುದಂತೂ ಸುಳ್ಳಲ್ಲ.

■ ಮಂಡ್ಯ ನಾಗೇಶ್

ಮೈಸೂರು: ಉಪಚುನಾವಣೆಗಳ ಕ್ಯಾಸ್ಟ್ ಪೊಲಿಟಿಕ್ಸ್




ನಂಜನಗೂಡು ಮತ್ತು ಗುಂಡ್ಲುಪೇಟೆ ಉಪಚುನಾವಣೆಗಳು ದೇಶದ ಗಮನ ಸೆಳೆಯುವಷ್ಟು ಬಿರುಸುಗೊಳ್ಳುತ್ತಿವೆ. ಮತದಾರರನ್ನು ಸೆಳೆಯಲು ಎರಡೂ ಪಕ್ಷಗಳು ಇನ್ನಿಲ್ಲದ ಕಸರತ್ತು ನಡೆಸುತ್ತಿವೆ. ಜಾತಿ, ಸ್ತ್ರೀಶಕ್ತಿ ಸಮಾವೇಶಗಳನ್ನು ನಡೆಸಿವೆ. ಆದರೆ ಈ ಚುನಾವಣೆಗಳು ಕರ್ನಾಟಕ ರಾಜಕಾರಣದ ಕಡುಕೆಟ್ಟ ಅಧ್ಯಾಯವೊಂದಕ್ಕೆ ಮುನ್ನುಡಿ ಬರೆಯುತ್ತಿರುವುದೂ ಅಷ್ಟೇ ಸತ್ಯ.


ಚುನಾವಣೆಗಳು ನಡೆಯೋದೆ ಜಾತಿ ರಾಜಕಾರಣದ ಲೆಕ್ಕಾಚಾರದ ಮೇಲೆ. ಅದರಲ್ಲಿ ಎರಡು ಮಾತಿಲ್ಲ. ಆದರೆ ಮೇಲ್ನೋಟಕ್ಕಾದರೂ ಅಭಿವೃದ್ಧಿ, ಜಾತ್ಯತೀತತೆಗಳನ್ನು ಇಷ್ಟು ದಿನ ರಾಜಕೀಯ ಪಕ್ಷಗಳು ಉಚ್ಚರಿಸಿಕೊಂಡು ಬಂದಿದ್ದವು. ಆದರೆ ಈ ಉಪಚುನಾವಣೆಗಳಲ್ಲಿ "ಈ ನಿಮ್ಮ ಯಡಿಯೂರಪ್ಪ ಮುಖ್ಯಮಂತ್ರಿ ಆಗಬೇಕೆಂದರೆ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿ" ಅಂತ ಪ್ರಚಾರಕ್ಕಿಳಿದಿರುವ ಯಡಿಯೂರಪ್ಪ ಚುನಾವಣೆಗಳಲ್ಲಿ ಜಾತಿಬಲಾಢ್ಯತೆ ಅಧಿಕೃತಗೊಳ್ಳುವ ಕಾಯಕಕ್ಕೆ ಚಾಲನೆ ನೀಡಿದ್ದಾರೆ. ಈಗ ಚುನಾವಣೆ ನಡೆಯುತ್ತಿರುವ ನಂಜನಗೂಡು ಮತ್ತು ಗುಂಡ್ಲುಪೇಟೆಗಳ ಜಾತಿಲೆಕ್ಕ ತಿಳಿದ ಎಂತವರಿಗೇ ಆದರೂ ಯಡ್ಡಿ ಬಾಯಿಂದ ಹೊರಬಿದ್ದ 'ಈ ನಿಮ್ಮ' ಉವಾಚದ ಅಂತರಾಳ ಅರ್ಥವಾಗಿಬಿಡುತ್ತೆ. ಯಾಕೆಂದರೆ ಈ ಎರಡೂ ಕ್ಷೇತ್ರಗಳಲ್ಲಿ ಲಿಂಗಾಯತ ಮತಗಳೇ ನಿರ್ಣಾಯಕವಾದವು!

ಲಿಂಗಾಯತ ಲೀಡರ್ ಎನಿಸಿಕೊಂಡಿರುವ ಯಡಿಯೂರಪ್ಪ ನಂಜನಗೂಡು ಗುಂಡ್ಲುಪೇಟೆಗಳಲ್ಲಿ ಲಿಂಗಾಯತ ಮುಖಂಡರ ಸಭೆ ನಡೆಸಿ, 'ನಿಮ್ಮ (ಲಿಂಗಾಯತ) ಯಡಿಯೂರಪ್ಪ ಮುಖ್ಯಮಂತ್ರಿಯಾಗಬೇಕಾದರೆ ಎರಡೂ ಕ್ಷೇತ್ರಗಳಲ್ಲಿ ಓಟು ಡೈವರ್ಟ್ ಆಗದಂತೆ ನೋಡಿಕೊಳ್ಳಬೇಕು' ಎಂದು ತಾಕೀತು (ಮನವಿ ಅಲ್ಲ) ಮಾಡುತ್ತಿದ್ದಾರಂತೆ. ಯಡಿಯೂರಪ್ಪ ಮಾತು ಕೇಳಿಕೊಂಡು ಊರಿಗೆಹೋದ ಮುಖಂಡರು ಅವರ ಧಾಟಿಯಲ್ಲೇ 'ನಮ್ಮ (ಲಿಂಗಾಯತ) ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ಬಿಜೆಪಿಗೆ ಓಟ್ ಹಾಕಿ, ಅಭ್ಯರ್ಥಿಯನ್ನು ನೋಡಬೇಡಿ, ಯಡಿಯೂರಪ್ಪನ ಮುಖ ನೋಡಿ' ಎಂಬ ಪ್ರಚಾರಕ್ಕೆ ಇಳಿದಿದ್ದಾರೆ.

ನಂಜನಗೂಡಿನಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ಮತದಾರರಿದ್ದು, ಅದರಲ್ಲಿ ದಲಿತರು, ಲಿಂಗಾಯತರು ಸಮನಾಗಿದ್ದಾರೆ. ಇನ್ನುಳಿದಂತೆ ಕುರುಬ, ಉಪ್ಪಾರ, ನಾಯಕ, ಮುಸ್ಲಿಂ, ಒಕ್ಕಲಿಗ ಮತಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಶ್ರೀನಿವಾಸ್ ಪ್ರಸಾದ್ ಕಾರಣಕ್ಕೆ ದಲಿತರ ಒಂದಷ್ಟು ಮತಗಳು ಬಂದು, ಲಿಂಗಾಯತ ಮತಗಳು ಸಾಲಿಡ್ಡಾಗಿ ಬಿಜೆಪಿ ಪಾಲಾದರೆ ಗೆಲುವು ಶತಃಸಿದ್ಧ ಅನ್ನೋದು ಯಡ್ಡಿಯ ತರ್ಕ.




ಶ್ರೀನಿವಾಸ್ ಪ್ರಸಾದ್



ಗೀತಾ ಮಹದೇವಪ್ರಸಾದ್

ಯಡ್ಯೂರಪ್ಪನ ಈ ಕ್ಯಾಸ್ಟ್ ಕೆಮಿಸ್ಟ್ರಿಯನ್ನು ಅರ್ಥಮಾಡಿಕೊಂಡಿರುವ ಕಾಂಗ್ರೆಸ್ ಕೂಡಾ ಬಿಜೆಪಿಗೆ ಟಾಂಗ್ ನೀಡಲು ಅದೇ ಲಿಂಗಾಯತ ಸಮುದಾಯದವರಾದ ಅಲ್ಲಂ ವೀರಭದ್ರಪ್ಪರನ್ನು ನಂಜನಗೂಡು ಉಪಚುನಾವಣೆಗೆ ಕೆಪಿಸಿಸಿ ವೀಕ್ಷಕರಾಗಿ ನೇಮಿಸಿ ಜಾತಿ ಸಮೀಕರಣಕ್ಕೆ ಜೋತುಬಿದ್ದಿದೆ. ಅಷ್ಟೇಅಲ್ಲ, ವೀರಶೈವ ಮಹಾಸಭಾ ದಂಡನಾಯಕ ಶಾಮನೂರು ಶಿವಶಂಕರಪ್ಪರನ್ನೂ ಪ್ರಚಾರಕ್ಕೆ (ಅವರು ಸ್ವತಃ ತಮ್ಮ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರಕ್ಕೆ ಹೋದವರಲ್ಲ!) ಕರೆತಂದಿರುವ ಕಾಂಗ್ರೆಸ್ ವೀರಶೈವ ಮತಗಳ ಕ್ರೋಢೀಕರಣಕ್ಕೆ ಇಳಿದಿದೆ.

ಇನ್ನು ಗುಂಡ್ಲುಪೇಟೆಯಲ್ಲಿ ಜಾತಿಲೆಕ್ಕಾಚಾರದ ಜೊತೆಗೆ ಅನುಕಂಪದ ಗಿಮಿಕ್ಕೂ ಜೋರಾಗಿ ನಡೆಯುತ್ತಿದೆ. ದಿವಂಗತ ಮಹದೇವ್ ಪ್ರಸಾದ್‌ರ ಸ್ಥಾನಕ್ಕೆ ಅವರ ಪತ್ನಿ ಗೀತಾರನ್ನೇ ಕಾಂಗ್ರೆಸ್ ಕಣಕ್ಕಿಳಿಸಿರೋದು ಅನುಕಂಪದ ಅಲೆಯನ್ನು ವರ್ಕ್‌ಔಟ್ ಮಾಡಿಕೊಳ್ಳಲಿಕ್ಕೆ ಎಂಬ ಸಕಾರಣ ಅಳುಕು ಹೊಂದಿರುವ ಬಿಜೆಪಿ ತನ್ನ ಅಭ್ಯರ್ಥಿ ನಿರಂಜನ್‌ಕುಮಾರ್



ಪರವಾಗೂ ಒಂದು ಅನುಕಂಪದ ಮೋಡಿಯನ್ನು ಸೃಷ್ಟಿ ಮಾ[...] ಪ್ರಯತ್ನದಲ್ಲಿದೆ. ಬಿಜೆಪಿಯ ನಿರಂಜನ್ ಕುಮಾರ್‌ರ [...] ಎರಡು ಬಾರಿ ಸ್ಪರ್ಧಿಸಿ ಸೋತಿದ್ದ ಮಗ ನಿರಂಜನ್ [...] ಎರಡು ಬಾರಿ ಸೋತಿದ್ದಾರೆ, ಹಾಗಾಗಿ ಅವರ ಕುಟು[...] ಹಣ ಕಳೆದುಕೊಂಡು ದಿವಾಳಿಯಾಗುವ ಅಂಚಿಗೆ ತಲು[...] ಆ ಸತತ ಸೋಲುಗಳ ಅನುಕಂಪಕ್ಕಾದರು ಈ [...] ನಿರಂಜನ್‌ರನ್ನು ಗೆಲ್ಲಿಸಬೇಕು ಅನ್ನೋ ಸಿಂಪಥಿ ಫಾರ್ಮುಲ[...] ಅದು ಹುಟ್ಟುಹಾಕುತ್ತಿದೆ. ಅಲ್ಲ, ದಿವಾಳಿಯಾಗಿ[...] ನಿರಂಜನ್‌ರನ್ನು ಸಿರಿವಂತರಾಗಿಸಲು ಮತ ಹಾಕಿ [...] ರಾಜಾರೋಷವಾಗಿ ಕೇಳುತ್ತಿರುವ ಬಿಜೆಪಿಗೆ ತಮ್ಮ ಅ[...] ಗೆದ್ದ ನಂತರ ಹಣ ಮಾಡಲು ಏನೆಲ್ಲ ಮಾಡುತ್ತಾರೆನ್ನು[...] ಬಗ್ಗೆ ಅಷ್ಟು ವಿಶ್ವಾಸವಾ?

ಒಟ್ಟಿನಲ್ಲಿ ಅಭಿವೃದ್ಧಿ, ಜನಪರ ಮತ್ತು ಸೈದ್ಧಾ[...] ವಿಷಯಗಳ ಮೇಲೆ ನಡೆಯಬೇಕಿದ್ದ ಚುನಾವಣೆಗ[...] ಜಾತಿರಾಜಕಾರಣ ಮತ್ತು ಸಿಂಪಥಿಯಂತಹ ಕ್ಷುಲ್ಲಕ, [...] ಆಯಾಮಗಳತ್ತ ತಿರುಗಿಸಲು ಎರಡೂ ಪಕ್ಷಗಳು [...] ಉಪಚುನಾವಣೆಗಳನ್ನು ಬಳಸಿಕೊಳ್ಳುತ್ತಿರೋದು ಪ್ರಜಾಪ[...] ಮಹಾದುರಂತ! ■

ಕೊಡಗು....

06 ⏮

ಕೇಂದ್ರ ಸರಕಾರದ ವಂಚನೆ

ಕೇಂದ್ರ ಸರಕಾರ ಈ ವಿಚಾರದಲ್ಲಿ ಕರ್ನಾಟಕ ಸರಕಾರದ ಅಭಿಪ್ರಾಯಕ್ಕೆ ಯಾವುದೇ ಮನ್ನಣೆಯನ್ನು ನೀಡಿಲ್ಲ, ಮಾತ್ರವಲ್ಲ ಜನಾಭಿಪ್ರಾಯವನ್ನು ಕೂಡ ಗೌರವಿಸಲಿಲ್ಲ, ಕೊಡಗು ಜಿಲ್ಲೆಯೊಂದರಿಂದಲೇ 10 ಸಾವಿರಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ವೈಯಕ್ತಿಕವಾಗಿ ಸಲ್ಲಿಸಲಾಗಿತ್ತು, ಆದರೆ ಆ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದೇವೆ ಅಥವ ಇಲ್ಲ ಎಂಬುದನ್ನು ಕೂಡ ಉತ್ತರಿಸದೆ ಇರುವಷ್ಟು ಧಾರ್ಷ್ಟ್ಯತನವನ್ನು ಕೇಂದ್ರ ಸರಕಾರ ತೋರಿ ಕರ್ನಾಟಕವನ್ನು ಉಪೇಕ್ಷಿಸಿದೆ. ಅವರಿಗೆ ಕರ್ನಾಟಕ ರಾಜ್ಯ ಸರಕಾರ ಮತ್ತು ಜನತೆಯ ಬಗ್ಗೆ ಯಾವುದೇ ರೀತಿಯ ಸದಾಭಿಪ್ರಾಯ ಇಲ್ಲ ಎಂಬುದನ್ನು ಅವರು ತೋರಿಸಿದ್ದಾರೆ.


ಸಂಸದರುಗಳ ವೈಫಲ್ಯ

ಕೇಂದ್ರ ಸರಕಾರ ಒಂದು ಹಂತದಲ್ಲಿ ಪಶ್ಚಿಮಘಟ್ಟ ವಲಯದ ವ್ಯಾಪ್ತಿಗೆ ಬರುವ ಸಂಸದರುಗಳ ಒಂದು ವಿಶೇಷ ಸಭೆಯನ್ನು ಕರೆದಿತ್ತು. ಈ ಸಭೆಯಲ್ಲಿ ಕೇರಳ ರಾಜ್ಯದ ಸಂಸದರೆಲ್ಲರೂ ಭಾಗವಹಿಸಿದ್ದರು. ಮಹಾರಾಷ್ಟ್ರದಿಂದ ಹಿರಿಯ ರಾಜಕಾರಣಿಯಾದ ಶರದ್ ಪವಾರ್ ಕೂಡ ಭಾಗವಹಿಸಿದ್ದರು. ಕರ್ನಾಟಕದಿಂದ ಬಿ.ಎಸ್.ಯಡಿಯೂರಪ್ಪ ಶೋಭಾ ಕರಂದ್ಲಾಜೆ, ಪ್ರತಾಪ ಸಿಂಹ, ನಳಿನ್ ಕುಮಾರ್ ಕಟೀಲ್, ಅನಂತಕುಮಾರ್ ಹೆಗಡೆ ಮತ್ತು ಧ್ರುವನಾರಾಯಣ್ ಭಾಗವಹಿಸಬೇಕಾಗಿತ್ತು, ಆದರೆ ಈ ಸಭೆಯಲ್ಲಿ ಅನಂತ್ ಕುಮಾರ್ ಹೆಗಡೆಯವರನ್ನು ಬಿಟ್ಟು ಬೇರೆ ಯಾವ ಸಂಸದರೂ ಭಾಗವಹಿಸಲಿಲ್ಲ,

ಈಗ ಕರ್ನಾಟಕ ರಾಜ್ಯ ಸರಕಾರ ಆಕ್ಷೇಪಣೆಯನ್ನು ಸಲ್ಲಿಸುವಲ್ಲಿ ವಿಫಲವಾಗಿದೆ ಎಂದು ಸಂಸದರು ಹೇಳಲು ತೊಡಗಿದ್ದಾರೆ. ಒಂದು ವೇಳೆ ರಾಜ್ಯ ಸರಕಾರ ಆಕ್ಷೇಪಣೆಯನ್ನು ಸಲ್ಲಿಸುವಲ್ಲಿ ವಿಫಲವಾಗಿದ್ದರೂ, ಸಂಸದರು ಎನ್ನುವ ನೆಲೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೇಂದ್ರ ಸರಕಾರದ ಮುಂದೆ ಇಡುವಂತಹ ಜವಾಬ್ದಾರಿ ಈ ಸಂಸದರಿಗೆ ಇತ್ತಲ್ಲವೇ? ಮುಂದೆ ನಾನೇ ಕರ್ನಾಟಕ ಮುಖ್ಯಮಂತ್ರಿ ಎನ್ನುವ ಯಡಿಯೂರಪ್ಪನವರಿಗೂ ಜವಾಬ್ದಾರಿ ಇರಬೇಕಿತ್ತಲ್ಲವೇ? ರಾಜ್ಯ ಸರಕಾರ ವಿಫಲವಾಗಿದೆ ಎಂದು ಹೇಳಿಕೊಂಡು ಜಾರಿಕೊಳ್ಳುವ ಧೋರಣೆಯನ್ನು ಕರ್ನಾಟಕದಲ್ಲಿ ಬಿಜೆಪಿ ತೋರುತ್ತಿದೆ.

ಅವೈಜ್ಞಾನಿಕ ವರದಿ

ಈ ಎರಡೂ ವರದಿಗಳು ಅವೈಜ್ಞಾನಿಕ ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳು ಇವೆ. ಪ್ರಮುಖವಾಗಿ ಗಮನಿಸಬೇಕಾದ ಅಂಶ ಯಾವುದೆಂದರೆ ಪಶ್ಚಿಮಘಟ್ಟ ವಲಯದಲ್ಲಿ ವಾಸಿಸುವ 50 ಮಿಲಿಯನ್ ಜನರ ಮೇಲೆ ಒಂದಷ್ಟು ನಿಯಂತ್ರಣಗಳನ್ನು ಹೇರಲಾಗುತ್ತಿದೆ. ಈ ನಿಯಂತ್ರಣಗಳು ದೇಶದ ಇತರ ಭಾಗಗಳ ಜನರ ಮೇಲೆ ಇಲ್ಲ, ಇದು ತಾರತಮ್ಯ ನೀತಿಯಾಗಿದೆ. ಜನರು ನಿಯಂತ್ರಣಗಳಿಂದ ತೊಂದರೆಗೆ ಒಳಪಟ್ಟರೆ ಅವರಿಗೆ ಪರಿಹಾರ ಏನು ಎಂಬುದು ಎಲ್ಲಿಯೂ ಉಲ್ಲೇಖವಾಗಿಲ್ಲ, ಈ ಭಾಗದ ವಾತಾವರಣಕ್ಕೆ ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಹೇಗೆ ಆಗಬೇಕು ಎನ್ನುವುದಕ್ಕೆ ಯಾವುದೇ ನಿರ್ದಿಷ್ಟವಾದ ವಿಚಾರಗಳು ಇಲ್ಲ, ಉನ್ನತ ಮಟ್ಟದ ಸಮಿತಿ (ಹೆಚ್.ಎಲ್.ಡಬ್ಲ್ಯುಜಿ) ಮಾಡಿರುವ ಶಿಫಾರಸ್ಸುಗಳ ಬಗ್ಗೆ ಯಾವುದೇ ಉಲ್ಲೇಖಗಳು ಕರಡು ಅಧಿಸೂಚನೆಯಲ್ಲಿ ಇಲ್ಲ.



2011ರಲ್ಲಿ ನಡೆಸಿದ ಸಾಮಾಜಿಕ ಹಾಗೂ ವಾಣಿಜ್ಯ ಗಣತಿಯ ಆಧಾರದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಶೇ. 73ರಷ್ಟು ಮನೆಗಳು ಇವೆ. ಆದರೆ ಭಾರತದ ಅಭಿವೃದ್ಧಿಯ ನೋಟ ನಗರ ಪ್ರದೇಶಕ್ಕೆ ಕೇಂದ್ರೀಕೃತವಾಗಿದೆ. ಶೇ. 26ರಷ್ಟು ಬಡವರು ಗ್ರಾಮಾಂತರ ಪ್ರದೇಶದಲ್ಲಿ ಇದ್ದರೆ, ಕೇವಲ ಶೇ. 13.7ರಷ್ಟು ನಗರ ಪ್ರದೇಶದಲ್ಲಿ ಇದ್ದಾರೆ. ಹಾಗಾಗಿ ಸೂಕ್ಷ್ಮ ಪರಿಸರ ತಾಣ ಅತ್ಯಂತ ಕಡು ಗ್ರಾಮಾಂತರ ಪ್ರದೇಶಕ್ಕೆ ಅನ್ವಯವಾಗುವುದರಿಂದ ಅಸಮತೋಲನ ಹೆಚ್ಚಾಗುತ್ತದೆ.

ಮತ್ತೊಂದು ಕಡೆ ಅತೀಹೆಚ್ಚು ಜೀವವೈವಿಧ್ಯತೆ ಇದ್ದು ಕಡಿಮೆ ಜನ ಸಾಂದ್ರತೆ ಇರುವ ಪ್ರದೇಶವನ್ನು ಸೂಕ್ಷ್ಮ ಪರಿಸರ ತಾಣ ಎಂದು ಹೇಳಿದ್ದಾರೆ. ಜನಸಂಖ್ಯೆಯನ್ನು 1 ಚದರ ಕಿ.ಮೀ.ಗೆ 100ಕ್ಕಿಂತ ಕಡಿಮೆ ಇರುವುದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಆದರೆ 2014ರಲ್ಲಿ ಈ ವಿಚಾರವನ್ನು ಪರಿಗಣಿಸುವಾಗ 2001ರ ಜನಗಣತಿಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಆ ವೇಳೆಯಲ್ಲಾಗಲೇ 2011ರ ಜನಗಣತಿಯ ವರದಿಗಳು ಬಂದಿದ್ದವು. ಮಾತ್ರವಲ್ಲ ಈ ಪರಿಗಣನೆ ಸರಿಯಲ್ಲ, ಏಕೆಂದರೆ ಗ್ರಾಮದ ಒಂದು ಭಾಗದಲ್ಲಿ ಅರಣ್ಯ ಪ್ರದೇಶವಿರುತ್ತದೆ. ಮತ್ತೊಂದು ಭಾಗದಲ್ಲಿ ಜನವಸತಿ ಇರುತ್ತದೆ. ಇದನ್ನು ಒಂದು ಗ್ರಾಮ ಎಂದು ಪರಿಗಣಿಸಿದರೆ ಜನಸಂಖ್ಯೆ ಹೆಚ್ಚು ಇರುವ ಪ್ರದೇಶಕ್ಕೆ ಅನವಶ್ಯಕವಾದ ನಿಯಂತ್ರಣಗಳು ಬಂದು ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತವೆ.

ಕೊಡಗು ಜಿಲ್ಲೆಗೆ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸೂಕ್ಷ್ಮ ಪರಿಸರ ತಾಣ ಘೋಷಿಸುವ ಕ್ರಮ ಸರಿಯಲ್ಲ, ಸರಕಾರಗಳು ಒಂದು ಕಡೆ ಜನಸಂಖ್ಯಾ ನಿಯಂತ್ರಣವನ್ನು ಮಾಡಬೇಕು ಎಂದು ಹೇಳುತ್ತದೆ. ಮತ್ತೊಂದು ಕಡೆ ಎಲ್ಲವನ್ನೂ ಜನಸಂಖ್ಯೆಯ ಆಧಾರದಲ್ಲಿ ತೀರ್ಮಾನಿಸುತ್ತದೆ. ಹೆಚ್ಚು ಜನಸಂಖ್ಯೆ ಇರುವಲ್ಲಿಗೆ ಎಲ್ಲಾ ಸೌಲಭ್ಯಗಳು ದೊರೆಯುತ್ತದೆ. ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳು ಸೌಲಭ್ಯ ವಂಚಿತವಾಗುತ್ತದೆ. ಕೊಡಗು ಜಿಲ್ಲೆಯಲ್ಲಿ ಹಿಂದೆ ಮೂರು ವಿಧಾನಸಭಾ ಕ್ಷೇತ್ರಗಳು ಇತ್ತು, ಜನಸಂಖ್ಯೆಯ ಆಧಾರದಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಾದಾಗ ಕೊಡಗು ಜಿಲ್ಲೆ ಒಂದು ಕ್ಷೇತ್ರವನ್ನು ಕಳೆದುಕೊಳ್ಳಬೇಕಾಯಿತು. ಇದು ರಾಷ್ಟ್ರೀಯ ನೀತಿಯಾದ ಜನಸಂಖ್ಯಾ ನಿಯಂತ್ರಣವನ್ನು ಪಾಲಿಸಿದ್ದಕ್ಕಾಗಿ ಕೊಡಗಿಗೆ ದೊರೆತ ಕೊಡುಗೆಯಾಗಿದೆ.

ಯಾರನ್ನೋ ಮೆಚ್ಚಿಸಲು ಮತ್ತು ಜನರಿಗೆ ಬೇಕಾಗಿರದ ವಿಶ್ವಪಾರಂಪರಿಕ ತಾಣದ ಪಟ್ಟವನ್ನು ಪಡೆಯಲು ಜನರ ಜೀವನದೊಂದಿಗೆ ಚೆಲ್ಲಾಟವಾಡುವ ಅಗತ್ಯವಂತೂ ಇಲ್ಲ. ಈಗ ಪರಿಸರವಾದಿಗಳ ಜೊತೆಯಲ್ಲಿ ಮೂಲಭೂತ ವಾದಿಗಳು ಕೂಡ ಕೈಜೋಡಿಸಿದ್ದಾರೆ. ಇವರ ಜೊತೆಯಲ್ಲಿ ಒಂ[...] ಆದಿವಾಸಿಗಳನ್ನು ಕೂಡ ಕಾಣಬಹುದಾ[...] ಮೂಲಭೂತವಾದಿಗಳು ತಾವು ವಾಸಿಸುವ ಪ್ರದೇ[...] ತಮ್ಮದಾಗಿದ್ದು ಪರಕೀಯರು ಬಂದು ನೆಲೆಸುತ್ತಿದ್ದಾರೆ; ಅ[...] ನಿಯಂತ್ರಿಸಲು ಸೂಕ್ಷ್ಮ ಪರಿಸರ ತಾಣದ ಘೋಷಣೆ [...] ಎಂದು ಪ್ರತಿಪಾದಿಸುತ್ತಿದ್ದಾರೆ. ಆದಿವಾಸಿಗಳಿಗೆ ತಪ್ಪು [...] ಇದೆ. ಕಾಡೆಲ್ಲಾ ಅತಿಕ್ರಮಣಕ್ಕೆ ಒಳಗಾಗಿದೆ. ಸೂಕ್ಷ್ಮ [...] ವಲಯ ಘೋಷಣೆಯಾಗುವುದರಿಂದ ಎಲ್ಲವೂ ತೆರವಾ[...] ಇದರಿಂದಾಗಿ ತಮಗೆ ಭೂಮಿ ಸಿಗಬಹುದು ಮತ್ತು ಬ[...] ಮತ್ತು ಶ್ರೀಮಂತರ ನಡುವಿನ ವ್ಯತ್ಯಾಸ[...] ಕಡಿಮೆಯಾಗಬಹುದು ಎಂಬುದು ಅವರ ತಪ್ಪು ಕಲ್ಪನೆಯ[...] ಯಾಕೆಂದರೆ ಅರಣ್ಯ ಅತಿಕ್ರಮಣಕ್ಕೆ ಒಳಪಟ್ಟಿದ್ದರೆ ಅದು "[...] ಇಲಾಖೆಯ ವಶಕ್ಕೆ ಹೋಗುತ್ತದೆಯೇ ವಿನಹ ಜ[...] ಸಿಗುವುದಿಲ್ಲ ಎಂಬುದು ಅವರಿಗೆ ತಿಳಿದಿಲ್ಲ, ಅ[...] ದಿಕ್ಕುತಪ್ಪಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ.


ಇನ್ನು ಕರಡು ಅಧಿಸೂಚನೆಯಲ್ಲಿ ಹೇಳಿರುವ[...] ಕೆಲವೊಂದು ನಿಯಂತ್ರಣಗಳು ಜನಜೀವನವನ್ನು ದು[...]ಗಿಸುತ್ತದೆ. ಮರಳು ಗಣಿಗಾರಿಕೆ ಮೇಲೆ ನಿಯಂತ್ರಣ ಹೇ[...]ದರಿಂದ, ಮನೆಗಳ ನಿರ್ಮಾಣಕ್ಕೆ ಹಿನ್ನಡೆಯಾಗು[...] ಸರಕಾರದ ಕಾರ್ಯಕ್ರಮಗಳು ಜಾರಿಯಾಗಲು ಸ[...] ಉಂಟಾಗುತ್ತದೆ. ಕಳ್ಳಕಾಕರು ಬಲಿಷ್ಠರಾಗು[...] ಕೆಂಪುವಲಯ, ಕೇಸರಿವಲಯ ಮುಂತಾದವುಗಳ ಸ[...] ಸಣ್ಣ ವ್ಯತ್ಯಾಸಗಳು ಇವೆ. ಇದು ಜನಸಾಮಾ[...] ತಿಳಿಯುವುದಿಲ್ಲ, ಮತ್ತೊಂದು ಕಡೆ ಹಲವು ಕಾನೂನು[...] ಒಂದರ ಮೇಲೆ ಮತ್ತೊಂದು ಸವಾರಿ ಮಾಡು[...] ಇದರಿಂದ ಗೊಂದಲವು ಹೆಚ್ಚಾಗುತ್ತದೆ.

ವರದಿಯಲ್ಲಿ ಸೂಚಿಸಿರುವ ಆಗ್ರೋ ಫಾರೆಸ್ಟರಿ ವಿ[...] ಪ್ರಸ್ತಾಪವೇ ಕರಡು ಅಧಿಸೂಚನೆಯಲ್ಲಿ ಇಲ್ಲ, [...] ಅಧಿಸೂಚನೆ ಜಾರಿಯಾದರೆ ವರದಿಯು ತನ್ನ ಅಸ್ತಿತ್ವ[...] ಕಳೆದುಕೊಳ್ಳುತ್ತದೆ. ಜೊತೆಗೆ ಮುಂದಿನ ದಿನಗಳಲ್ಲಿ [...] ಬೇಕಾದ ರೀತಿಯಲ್ಲಿ ಅಧಿಸೂಚನೆಗಳನ್ನು ಹೊರಡಿ[...] ಮೂಲಕ ಮತ್ತಷ್ಟು ಬಿಗಿಯಾದ ನಿಯಂತ್ರಣಗ[...] ಮಾಡಲು ಅವಕಾಶಗಳು ಇವೆ.

ಯಾರದೋ ಒತ್ತಡಕ್ಕೆ ಮಣಿದು, ತರಾತುರಿಯಲ್ಲಿ [...] ಸೂಕ್ಷ್ಮ ವಲಯವನ್ನು ಘೋಷಿಸುವ ಬದಲು ಜನಸಾ[...] ಜೊತೆಯಲ್ಲಿ, ಹಿತಾಸಕ್ತರ ಜೊತೆಯಲ್ಲಿ ಚರ್ಚೆ ನಡೆಸಿ[...] ತೆಗೆದುಕೊಳ್ಳುವುದು ಸೂಕ್ತವಾದದ್ದು. ಅದರ ಬ[...] ತಲತಲಾಂತರದಿಂದ ವಾಸಿಸುವವರ ಜನಜೀವನದ ಜೊತೆ[...] ಚೆಲ್ಲಾಟವಾಡಿದರೆ ಬಹುಶಃ ಸಾಕಷ್ಟು ದುಷ್ಪರಿಣಾಮ[...] ಎದುರಿಸಬೇಕಾದ ಅಪಾಯಗಳು ಇವೆ.

■ ಬಿ.ಎನ್. ಮನುಶ[...]

ಮಾತೆ ಮಹಾದೇವಿಗೆ ವಿಷಪ್ರಾಶನ?



ಲಿಂಗಾನಂದ ಸ್ವಾಮೀಜಿ

ಬಸವಧರ್ಮ ಪೀಠದ ಮಾತೆ ಮಹಾದೇವಿ ೂಢವಾಗಿ ಹಾಸಿಗೆ ಹಿಡಿದದ್ದಕ್ಕೂ 'ಲಿಂಗಾನಂದರನ್ನು ನೇ ವಿಷ ಹಾಕಿ ಕೊಂದೆ'ನೆಂದು ಬಾಯಿಬಿಟ್ಟಿದ್ದ ಡುಗೆಯವಳೇ ಬಂದು ಮಾತಾಜಿಯ ಅಡುಗೆ ಮನೆ ರಿಕೊಂಡಿದ್ದಕ್ಕೂ ಪಾತಕ ನಂಟಿದೆಯೆ?


ಇಲ್ಲಿಗೆ ಎಂಟು ತಿಂಗಳ ಹಿಂದೆ ಪತ್ರಿಕೆ ವಿಶೇಷ ರದಿಯೊಂದನ್ನು ಪ್ರಕಟಿಸಿ 'ಲಿಂಗಾನಂದರನ್ನು ನಾನೇ ಷ ಹಾಕಿ ಕೊಂದೆ...!' ಎಂದಿದ್ದ ರಾಜೇಶ್ವರಿ ಎಂಬ ಡುಗೆಯವಳ ವೀಡಿಯೋ ತಪ್ಪೊಪ್ಪಿಗೆಯನ್ನು ಪ್ರಕಟಿಸಿತ್ತಲ್ಲ, ದೇ ಅಡುಗೆಯವಳೀಗ ಬಸವಧರ್ಮ ಪೀಠದ ಸಂಸ್ಥಾಪಕ ಂಗಾನಂದರ ಉತ್ತರಾಧಿಕಾರಿ ಮಾತೆ ಮಹಾದೇವಿಯವರ ಸವಮಂಟಪಕ್ಕೆ ಅಡುಗೆಯವಳಾಗಿ ಜಮೆಯಾಗಿದ್ದಕ್ಕೂ ಕೆಯ ಕೈಯೂಟ ತಿಂದ ಫಲವಾಗಿ ಮಾತೆ ಮಹಾದೇವಿ ದ್ದಕ್ಕಿದ್ದಂತೆ ಹಾಸಿಗೆ ಹಿಡಿಯುವುದಕ್ಕೂ ಸಂಬಂಧವಿದೆ ಂದು ಮಾತಾಜಿಯ ಅನುಯಾಯಿಗಳು ತಲೆ ಚ್ಚಿಕೊಳ್ಳುತ್ತಿದ್ದಾರೆ.

ಮಾತೆ ಮಹಾದೇವಿ ಕರ್ನಾಟಕ ಕಂಡ ಅಪರೂಪದ ವಶರಣೆಯೆಂಬ ಬಗ್ಗೆ ಯಾರಿಗೂ ತಕರಾರಿಲ್ಲ. 1995ರಲ್ಲಿ ಸವ ಧರ್ಮ ಪೀಠದ ಸಂಸ್ಥಾಪಕರಾದ ಸ್ವಾಮಿ ಂಗಾನಂದರು ತೀರಿಕೊಂಡರು. ಅದೂ ನಿಗೂಢ ಸಾವೇ. ರಿಯೂರಿನಲ್ಲಿ ಬಹಿರಂಗ ಶರಣಮೇಳವೊಂದರ ೇದಿಕೆಯಲ್ಲಿ ಪ್ರವಚನ ಮಾಡುತ್ತಿದ್ದಾಗಲೇ ಎದೆ ಹಿಡಿದು ದ್ದ ಲಿಂಗಾನಂದರು ಮತ್ತೆ ಏಳಲೇ ಇಲ್ಲ. ಆಗ ಂಗಾನಂದರ ಆಪ್ತ ಬಳಗದಲ್ಲಿದ್ದ ಮಾತೆ ಹಾದೇವಿಯವರ ಜೊತೆಗಿದ್ದ ಗಂಗಾ ಮಾತಾಜಿಯ ಂಬಿಕಸ್ಥ ಶಿಷ್ಯೆ ರಾಜೇಶ್ವರಿ ಎಂಬಾಕೆಯೇ ಡುಗೆಯವಳಾಗಿದ್ದಳು. ಇದೇ ರಾಜೇಶ್ವರಿಯೇ ಇಲ್ಲಿಗೆ ರ್ಷದ ಹಿಂದೆ 'ಲಿಂಗಾನಂದರಿಗೆ ಊಟದಲ್ಲಿ ನಾನೇ ಷ ಹಾಕಿ ಕೊಡುತ್ತಿದ್ದೆ. ನಾನು ಪ್ರಸಾದದಲ್ಲಿ ಸ್ವಾಮೀಜಿಗೆ ಕಿಕೊಟ್ಟ ವಿಷದ ಫಲವಾಗಿಯೇ ಲಿಂಗಾನಂದ ಅಪ್ಪಾಜಿ ರಿಕೊಂಡರು...' ಎಂದು ಕ್ಯಾಮರಾದೆದುರು ಕೊಟ್ಟ ೇಳಿಕೆಯ ವೀಡಿಯೋ ತುಣುಕು ನಾಡಿನ ಉದ್ದಗಲಕ್ಕೂ ಚಲನವನ್ನೇ ಉಂಟುಮಾಡಿತ್ತು.

ಆದೇ ರಾಜೇಶ್ವರಿ ಎಂಬ ಅಡುಗೆಯವಳು ಈಗ ಂಗಳೂರಿನ ಬಸವ ಮಂಟಪದ ಮಾತೆ ಹಾದೇವಿಯವರ ಅಂತಃಪುರದ ಬಾಣಸಿಗಿತ್ತಿ!

ದಿಢೀರ್ ಕುಸಿತ

ಆಕೆಯ ಕೈ ಅಡುಗೆಯನ್ನು ತಿಂದೇ ಮಾತೆ ಮಹಾದೇವಿ ಸಿಗೆ ಹಿಡಿದಿದ್ದಾರೆಂದೂ, ಸದ್ಯ ಯಶವಂತಪುರದ ಲಂಬಿಯಾ ಏಷ್ಯಾ ಆಸ್ಪತ್ರೆಯ ಐಸಿಯೂನಲ್ಲಿ ಪ್ರಜ್ಞೆ ಬಿದ್ದಿರುವ ಮಾತೆ ಮಹಾದೇವಿಯವರ ದುರ್ಗತಿಗೆ ಅಡುಗೆಯವಳ ಮೂಲಕ ಮಾತಾಜಿಗೆ ವಿಷವುಣ್ಣಿಸಿದ ಗಾ ಮಾತಾಜಿಯೇ ವಿಷ ಪ್ರಾಶನದ ಸೂತ್ರಧಾರಳೆಂದೂ, ಾತೆ ಮಹಾದೇವಿಯವರ ಅಂತ್ಯಕಾಣಿಸಿ ಸಮಸ್ತ ಸವಧರ್ಮ ಪೀಠಕ್ಕೆ ತಾನೇ ಒಡತಿಯಾಗುವ ಗಂಗಾ ಮಾತಾಜಿಯ ದುರಾಸೆಯೆಂಬುದೂ, ರಾಜೇಶ್ವರಿಯೆಂಬ ಆಡುಗೆಯವಳ ಮೂಲಕ ಕಾರ್ಯ ಸಾಧಿಸಿದೆಯೆಂಬುದೂ ಬಸವಧರ್ಮ ಪೀಠದ ಮಾತೆ ಮಹಾದೇವಿ ನಿಷ್ಠ ಭಕ್ತಗಣದ ಆರೋಪ ಮತ್ತು ಆಕ್ರೋಶ ಕೂಡ!



ಮಾತೆ ಮಹಾದೇವಿಯವರಿಗೀಗ ಎಪ್ಪತ್ನಾಲ್ಕರ ಇಳಿವಯಸ್ಸಾದರೂ 2017ರ ಜನವರಿಯ ತನಕ ಲವಲವಿಕೆಯಿಂದಲೇ ಇದ್ದರು: ತಕ್ಕಮಟ್ಟಿಗೆ ಬಿಪಿಯಿತ್ತು, ಮಧುಮೇಹ ನಿಯಂತ್ರಣಕ್ಕೆ ಬಂದಿತ್ತು. ಅದೇ ಹುಮ್ಮಸ್ಸಿಗೆ ಬಿದ್ದ ಮಾತಾಜಿ ತನ್ನ ಬಹುಕಾಲದ ಶಿಷ್ಯೆ ಗಂಗಾ ಮಾತಾಜಿಯನ್ನು ತನ್ನ ಉತ್ತರಾಧಿಕಾರಿಯೆಂದೂ, ಗಂಗಾ ಮಾತಾಜಿಯ ತರುವಾಯ ಗುಂಡ್ಲುಪೇಟೆಯ ಮಹದೇವಸ್ವಾಮಿ ಪೀಠಾಧಿಪತಿ ಆಗಬೇಕೆಂದೂ ವಿಲ್ಲು ಬರೆದಿಟ್ಟರು. ಇದಾಗಿದ್ದು ಇಲ್ಲಿಗೆ ಮೂರು ತಿಂಗಳ ಹಿಂದೆ ಅಂದರೆ 2017ರ ಜನವರಿಯಲ್ಲಿ.

ಅದೇನಾಯಿತೋ ಇದ್ದಕ್ಕಿದ್ದಂತೆ ಗಂಗಾ ಮಾತಾಜಿಗಿಂತಲೂ ಅಲ್ಲಮಪ್ರಭು ಸ್ವಾಮಿಯೇ ತನ್ನ ಉತ್ತರಾಧಿಕಾರಿಯಾಗಲು ಸೂಕ್ತ ಮತ್ತು ಸಮರ್ಥ ಎಂದು ಮಾತಾಜಿಗನ್ನಿಸಿದೆ. ಆದಕ್ಕೆ ಕಾರಣ ಮಾತಾಜಿಯ ಕೆಲ ಅನುಯಾಯಿಗಳು ಹಾಕಿದ ಒತ್ತಡ. ರಾಷ್ಟ್ರೀಯ ಬಸವದಳದ ಅಧ್ಯಕ್ಷ ಬಸವರಾಜ ಕಂಡಗೋಳಿ, ಬಾಗಲಕೋಟೆಯ ಪೀಠ ಪ್ರಮುಖ ವೀರಣ್ಣ ಕರ್ಮೊಳ್ಳಿ ಮತ್ತು ಶಿವಮೊಗ್ಗ ಜಿಲ್ಲಾ ಬಸವದಳದ ಪದಾಧಿಕಾರಿಗಳು ಸೇರಿದಂತೆ ಮಾತಾಜಿ ನಿಷ್ಠ ಅನೇಕ ಭಕ್ತರೆಲ್ಲ ಗಂಗಾ ಮಾತಾಜಿಯ ಸಾಮರ್ಥ್ಯವೇನಿದ್ದರೂ ಶಾಖಾ ಮಠವೊಂದಕ್ಕೆ ಸರಿಹೊಂದುತ್ತದೆಯೇ ಹೊರತು ನಾಯಕತ್ವ, ಆಧ್ಯಾತ್ಮ ಮತ್ತು ಹೋರಾಟದ ಗುಣವಿರುವುದು ಅಲ್ಲಮಪ್ರಭು ಸ್ವಾಮಿಯವರಲ್ಲೇ. ಗಂಗಾ ಮಾತಾಜಿಗೂ ಮೊದಲೇ ಅವರನ್ನು ಉತ್ತರಾಧಿಕಾರಿ ಎಂದು ಘೋಷಿಸಿ ತದನಂತರ ಮಾತಾಜಿ ತಮ್ಮ ನಿರ್ಧಾರ ಬದಲಾಯಿಸಿದ್ದೇ ತಪ್ಪೆಂದೂ ಹಾಕಿದ ಒತ್ತಡಕ್ಕೆ ಮಾತಾಜಿ ಮಣಿದಿದ್ದಾರೆ. ಎಲ್ಲಿ ಪೀಠ ಇಬ್ಭಾಗವಾಗಿ ಬಹುತೇಕ ಭಕ್ತರೆಲ್ಲ ಪರ್ಯಾಯ ಬಸವಧರ್ಮ ಪೀಠ ಸ್ಥಾಪಿಸಬಹುದೋ ಎಂಬ ಅಳುಕೂ ಮಾತೆ ಮಹಾದೇವಿಯವರನ್ನು ಕಾಡಿದೆ.



ಅಡುಗೆಯ ರಾಜೇಶ್ವರಿ

ವಿಷಪ್ರಾಶನದ ಕತೆ

ಅದೇನಾಯಿತೋ ಮಾರ್ಚ್ ಮೊದಲ ವಾರದ ಹೊತ್ತಿಗೆ ಇದ್ದಕ್ಕಿದ್ದಂತೆ ಮಾತಾಜಿಯವರು ಹಾಸಿಗೆ ಹಿಡಿದಿದ್ದಾರೆ. ರಾಜಾಜಿನಗರದ ಬಸವ ಮಂಟಪದ ಪಕ್ಕದಲ್ಲೇ ಇದ್ದ ಸಿಟಿ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿದೆ. ಅಲ್ಲಿನ ವೈದ್ಯರುಗಳು ಫುಡ್‌ಪಾಯಿಸನ್ ಆಗಿದೆಯೆಂದು ಹೇಳಿದರೆಂಬ ವದಂತಿಯೂ ಹಬ್ಬಿದೆ. ಬರೋಬ್ಬರಿ 20 ದಿನಗಳ ಕಾಲ ಸಿಟಿ ಆಸ್ಪತ್ರೆಯಲ್ಲಿದ್ದೂ ಮಾತಾಜಿ ಆರೋಗ್ಯದಲ್ಲಿ ಸುಧಾರಣೆಯಾಗಲಿಲ್ಲ, ಇನ್ನೇನು ಅನಾಹುತವಾಗುತ್ತೋ ಎಂದು ವಾರದ ಹಿಂದೆ ಹೆಚ್ಚಿನ ಚಿಕಿತ್ಸೆಗೆಂದು ಯಶವಂತಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಮಾತಾಜಿ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಐಸಿಯೂನಲ್ಲಿ ಅತ್ಯಂತ ಕ್ಲಿಷ್ಟ ಸ್ಥಿತಿಯಲ್ಲಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾರೆ. ಯಾರನ್ನೂ ತೀವ್ರ ನಿಗಾ ಘಟಕದ ಒಳಕ್ಕೆ ಬಿಡದಂತೆ ಗಂಗಾ ಮಾತಾಜಿ ಗ್ಯಾಂಗ್ ಸರ್ಪಗಾವಲಿದೆ. ಅನಾರೋಗ್ಯದ ಕಾರಣವೇನು, ಆರೋಗ್ಯದ ಪರಿಸ್ಥಿತಿಯೇನೆಂಬುದನ್ನೂ ಹೊರಜಗತ್ತಿಗೆ ತಿಳಿಸದ ಗಂಗಾ ಮಾತಾಜಿ ಪಟಾಲಂನ ಉದ್ದೇಶ; ವರ್ತನೆಗಳೆಲ್ಲವೂ ನಿಗೂಢವಾಗೇ ಇದೆ.

ಆದರೆ ಮಾತಾಜಿಯ ಭಕ್ತರು ಮತ್ತು ನಿಷ್ಠ ಶಿಷ್ಯರ ಪೈಕಿ ಲೀಲಾವತಿ ಕರಡಿ ಮತ್ತು ದೇವಿಕಾ ಶರಣಪ್ಪ ಎಂಬ ಮಹಿಳೆಯರಿಬ್ಬರು ಬೇರೆಯದೇ ಹಕೀಕತ್ತೊಂದನ್ನು ಸಿಕ್ಕಸಿಕ್ಕವರೆದುರು ಬಿಚ್ಚಿಡಲಾರಂಭಿಸಿದ್ದಾರೆ. ಅದು ಅಡುಗೆಯವಳಾದ ರಾಜೇಶ್ವರಿ ಎಂಬಾಕೆಯೇ ಮಾತಾಜಿಗೆ ವಿಷಪ್ರಾಶನ ಮಾಡಿಸಿರಬೇಕೆಂಬ ಗುಮಾನಿ. ಮಾತಾಜಿ ರಾಜಾಜಿನಗರದ ಸಿಟಿ ಆಸ್ಪತ್ರೆಗೆ ದಾಖಲಾದ ಸುದ್ದಿ ಕೇಳಿ ಆತಂಕಗೊಂಡು ಬೆಂಗಳೂರಿಗೆ ಧಾವಿಸಿಬಂದ ಬೆಳಗಾವಿಯ ಬಸವ ಕೇಂದ್ರದ ನೀಲಾಂಬಿಕೆ ಮಾತಾಜಿ ಮತ್ತು ಉಳವಿಯ ಚೆನ್ನಬಸವ ಪೀಠದ ಮಾತೆ ಬಸವರಾಜೇಶ್ವರಿಯವರು ಕೂಡ ಇದೇ ಅನುಮಾನ ವ್ಯಕ್ತಪಡಿಸಿ ತಮ್ಮ ಬಳಿ ಕಣ್ಣೀರಿಟ್ಟರೆಂಬುದು ಲೀಲಾವತಿ ಕರಡಿ ಮತ್ತು ದೇವಿಕಾ ಶರಣಪ್ಪರ ಆರೋಪ!



ಮಾತೆ ಮಹಾದೇವಿ

ಇಬ್ಬರು ವಿವಿಧ ಪೀಠಗಳ ಮಾತೆಯರು ಮತ್ತು ಇನ್ನಿಬ್ಬರು ಬಸವಧರ್ಮ ಪೀಠದ ಕಾರ್ಯಕರ್ತರೇ ಮಾತಾಜಿಗೆ ವಿಷ ಹಾಕಲಾಗಿದೆಯೆಂದು ಕಂಡಕಂಡವರಿಗೆಲ್ಲಾ ಫೋನಾಯಿಸಿ ನಿಟ್ಟುಸಿರಿಡುತ್ತಿದ್ದಾರೆಂದರೆ, ಅದನ್ನು ಬಸವಧರ್ಮ ಪೀಠದ ಒಂದು ಗುಂಪು ನಿಜವೆಂದು ಭಾವಿಸುತ್ತಿದೆಯೆಂದರೆ ಅದಕ್ಕೊಂದು ಆಧಾರವಿರಲೇ ಬೇಕಲ್ಲವೆ?

ಅದು ಉತ್ತರಾಧಿಕಾರಿ ಗಂಗಾ ಮಾತಾಜಿ ಮತ್ತು ತಾನೇ ಲಿಂಗಾನಂದರಿಗೆ ವಿಷ ಕೊಟ್ಟೆ ಎಂದು ಹೇಳಿಕೆ ಕೊಟ್ಟಿದ್ದ ರಾಜೇಶ್ವರಿ ಎಂಬ ಆಡುಗೆಯವಳ ಜೊತೆಗಿನ ನಿಗೂಢ ಸಂಬಂಧ. 2017ರ ಜನವರಿ 14ರಂದು ಗಂಗಾ ಮಾತಾಜಿಯೇ ಮಾತೆ ಮಹಾದೇವಿಯವರ ಉತ್ತರಾಧಿಕಾರಿಯೆಂದು ಘೋಷಣೆಯಾದ ಮರುಗಳಿಗೆಯಲ್ಲೇ ಗಂಗಾ ಮಾತಾಜಿ ಮಾಡಿದ ಮೊದಲ ಕೆಲಸವೇ ವಿಷಪಾಷಾಣವಂತೆ ರಾಜೇಶ್ವರಿಯನ್ನು ಬಸವ ಮಂಟಪಕ್ಕೆ ಕರೆತಂದದ್ದು!

ಗಂಗಾ ಮಾತಾಜಿಯ ಜಾಲ

ಅಷ್ಟಕ್ಕೂ ರಾಜಾಜಿನಗರದ ಬಸವಮಂಟಪದಲ್ಲಿ ಅಡುಗೆಗೆ ಹೆಂಗಸರಿಲ್ಲ ಎಂದಾಗಲಿ ಈಕೆಯನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲವೆಂದಾಗಲಿ ಅಲ್ಲ. ಶ್ರೀದೇವಿ ಎಂಬ ಬೀದರ್ ಮೂಲದ ಯುವತಿಯೊಬ್ಬಳು ಕಳೆದ ಮೂರು ವರ್ಷದಿಂದ ಬಸವಮಂಟಪದಲ್ಲಿ ಮಾತಾಜಿಯ ಪ್ರಸಾದದ ಅಡುಗೆಯವಳಾಗಿ ಕೆಲಸ ಮಾಡಿಕೊಂಡಿದ್ದಾಳೆ. ಆಕೆಯೂ ಗಂಗಾ ಮಾತಾಜಿಯ ಪರಮಾಪ್ತೆಯೆ. ಇವಳಿಗೂ ಮುನ್ನ ಬಸವಮಂಟಪದಲ್ಲಿ ಮಾತಾಜಿಯ ಸೇವೆ ಮಾಡಿಕೊಂಡಿದ್ದದ್ದು ಶಾಂತಾ ಮಾತಾಜಿ ಎಂಬ ಶಿವಶರಣೆ. ಕಳೆದ 30 ವರ್ಷಗಳಿಂದ ಶಾಂತಾ ಮಾತಾಜಿಯೇ ಮಾತೆ ಮಹಾದೇವಿಯವರ ನಂಬಿಕಸ್ತ ಸೇವಕಿಯಾಗಿ ಪ್ರಸಾದ, ಪೂಜೆ, ಆರೋಗ್ಯವಷ್ಟೇ ಅಲ್ಲ ಆಪ್ತ ಸಲಹೆಗಾರ್ತಿಯಾಗಿಯೂ ಸೇವೆ ಸಲ್ಲಿಸಿಕೊಂಡಿದ್ದರು.

ಶಾಂತಾ ಮಾತಾಜಿ ಇರುವತನಕ ತಾವು ಮಾತಾಜಿಗೆ ಆಪ್ತರಾಗುವುದು ಕಷ್ಟ ಅನ್ನಿಸಿದ ಗಂಗಾ ಮಾತಾಜಿ ಅದಕ್ಕೆ ಬಳಸಿಕೊಂಡಿದ್ದು ಬೀದರ್ ಮೂಲದ ಶಾಂತಾ ಟೀಚರ್ ಎಂಬಾಕೆಯನ್ನು!

ಈ ಶಾಂತಾ ಟೀಚರ್ ಕಾಂಗ್ರೆಸ್ ನಾಯಕ ಧರ್ಮಸಿಂಗ್‌ರ ಪಕ್ಕಾ ಶಿಷ್ಯೆ. ಜೊತೆಗೆ ಗಂಗಾ ಮಾತಾಜಿಯ ನಂಬಿಕಸ್ತ ಬಂಟಿ. ಈಕೆ ಇದ್ದಕ್ಕಿದ್ದಂತೆ ಬಸವಮಂಟಪಕ್ಕೆ ಬಂದಿದ್ದೇ ತಿಂಗಳಾನುಗಟ್ಟಲೆ ಠಿಕಾಣಿ ಹೂಡಿ ಶಾಂತಾ ಮಾತಾಜಿಯ ವಿರುದ್ಧ ಕ್ಯಾತೆ ಜಗಳ ತೆಗೆದದ್ದೇ ದಿನಕ್ಕೊಂದು ರಂಪ ಶುರುವಿಟ್ಟಳು. ಮಾತಾಜಿಯ ಬಳಿ ಶಾಂತಾ ಮಾತಾಜಿ ವಿರುದ್ಧ ಚಾಡಿ ಹೇಳುವುದೇ ಟೀಚರ್ ಶಾಂತಾಳ ಕಾಯಕವಾಯಿತು. ರೋಸತ್ತ ಶಾಂತಾ ಮಾತಾಜಿ ತಲೆನೋವೇ ಬೇಡವೆಂದು ಬಸವಮಂಟಪ ತೊರೆದು ನಾಪತ್ತೆಯಾದರು. ಅಲ್ಲಿಗೆ ಗಂಗಾ ಮಾತಾಜಿಯ ಬೀದರ್ ಪಟಾಲಮ್ಮಿನ ಮುಖ್ಯ ಉದ್ದೇಶ ಈಡೇರಿದಂತಾಯಿತು. ಶಾಂತಾ ಮಾತಾಜಿಯ ಜಾಗಕ್ಕೆ ಗಂಗಾ ಮಾತಾಜಿ ತಂದದ್ದು ತನ್ನದೇ ಬೀದರ್‌ನ ದೂರದ ಸಂಬಂಧಿ ಶ್ರೀದೇವಿ ಎಂಬಾಕೆಯನ್ನು.

ಪತಿಯ ಅಕಾಲಿಕ ಮರಣದಿಂದಾಗಿ ಪುಟ್ಟ ಮಗುವಿನ ಸಮೇತ ವಿಧವೆಯಾಗಿದ್ದ ಶ್ರೀದೇವಿಗಾಗ 25ರ ಹರೆಯ. ಈಕೆಯನ್ನು ಬೆಂಗಳೂರಿನ ಬಸವಮಂಟಪದ ಅಡುಗೆಯವಳಾಗಿ ತಂದಿದ್ದಷ್ಟೇ ಅಲ್ಲ ತನಗೆ ಡ್ರೈವರ್ ಆಗಿದ್ದ ವೀರೇಶ ಎಂಬಾತನ ಜೊತೆ ಎರಡನೇ ಮದುವೆಯನ್ನೂ ಗಂಗಾ ಮಾತಾಜಿಯೇ ನಿಂತು ಮಾಡಿಸಿಬಿಟ್ಟರು. ಅಲ್ಲಿಗೆ ಶ್ರೀದೇವಿ ಗಂಗಾ ಮಾತಾಜಿ ಹಾಕಿದ ಗೆರೆ ದಾಟದಷ್ಟು ನಿಯತ್ತಿಗೆ ಬಿದ್ದಳು. ಶಾಂತಾ ಮಾತಾಜಿ ಇರುವತನಕ ಮಾತಾಜಿ ಆರೋಗ್ಯ ನೆಟ್ಟಗಿತ್ತು, ಸುತ್ತಮುತ್ತಲ ವಾತಾವರಣವೂ ಸರಿಯಿತ್ತು. ಶಾಂತಾ ಮಾತಾಜಿಯ ಮಾತನ್ನು ಮಾತೆ ಮಹಾದೇವಿ ಮೀರುತ್ತಿರಲಿಲ್ಲ. ಯಾವತ್ತು ಶಾಂತಾ ಮಾತಾಜಿ ನಿರ್ಗಮಿಸಿ ಶ್ರೀದೇವಿ ಅಡುಗೆಯವಳಾಗಿ ಬಂದಳೋ. ಪದೇಪದೇ ಮಾತಾಜಿಯ ಆರೋಗ್ಯ ಕೈಕೊಡಲಾರಂಭಿಸಿತು. ಕಳೆದೆರಡು ವರ್ಷಗಳಿಂದ ಇದೇ ಮುಂದುವರಿದಿತ್ತು. ಜನವರಿ 14ರಂದು ಗಂಗಾ ಮಾತಾಜಿ ಉತ್ತರಾಧಿಕಾರಿಯೆಂದು ಘೋಷಣೆಯಾಗಿದ್ದೇ, ಬೇರೆಲ್ಲ ಕೆಲಸ ಬಿಟ್ಟು ರಾಜೇಶ್ವರಿಯನ್ನು ಅಡುಗೆಯವಳಾಗಿ ಕರೆತರುವ ಹರಕತ್ತಾಗಲಿ, ಅನಿವಾರ್ಯತೆಯಾಗಲಿ ಇರಲೇ ಇಲ್ಲ. ಇಲ್ಲಿಗೆ ವರ್ಷದ ಹಿಂದೆ ಮೈಸೂರಿನ ಬಸವಾಂಜಲಿ ಮಾತಾಜಿಯ ಆಶ್ರಮದಲ್ಲಿ ಅಡುಗೆಯವಳಾಗಿದ್ದವಳು ರಾಜೇಶ್ವರಿ. ಆಕೆಯನ್ನು ಅಲ್ಲಿಗೆ ಗಂಗಾ ಮಾತಾಜಿಯೇ ಕಳಿಸಿದ್ದು. ಇದ್ದಕ್ಕಿದ್ದಂತೆ ಬಸವಾಂಜಲಿ ಮಾತಾಜಿಯ ಆರೋಗ್ಯ ಕ್ಷೀಣಿಸಿದಾಗ ಆಸ್ಪತ್ರೆಯ ಡಾಕ್ಟರ್‌ಗಳು ಸ್ಪಷ್ಟವಾಗೇ ಅದನ್ನು ಫುಡ್‌ಪಾಯ್ಸನ್ ಎಂದಿದ್ದರು. ಅನುಮಾನಗೊಂಡ ಬಸವಾಂಜಲಿ ಅಡುಗೆಯವಳಾದ ರಾಜೇಶ್ವರಿಯ ಮೇಲೆ ಕಣ್ಣಿಟ್ಟಾಗಲೇ ಗೊತ್ತಾಗಿದ್ದು ಪ್ರತಿನಿತ್ಯ ಆಕೆ ಯಾವುದೋ ವಿಷವೊಂದನ್ನು ಆಹಾರದಲ್ಲಿ ಬೆರೆಸಿಕೊಡುತ್ತಿದ್ದಳು.

ಬಸವಾಂಜಲಿ ಮಾತಾಜಿಯ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ ರಾಜೇಶ್ವರಿಯನ್ನು ಆಶ್ರಮಕ್ಕೆ ಬಂದಿದ್ದ ದಯಾನಂದ ಸ್ವಾಮೀಜಿ ಬಾಯಿಬಿಡಿಸಿದ್ದ. ಆಕೆ ದಯಾನಂದ ಸ್ವಾಮೀಜಿಯೆದುರು ಲಿಂಗಾನಂದರಿಗೆ ನಾನೇ ವಿಷ ಹಾಕಿ ಕೊಂದೆ ಎಂದಿದ್ದನ್ನು ದಯಾನಂದ ಸ್ವಾಮೀಜಿಯ ಹೆಂಡತಿಯೇ ವೀಡಿಯೋ ಮಾಡಿಕೊಂಡಿದ್ದಳು. ಅದನ್ನು ವಾಟ್ಸಪ್‌ನಲ್ಲಿ ಜಾಹೀರುಮಾಡಿದ್ದೇ ಇಡೀ ಲಿಂಗವಂತ ಸಮೂಹವೇ ಬೆಚ್ಚಿಬಿದ್ದಿತ್ತು. ಈ ಬಗ್ಗೆ ಬಸವಾಂಜಲಿ ಮೈಸೂರು ಪೊಲೀಸರಿಗೆ ಮೌಖಿಕ ದೂರು ಕೊಟ್ಟರೇ ಹೊರತು ಅಧಿಕೃತವಾಗಿ ಕೇಸು ದಾಖಲಿಸಲಿಲ್ಲ. ಏಕೆಂದರೆ ರಾಜೇಶ್ವರಿಯ ತಪ್ಪೊಪ್ಪಿಗೆ ವೀಡಿಯೋ ಬಯಲಾಗಿದ್ದೇ ತಡ, ಗಂಗಾ ಮಾತಾಜಿ ತನ್ನ ಡ್ರೈವರ್ ಯೋಗೇಶ್‌ನನ್ನು ಮೈಸೂರಿಗೆ ಕಳಿಸಿದ್ದೇ ರಾತ್ರೋರಾತ್ರಿ ರಾಜೇಶ್ವರಿಯನ್ನು ಕಾರಿಗೆ ಹತ್ತಿಸಿಕೊಂಡು ಎಸ್ಕೇಪ್ ಮಾಡಿಸಿಬಿಟ್ಟಳು.

ಹಾಗೇ ಬಸವಾಂಜಲಿಯ ಆಶ್ರಮದಿಂದ ಪರಾರಿ ಮಾಡಿಸಿ ತಂದಿದ್ದ ರಾಜೇಶ್ವರಿ ತಾನೇ ವಿಷ ಹಾಕಿದೆನೆಂದು ಒಪ್ಪಿಕೊಂಡಿದ್ದು ಆಕೆ ಪೊಲೀಸರ ಪಾಲಾಗದ ಹಾಗೆ ಎಸ್ಕೇಪ್ ಮಾಡಿಸಿದ ಗಂಗಾ ಮಾತಾಜಿಗೆ ಅಂಥವಳನ್ನು ಮಾತೆ ಮಹಾದೇವಿಗೆ ಅಡುಗೆಯವಳಾಗಿಸಿ ಬಸವಮಂಟಪದಲ್ಲಿ ನೆಲೆಯಾಗಿಸುತ್ತಾಳೆಂದರೆ ಏನರ್ಥ?

ರಾಜೇಶ್ವರಿ ಅಡುಗೆಯವಳಾಗಿ 2017ರ ಜನವರಿಯಲ್ಲಿ ಬಸವಮಂಟಪಕ್ಕೆ ಕಾಲಿಟ್ಟಿದ್ದಕ್ಕೂ ಈಗ ಮಾತೆ ಮಹಾದೇವಿ ಸಾವುಬದುಕಿನ ನಡುವೆ ಹೆಣಗುತ್ತಾ ಕೊಲಂಬಿಯಾ ಆಸ್ಪತ್ರೆಯಲ್ಲಿ ನರಳುತ್ತಿರುವುದಕ್ಕೂ ಸಂಬಂಧವಿಲ್ಲವೆಂದರೆ ಯಾರೂ ನಂಬುತ್ತಿಲ್ಲ ಮತ್ತು ಗಂಗಾ ಮಾತಾಜಿಯ ಉದ್ದೇಶದ ಹಿಂದೆ ಯಾವ ನಿಗೂಢ ಕಾರಣವಿದೆಯೋ ಶಿವಪರಮಾತ್ಮನೇ ಬಲ್ಲ!

■ ರಾ. ಸೋಮನಾಥ್



ಮೂರೂರು ಗುಡ್ಡದ ಘಟನೆ ನಡೆದ ಹತ್ತು ದಿನಗಳ ನಂತರ ಸಹನಾ ತನ್ನ ಮೇಲಾದ ಲೈಂಗಿಕ ದೌರ್ಜನ್ಯ, ದೈಹಿಕ ಹಿಂಸೆ, ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಆರೋಪ ಹೊರಿಸಿ ಅವಹೇಳನ ಮಾಡಿರುವ ಬಗ್ಗೆ ಕಂಪ್ಲೇಂಟು ಕೊಡುವ ಧೈರ್ಯ ಮಾಡಿದ್ದಾಳೆ. ಇದು ಆಕೆ ಬದುಕಲು ಅನಿವಾರ್ಯವೂ ಆಗಿತ್ತು. ಸಹನಾ ಮತ್ತು ಹುಜೇಫ್ ಗುರುತಿಸಿದ 9 ಜನರ ಮೇಲೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗು ಐಪಿಸಿಯ ಹಲವು ಆ್ಯಕ್ಟ್‌ನಂತೆ ಕೇಸು ಜಡಿಯಲಾಗಿದೆ. ತಿಂಗಳುಗಟ್ಟಲೆ ತಲೆ ಮರೆಸಿಕೊಂಡ ಆರೋಪಿಗಳು ಈಗ ನಿರೀಕ್ಷಣಾ ಜಾಮೀನಿನ ಮೇಲಿದ್ದಾರೆ. ಹಿಂದೂತ್ವದ ದೀಕ್ಷೆ ಕೊಟ್ಟ ಜನಿವಾರಿಗಳು ಈಗ ಹಿಂದೆ ಸರಿದಿದ್ದಾರೆ. ಹುಂಬ ದೀವರ ಹುಡುಗರು ಸಿಕ್ಕಿಬಿದ್ದಿದ್ದಾರೆ. ಸಹನಾ ಕೊಟ್ಟ ಕಂಪ್ಲೇಂಟು ಕಚ್ಚುವ ಭೀತಿಯಲ್ಲಿ ಒದ್ದಾಡುತ್ತಿದ್ದಾರೆ. ಹಾಗಾಗಿ ಆ ದೂರು ವಾಪಸ್ ಪಡೆಯುವಂತೆ ಮಾಡಲು ತಿಪ್ಪರಲಾಗ ಹಾಕುತ್ತಿದ್ದಾರೆ. ಮೊನ್ನೆ ರಾಮರಥ ಯಾತ್ರೆಯ ನೆಪದಲ್ಲಿ ಹುಜೇಫನ ಮೇಲೆ ಹಿಂದೂತ್ವಕ್ಕೆ ಅಪಮಾನಿಸಿದ ಡೇಂಜರ್ ಆರೋಪ ಮಾಡಿ ಹಣ್ಣುಗಾಯಿ-ನೀರುಗಾಯಿ ಮಾಡಿದ್ದೂ ಕೇಸ್ ವಾಪಸಾತಿ ಬ್ಲ್ಯಾಕ್‌ಮೇಲ್ ತಂತ್ರಗಾರಿಕೆಯಷ್ಟೇ!


ಹುಜೇಫಾ


ಸಹನಾ


ಸಹನಾ ಮೇಲೆ ದಾಳಿ ಮಾಡುತ್ತಿರುವ ಪುಂಡರು


ಕುಮಟಾ

ಹಿಂದೂತ್ವ ಹರಾಮಿಗಳ ದಾದಾಗಿರಿ

ಕುಮಟಾ ಹುಸಿ ಹಿಂದೂತ್ವದ ಹಾವಳಿಗೆ ಕಂಗಾಲಾಗಿ ಕೂತಿದೆ! ಬೆರಳೆಣಿಕೆಯ ಪುಂಡು-ಪೋಕರಿಗಳು ಕೇಸರಿ ಶಾಲು ನೇತಾಕಿಕೊಂಡು ಈ ಕಡಲೂರಿನ ಕೋಮು ಸೌಹಾರ್ದ, ಶಾಂತಿ, ನೆಮ್ಮದಿ-ಸಾಮರಸ್ಯಕ್ಕೆ ಕೊಳ್ಳಿಯಿಡುತ್ತಿರುವುದು ಭೀಭತ್ಸವಾಗಿದೆ. ಸಾಬರ ಅಟ್ಟಾಡಿಸಿ ಹೊಡೆದರೆ, ಆ ಸಮುದಾಯದ ಅಂಗಡಿ-ಉದ್ಯಮ ಲೂಟಿ ಮಾಡಿ ಧ್ವಂಸಗೊಳಿಸಿದರೆ ಎಮ್ಮೆಲ್ಲೆಗಿರಿ ದಾರಿ ಕ್ಲಿಯರ್ ಆಗುತ್ತದೆಂಬ ಘಾತುಕ ಸ್ಕೆಚ್‌ನ ಹಲ್ಲೆ-ದಾಳಿ ನಿರಂತರವಾಗಿ ನಡೆಯುತ್ತಿದೆ. ಪೊಲೀಸ್ ವ್ಯವಸ್ಥೆಯನ್ನೇ ಪಳಗಿಸಿಕೊಂಡಿರುವ ಈ ಹಿಂದೂತ್ವದ ಹರಾಮಿ ಪಡೆಯ ದೊಂಬಿ-ದಾದಾಗಿರಿಗೆ ಸಾಬರಷ್ಟೇ ಅಲ್ಲ, ನೆಮ್ಮದಿಯ ಬದುಕು ಬಯಸುವ ಆಷ್ಟೂ ಜಾತಿ-ಧರ್ಮದ ಮಂದಿ ಚಿಂತೆಗೀಡಾಗಿದ್ದಾರೆ!!

ಮಜಾ ಎಂದರೆ, ಗೃಹಮಂತ್ರಿ ಪರಮ್‌ರ ಪೊಲೀಸ್ ಇಲಾಖೆಯ ಡಬ್ಬಲ್, ತ್ರಿಬಲ್ ಸ್ಟಾರ್‌ನ ಅಧಿಕಾರಿಗಳೂ ಈ ಸೈತಾನರ ಪಾತಕ ಕಣ್ಣು-ಬಾಯಿ ಬಿಟ್ಟುಕೊಂಡು ನೋಡುತ್ತಿದ್ದಾರೆ. ತಾವು ಹೇಳಿದಂತೆಯೇ ಎಫ್‌ಐಆರ್ ಹಾಕಬೇಕೆಂದು ಠಾಣೆಗೆ ಮುತ್ತಿಗೆ ಹಾಕಿ ಬೆದರಿಸುವ ಹಿಂದೂ ರೌಡಿಗಳ ಕಂಡರೆ ಅದ್ಯಾಕೋ ಪೊಲೀಸರ ಖದರೇ ಖತಮ್ ಆಗುತ್ತಿದೆ. ತುಂಬ ಹಿಂದಕ್ಕೆ ಹೋಗೋದು ಬೇಡ; ಬರೀ ಒಂದೂವರೆ ವರ್ಷದಲ್ಲಿ ಕುಮಟಾದ ಸುತ್ತಲಿನಲ್ಲಿ ನಡೆದ ಕೋಮು-ಜಾತಿ ಕಾರಣಕ್ಕೆ ನಡೆದ ಹಲ್ಲೆ-ದೊಂಬಿಯ ಗ್ರಾಫು ಪರಿಶೀಲಿಸಿದರೂ ಸಾಕು, ಒಂದು ನಿರ್ದಿಷ್ಟ ಗ್ಯಾಂಗ್ ಹಿಂದೂತ್ವದ ಅಮಲೇರಿಸಿಕೊಂಡು ಹಿಂಸಾಚಾರದಲ್ಲಿ ತೊಡಗಿಸಿಕೊಂಡು ಗಲಭೆಕೋರರೆಂದು ಕುಖ್ಯಾತವಾಗಿರುವುದು ಖಾತ್ರಿಯಾಗುತ್ತದೆ. ಮಸಲತ್ತಿನ ಮುಂಚೂಣಿಯಲ್ಲಿರುವವರಿಗೆ ಮತಾಂಧ ಹೀರೋ ಆದರೆ ಬಿಜೆಪಿ ಎಮ್ಮೆಲ್ಲೆಗಿರಿ ಚಾನ್ಸ್ ಕೊಡಬಹುದೆಂಬ ಹಪಾಹಪಿ.

ಅಘನಾಶಿನಿಯ ಹರಿಕಾಂತ (ಮೀನುಗಾರ) ಸಮುದಾಯದವರ ಮೇಲೆ ಮುಗಿಬಿದ್ದವರು, ಕುಮಟೆಯ ಫಿಶ್‌ಲ್ಯಾಂಡ್ ಹೋಟೇಲಿನ ಉಪ್ಪು ನಾಡವರ ಜಾತಿಯವನ ಥಳಿಸಿದವರು, ಮಾಜಿ ಶಾಸಕ ದಿನಕರ ಶೆಟ್ಟಿ ಮನೆಗೆ ಮುತ್ತಿಗೆ ಹಾಕಿದವರು, ನೂರ್ ಸಾಬನ ಹಾರ್ಡ್‌ವೇರ್ ಅಂಗಡಿ ದೋಚಿದವರು, ಕಿಣಿ ಅಂಗಡಿಯಲ್ಲಿ ಆವಾಜ್ ಹಾಕಿದವರು, ಕೊಂಕಣಿ ಹುಡುಗಿ ಸಹನಾ ನಾಯಕಳ ಮಾನ-ಪ್ರಾಣಕ್ಕೆ ಕೈಹಾಕಿದ ಪಿಶಾಚಿಗಳು, ದೇಶದ್ರೋಹದ ವಾಟ್ಸ್‌ಪ್ ಸಂದೇಶದ ನೆಪದಿಂದ ಪಾಪದ ಮುಸ್ಲಿಮ್ ವಿದ್ಯಾರ್ಥಿಯನ್ನು ಜೈಲಿಗಟ್ಟಿದವರು ಮತ್ತು ಹುಜೇಫಾ ಎಂಬ ತರುಣ ಹಿಂದೂ ಹುಡುಗಿಯನ್ನು ಮದುವೆಯಾಗಿದ್ದಾನೆಂದು ಸಿಕ್ಕಸಿಕ್ಕಲ್ಲಿ ಥಳಿಸುತ್ತಿರುವುದು ಒಂದೇ ಜಾತಿಯ ಶೇಕಡಾ 98ರಷ್ಟಿರುವ ಮದೋನ್ಮತ್ತ ಟೋಳಿ!


ಸಹನಾ ಹುಜೇಫಾ ಮದುವೆ ಫೋಟೋ

ಚಪ್ಪಲಿ ಚಮತ್ಕಾರ

ಇದೇ ಹಿಂದೂತ್ವ ಹುಚ್ಚಾಟದ ಹಿಂಡು ಮಾರ್ಚ್ 17 ಮತ್ತು 18ರಂದು ಎರಡು ದಿನ ಕುಮಟೆಯನ್ನು ಗಂಡಾಂತರದ ಮಡುವಿಗೆ ದೂಡಿ ಕೇಕೆ ಹಾಕಿದೆ. ಪುರಸಭೆ ಬಿಜೆಪಿ ಸದಸ್ಯ ವಿಶ್ವನಾಥ ನಾಯ್ಕ, ತಾಲ್ಲೂಕು ಹಿಂದೂ ಜಾಗರಣಾ ವೇದಿಕೆ ಮುಖಂಡ ಭಾಸ್ಕರ ನಾಯ್ಕ್, ನವೀನ್ ನಾಯ್ಕ್, ಸುರುಮಾರ ನಾಯ್ಕ ಮತ್ತು ಶ್ರೀಧರ ಅಂಕೋಲೇಕರ್ ಮುಂದಾಳತ್ವದ ಗುಂಪು ಮೂರುಕಟ್ಟೆಯ ಕಲ್ಸಂಕದ ಹುಜೇಫಾ ಶೇಖ್ ಎಂಬ ಸಾಬರ ಹುಡುಗನಿಗೆ ಮನಸೋ ಇಚ್ಛೆ ಹೊಡೆದು 'ಹಳೆ ಲೆಕ್ಕ' ಚುಕ್ತಾ ಮಾಡಿಕೊಳ್ಳಲು ಹವಣಿಸಿದೆ. ಈ ಹುಜೇಫನ ತಂ ಹುಸೇನ್, ತಾಯಿ ವಹೀದಾ ಕುಟುಂಬದ ಮೇ ಹಿಂದೂತ್ವವಾದಿಗಳು ಕಣ್ಣಿಟ್ಟು ಕಾಡಲಾರಂಭಿಸಿ ಹೆಚ್ಚುಕ ಎರಡು ವರ್ಷವೇ ಕಳೆದಿದೆ. ಸದ್ರಿ ದ್ವೇಷಾಸೂಯೆಯ ವ್ಯಾಜ್ಯಕ್ಕೆ ನಾನಾ ನಮೂನೆಯ ಧರ್ಮಕಾರಣ-ಕರ್ಮಕಾರಣ ಮಜಲುಗಳ ಸುತ್ತಿಕೊಂಡಿವೆ.

17.3.2017ರ ಸಂಜೆ ಕುಮಟೆಯ ಪೇಟೆಯ ಒಂದು ರಾಮರಥದ ಸಂಚಾರ ಏರ್ಪಟ್ಟಿತ್ತು, ಸಮರ್ಥ ರಾಮದಾಸ ಮಿಷನ್ ಪ್ರಾಯೋಜಕತ್ವದ ಆ ರ ಕೊಲ್ಲೂರಿಂದ ಬೆಂಗಳೂರಿಗೆ ಹೊರಟಿತ್ತು, ಸದ್ರಿ ರ ಕುಮಟೆಯ ಮಸೀದಿ ಬಳಿಯಿರುವ ಹುಜೇಫ್ ಕೆಲ ಮಾಡುವ ಮೊಬೈಲ್ ಅಂಗಡಿ ಎದುರೇ ಹಾದುಹೋಗಿತ ರಾಮನವಮಿ ರಥ ಕುಮಟಾ ದಾಟಿ ಹೋಗುತ್ತಿದ್ದಂತೆಯೆ ವಿಶು-ಭಾಸ್ಕರ್‌ನ ಗ್ಯಾಂಗ್ ಹುಜೇಫನ ಅಂಗಡಿ ಬ ಬಂದಿದೆ. ಬಂದವರೇ ಹಿಂದೆ-ಮುಂದೆ ನೋಡ ಹುಜೇಫನನ್ನು ದರ-ದರನೆ ಹೊರಗೆಳೆದು ತಂದು ಮನಸೋ ಇಚ್ಛೆ ಹೊಡೆದಿದೆ. ಜನ ಸೇರಿದಾಗ "ಈತ ರಾಮರ ಹೋಗುವಾಗ ಚಪ್ಪಲಿ ತೋರಿಸಿದ್ದಾನೆ.... ಕ್ಯಾಕರಿಸಿ ಎಂಜಲ ಒಗೆದಿದ್ದಾನೆ..." ಎಂದು ಧರ್ಮಾಧಾರಿತ ಆರೋ ಹೊರಿಸಿದ್ದಾರೆ. ಹುಜೇಫನಿಗೆ ಮಾತಾಡಲಿಕ್ಕೂ ಅವಕಾ ಕೊಡದೆ ಪೊಲೀಸ್ ಠಾಣೆಗೆ ಹೊತ್ಕೊಂಡಿದ್ದಾರೆ.

ಠಾಣೆ ಎದುರು ಸಂಘಪರಿವಾರ-ಹಿಂದೂತ್ವದ ದೊ ದಂಡೇ ನೋಡು-ನೋಡುತ್ತಿದ್ದಂತೆಯೇ ನೆರೆಯಿತು. ಹಿಂದ ಪುಂಡರ ಕಂಡರೆ ಮೊದಲೇ ಥರಗುಟ್ಟುವ ಕುಮಟೆಯ ಪೊಲೀಸರು ಹುಜೇಫನ ಯಾವ ಸಮಜಾಯಿಷಿಯ ಕೇಳುವ ಸ್ಥಿತಿಯಲ್ಲಿರಲಿಲ್ಲ. ತಾನು ರಥಕ್ಕೆ ಚಪ್ಪ ತೋರಿಸೋದಿರಲಿ, ಅಂಗಡಿಯಿಂದ ಹೊರಗೇ ಬಂದಿರಲಿ ವೆಂದು ಆತ ಅದೆಷ್ಟೇ ಹೇಳಿದರೂ ಕೇಳದ ಪೊಲೀಸರ ಜಗಳಗಂಟರ ಸಮಾಧಾನಿಸಲು ಸುಳ್ಳು ಕೇಸು ಜಡಿದರು ಹುಜೇಫನ ಬಂಧಿಸಿ ಜೈಲಿಗೆ ಹಾಕಿದರು.

ಮರುದಿನ ಬಲವಂತದ ಬಂದ್

ಮಾಡದ ತಪ್ಪಿಗೆ ಹುಜೇಫ್ ಜೈಲು ಪಾಲಾದರು ಹಿಂದೂ ಶೂರರಿಗೆ ಸಮಾಧಾನ ಆಗಲಿಲ್ಲ, ಅವರ ಗುರಿಯೆ ಬೇರೆಯಿತ್ತು, ಹಿಂದೆ ಹುಜೇಫನ ಹೆಂಡತಿ ಪುಂಡರ ಮೇ ಕೊಟ್ಟ ಕಂಪ್ಲೇಂಟು ಹಿಂತೆಗೆಸುವ ಪ್ಲಾನು ಹಿಂದೂವಾದಿಗ ದಾಗಿತ್ತು, ಹಾಗಾಗಿ ಹುಜೇಫನನ್ನು ಗಡಿಪಾರು ಮಾ ಬೇಕೆಂಬ ಬೇಡಿಕೆಯ ಬೊಬ್ಬೆ ಎಬ್ಬಿಸಲಾಯ್ತು, ಹೇಗಾದರು ಮಾಡಿ ಹುಜೇಫ್ ಮತ್ತು ಪೊಲೀಸ್ ವ್ಯವಸ್ಥೆಯನ್ನು ಹಣಿ ಲೇಬೇಕೆಂಬ ಹಠಕ್ಕೆ ಬಿದ್ದ ಹಿಂದೂ ಪುಂಡರು ಮರುದಿ ಕುಮಟಾ ನಗರ ಬಂದ್‌ಗೆ ಕರೆಕೊಟ್ಟರು. ಬೈಕ್ ರ್ಯಾ ಕಾನೂನುಬಾಹಿರವಾಗಿ ನಡೆಸಿದರು. ಈ ಗ್ಯಾಂಗಿನ ಪುವ ಪರಾಕ್ರಮ ಬಲ್ಲ ಕುಮಟೆಯ ವ್ಯಾಪಾರಸ್ಥರು ಗಡಿಬಿಡಿಯ ಅಂಗಡಿ ಬಾಗಿಲು ಎಳೆದು ಮನೆ ಸೇರಿಕೊಂಡರು.

ಭಯಾನಕ ಬೈಕ್ ರ್ಯಾಲಿ ಮತ್ತು ಬಲವಂತದ ಬಂದ್ ಮುಂದಾಳತ್ವ ವಹಿಸಿದ್ದು ಸೂರಜ್ ನಾಯ್ಕ್, ಸೋ ಎಂಬ ದೀವರ ಕುಲಕಂಠೀರವ. ಕಳೆದ ಬಾರಿ ಬಿಜೆಪಿಯಿಂ ಅಸೆಂಬ್ಲಿ ಎಲೆಕ್ಷನ್‌ಗೆ ಸ್ಪರ್ಧಿಸಿ ಮೂರನೇ ಸ್ಥಾನ ಎಸೆಯಲ್ಪಟ್ಟಿದ್ದ ಈ ಸೋನಿಗೆ ಎಮ್ಮೆಲ್ಲೆ ಆಗುವ ಚ ಮಾತ್ರ ಕಡಿಮೆ ಆಗಿಲ್ಲ, ತನ್ನ ಶಾಸಕತ್ವದ ತೆವಲಿಗಾಗಿ ಸುಶಿಕ್ಷಿತ ತರುಣ ಪಾಪದ ಸ್ವಜಾತಿ ಹುಡುಗರನ್ನು ಹಾ ತಪ್ಪಿಸುತ್ತಿದ್ದಾನೆಂಬ ಅಭಿಪ್ರಾಯ ಆತನ ಸಮುದಾಯದವ ವ್ಯಕ್ತಪಡಿಸುತ್ತಾರೆ. ಈಗಾತನಿಗೆ ಬಿಜೆಪಿ ಟಿಕೆಟ್ ಸಿಗಲಾರ ದುರಂತ ಎದುರಾಗಿದೆ. ಹೇಗಾದರೂ ಮಾ ಸಂಘಪರಿವಾರದ ಹಿರೇಮಣಿಗಳ ಗಮನ ಸೆಳೆಯುವ ಹ ಬಿದ್ದಿರುವ ಸೋನಿ ಪಾಪದ ದೀವರ ಹುಡುಗರ ಮುಂದಿಟ್ಟುಕೊಂಡು ಮಾಡಬಾರದ ನಖರಾ ಮಾಡುತ್ತಿದ್ದಾ


ತಂತಮ್ಮ ಹೊಟ್ಟೆಪಾಡಿನ ದಂಧೆ ಮರ್ಯಾದೆಯಿಂ ಮಾಡುತ್ತ ಎಲ್ಲರೊಂದಿಗೆ ಹೊಂದಿಕೊಂಡಿದ್ದ ದೀವ ಹುಡುಗರನ್ನು ಜನಿವಾರಿಗಳ 'ಧರ್ಮ' ಯುದ್ಧ ಕಾಲಾಳಾಗಿಸಿದ ತಪ್ಪಿಗೆ ಸೋನಿ ಸಂಕಷ್ಟ ಪಡುವಂತಾಗಿ ಈ ಸೋನಿಗೆ ಕಾರ್ಕಳದ ಶಾಸಕ ಸುನೀಲ್‌ಕುಮಾ ಎಂಬ ಅರೆಬಿಲ್ಲವ (ಈಡಿಗ) ಗುರು. ಸುನಿಲ್ ತಂ ಪಕ್ಕಾ ಬ್ರಾಹ್ಮಣ. ಹಾಗಾಗಿ ಆತ ಬಿಜೆಪಿ ಗರ್ಭಗುಡಿಯ ಬಚಾವಾಗಿದ್ದಾನೆ. ದತ್ತಪೀಠದ ಭಾನ್ಗಡಿಯ ಫ ಅನುಭವಿಸಿದ್ದಾನೆ. ಆದರೆ ಶುದ್ಧ ಶೂದ್ರನಾದ ಸೋನಿ ಅಂಥ ಭಾಗ್ಯ ಬಿಜೆಪಿಯಲ್ಲಿ ಸಿಗುವುದು ಕಷ್ಟ! ಆದರ ಸೋನಿ ಧರ್ಮಕಾರಣದ ಮೈಲೇಜ್ ಸಿಗುವ ಗೊಂದ ಗಲಾಟೆಯ ಮುಂದಿನ ಸಾಲಲ್ಲಿ ನಿಲ್ಲುತ್ತಿದ್ದಾನೆ. ಪಾಪ ದೀವರ ಹುಡುಗರನ್ನು ಬಲಿ ಕೊಡುತ್ತಿದ್ದಾನೆ!

ಹುಜೇಫ್ ಚಪ್ಪಲಿ ತೋರಿಸಿಲ್ಲ!

ಕುಮಟೆಯ ಮೂರುಕಟ್ಟೆಯ ಹುಸೇನ್ ಶೇಖ್ ಮ ವಹೀದಾರ ಏಕೈಕ ಗಂಡು ಸಂತಾನ ಹುಜೇಫ ಹುಡುಗಾಟಿಕೆ-ಹೊಣೆಗೇಡಿತನದಲ್ಲೇ ಕಾಲ ಕಳೆ ಹುಜೇಫಾಗೆ ವಿದ್ಯೆ ಸರಿಯಾಗಿ ತಲೆಗೆ ಹತ್ತಲಿಲ್ಲ, ದ್ವಿತೀಯ ಪಿಯುಸಿ ವಿದ್ಯಾಭ್ಯಾಸಕ್ಕೆ ಬೈ ಹೇಳಿದ. ಆತನ ತಾಯ್ತಂ ಡಿಪ್ಲೊಮಾಕ್ಕೆ ಕಳಿಸಿದರೂ ಭರ್ತಿಯಾಗಲಿಲ್ಲ, ಹಾಗ

ದಗಲುಬಾಜಿ ದಿನಕರ ಶೆಟ್ಟಿ

ಮಾಜಿ ಶಾಸಕ ದಿನಕರ ಶೆಟ್ಟಿ ಜೆಡಿಎಸ್‌ಗೆ ಬೈಹೇಳಿ ಬಿಜೆಪಿ ಸೇರಿ ಇನ್ನೂ ತಿಂಗಳಾಗಿಲ್ಲ, ಆಗಲೇ ಆತನಿಗೆ ಶಾಸಕನಾಗಲು ತಾನು ಎಂಥ ಬರ್ಬರ-ಹೇಯ-ಅಮಾನುಷ ಮತಾಂಧನಾಗಲಿಕ್ಕೂ ಸಿದ್ಧನೆಂದು ಸಾಬೀತುಪಡಿಸಲು ಒಂದು ಅವಕಾಶ ಸಿಕ್ಕಿದೆ! ಸಾಬರ ಹುಡುಗ ಹುಜೇಫಾ ಹಿಂದೂ ರಥಯಾತ್ರೆಗೆ ಬುದ್ಧಿಪೂರ್ವಕವಾಗೇ ಅಪಮಾನಿಸಿದ್ದಾನೆಂದು ಸುಳ್ಳು ಹುಯಿಲೆಬ್ಬಿಸಿ ಆತನ ಗಡಿಪಾರಿಗಾಗಿ ಬಂದ್‌ಗೆ ಹಿಂದೂ ಸಂಘಟನೆ ಸರದಾರರು ಬೀದಿಗೆ ಇಳಿದಿದ್ದರಲ್ಲ! ಆಗ ಬಲವಂತದಲ್ಲಿ ಅಂಗಡಿ ಮುಚ್ಚಿಸಲು ಹವಣಿಸಿದವರಿಗೆ ಡಿವೈಎಸ್‌ಪಿ ಶಿವಕುಮಾರ್ ಎಚ್ಚರಿಕೆ ಕೊಡುತ್ತಿದ್ದರು. ಆಗ ಅದೆಲ್ಲಿಂದಲೋ ಪ್ರತ್ಯಕ್ಷನಾದ ಮಾಜಿ ಶಾಸಕ ದಿನಕರ ಶೆಟ್ಟಿ "ಪೊಲೀಸರ ದೌರ್ಜನ್ಯ ಜಾಸ್ತಿಯಾಯ್ತು... ಇದೆಲ್ಲ ಸರಿಯಾಗದು... ರಕ್ತಪಾತ ಆದೀತು..." ಎಂದು ಹಾರಾಡಿದ.


ದಿನಕರ ಶೆಟ್ಟಿ- ಮಾಜಿ ಶಾಸಕ

ದಿನಕರನ ಪೊಕ್ಕು ಪೌರುಷ ಕಂಡ ಡಿವೈಎಸ್‌ಪಿ "ಇಂಥ ರಕ್ತಪಾತ ನನ್ನ ಸರ್ವೀಸ್‌ನಲ್ಲಿ ಭಾಳ ನೋಡಿದ್ದೇನೆ... ಇದಕ್ಕೆಲ್ಲ ಹೆದರೋದಿಲ್ಲ..." ಎಂದು ಝಾಡಿಸಿದರು. ಬಾಲ ಮುದುರಿಕೊಂಡ ದಿನಕರ ಜಾಗ ಖಾಲಿ ಮಾಡಿದ್ದಾನೆ. 1980 ದಶಕದಿಂದ ಜನತಾ ಪರಿವಾರದಲ್ಲಿ ರಾಜಕಾರಣ ಮಾಡುತ್ತ ಬಂದಿದ್ದ ದಿನಕರ ಕುಮಟಾ ಕ್ಷೇತ್ರದಲ್ಲಿ ಎಲ್ಲ ಜಾತಿ-ಧರ್ಮದ ನಾಯಕನಾಗಿ ಬೆಳೆದಿದ್ದ. ಆದರೆ ರಾತ್ರೋರಾತ್ರಿ ಆತ ಪುಂಡ ಚಡ್ಡಿಗಳ ಲೀಡರಿಕೆಗೆ ಸೀಮಿತನಾಗಿ ಹೋಗಿದ್ದಾನೆ. ಜನಸಂಘದ ಕಾಲದ ಸಂಘಿಗಳೂ ಧರಿಸದಷ್ಟು ದಪ್ಪದ ಕುಂಕುಮ ಹಣೆಗೆ ಬಡಿದುಕೊಂಡು ಕಮ್ಯುನಲ್ ರೈಡ್‌ಗೆ ದಿನಕರ ಬೀದಿಗೆ ಬಂದಿದ್ದು ಜನರಲ್ಲಿ ಅಸಹ್ಯ ಮೂಡಿಸಿಬಿಟ್ಟಿದೆ.

ಪಾಪ ಬಿಜೆಪಿಯಲ್ಲಿ ಅಸ್ಪೃಶ್ಯನಂತಾಗಿರುವ ದಿನಕರನಿಗೆ ಈ ಕುಂಕುಮ ಸಿಂಬಲ್ ಅನಿವಾರ್ಯವಾಗಿದೆ. ಬಿಜೆಪಿಯ ಮೂಲ ನಿವಾಸಿಗಳು ಈತನನ್ನು ಮುಟ್ಟಿಸಿಕೊಳ್ಳಲು ಹೇಸುತ್ತಿದ್ದಾರೆ. ಸೂರಜ್ ಸೋನಿ ಪಟಾಲಮ್ ಅಂತೂ ದಿನಕರನ ತಲೆ ಕಂಡರೆ ಅವಡುಗಚ್ಚುತ್ತ ಶಾಪವೇ ಹಾಕುತ್ತದೆ. ಮೊನ್ನೆ ನಡೆದ ಬಂದ್‌ನಲ್ಲೂ ಸೋನಿ ಪಡೆ ದಿನಕರನನು ದೂರವೇ ಇಟ್ಟಿತ್ತು, ಶಾಸಕತ್ವದ ವ್ಯಾಮೋಹ ದಿನಕರನನ್ನು ದಯನೀಯ ಸ್ಥಿತಿಗೆ ತಳ್ಳಿರುವುದು ಕುಮಟೆಯಲ್ಲಿ ನಗೆಪಾಟಲಿಗೀಡಾಗಿದೆ!!



ಸೂರಜ್ ನಾಯ್ಕ ಸೋನಿ

...ಅನಲ್ಲ, ಮತಾಂಧನಂತೂ ಅಲ್ಲವೇ ಅಲ್ಲ; ಆತನಿಗೆ ...ೂ ಗೆಳೆಯರೇ ಜಾಸ್ತಿ. ಇಂಥ ಹುಜೇಫ ಕಾಲೇಜಿನಲ್ಲಿ ... ಹಿಂದೂ ಹುಡುಗಿಯ ಪ್ರೇಮಿಸತೊಡಗಿದ್ದ. ...ಂದು ದೊಡ್ಡ ಧರ್ಮಾಂಧ ಭಾನ್ಗಡಿಯೇ ...ೋಯ್ತು. ಹೀಗಾಗಿ ಹುಜೇಫ್ ಮತ್ತಾತನ ಗೆಳತಿ ... ಕುಮಟೆಯ ಜಗದ್ವಿಖ್ಯಾತ ಹಿಂದೂ ಪಟಾಲಮ್‌ನ ...ಣ್ಣಿಗೆ ತುತ್ತಾಗಿದ್ದರು.

...ವಿಶು, ಪಚ್ಚು, ನವೀನ್, ಭಾಸ್ಕರ್, ಸೋನಿ.... ವಗೈರೆ ...ಗಳು ತನ್ನನ್ನು ತಿನ್ನಲು ಸಮಯ ಸಾಧಿಸುತ್ತಿರುವುದು ...ೇಫನಿಗೆ ಗೊತ್ತಿತ್ತು. ಆತನಿಗೆ ಹಿಂದೂ ಗೆಳೆಯರೇ ...ಕೆಯಿಂದಿರಲು ಹೇಳಿದ್ದರು. ಹೀಗಾಗಿ ವಿಶು-ಸೋನಿ ...ದ ಯಾರನ್ನು ಕಂಡರೂ ಹುಜೇಫ ತಲೆತಗ್ಗಿಸಿಕೊಂಡು ...ಗುವುದು ರೂಢಿ ಮಾಡಿಕೊಂಡಿದ್ದ. ಮೊನ್ನೆ ರಾಮರಥ ...ಗುವಾಗಲೂ ಅಷ್ಟೇ.

...ಈ ಧೀರಾಧಿಧೀರ ಹಿಂದೂ ನೇತಾರರು ರಥದೊಂದಿಗೆ ...ವುದನ್ನು ಆತ ಅಂಗಡಿ ಒಳಗಿಂದಲೇ ಗಮನಿಸಿ ತನ್ನ ...ದಲ್ಲಿ ನಿರತನಾಗಿದ್ದ. ಚಪ್ಪಲಿ ತೋರಿಸುವ ಅಥವಾ ...ರ ರಥಕ್ಕೆ ಎಂಜಲು ಉಗಿಯುವ ಮನಸ್ಥಿತಿಯೂ ...ದಲ್ಲ. ಆತ ಅಂಥ ಅಪಚಾರ ಮಾಡಿಲ್ಲವೆಂಬುದನ್ನು ...ಅಂಗಡಿಯಲ್ಲಿದ್ದ ಸಿಸಿ ಕ್ಯಾಮೆರಾ ಸಾರಿಸಾರಿ ಹೇಳಿದೆ. ...ನ್ನು ಪೊಲೀಸರೂ ಪಕ್ಕಾ ಮಾಡಿಕೊಂಡಿದ್ದಾರೆ. ಆದರೂ ...ೂ ಗೂಂಡಾಗಳಿಗೆ ಹೆದರಿ ಹುಜೇಫನ ಮೇಲೆ ... ಕೇಸು ಹಾಕಿದ್ದಾರೆ. ಎಂಥ ನಾಚಿಕೇಡು!!

...ಹಾಗೊಮ್ಮೆ ಹುಜೇಫ ರಥಕ್ಕೆ ಅಪಮಾನಿಸಿದ್ದೇ ...ಾದರೆ ಆಗ ಹಿಂದೂ ಧರ್ಮದ ರಕ್ಷಣೆಯ ಗುತ್ತಿಗೆ ...ದವರು ಏಕೆ ತರಾಟೆಗೆ ತೆಗೆದುಕೊಳ್ಳಲಿಲ್ಲ? ರಥಯಾತ್ರೆ ...ಟೆಯ ಸರಹದ್ದು ದಾಟಿಸಿ ಬಂದ ಬಳಿಕವೇಕೆ ...ೇಫನ 'ವಿಚಾರಣೆ' ಮಾಡಿದರು? ಹುಜೇಫನ ಅಂಗಡಿ ...ರು ರಥಯಾತ್ರೆ ಹಾದುಹೋದ ನಂತರವೇಕೆ ಹುಸಿ ...ರೆಬ್ಬಿಸಿ ದಾಂಧಲೆ ಮಾಡಿದರು? ರಥಯಾತ್ರೆಯನ್ನು ...ಾಗಿಟ್ಟುಕೊಂಡು ವಿಶು-ಭಾಸ್ಕರ್-ಸೋನಿ ವಗೈರೆ ...ೂ ಧರ್ಮಾತ್ಮರು ಹುಜೇಫನ ಮೇಲೇರಿ ಏಕೆ ...ದರು? ಈ ಗುಟ್ಟು ಈಗ ನಿಸ್ಸಂಶಯವಾಗಿ ರಟ್ಟಾಗಿದೆ. ...ಟೆಯಲ್ಲಿ ಯಾರನ್ನೇ ಕೇಳಿ- ಹುಜೇಫನ ಮೇಲಿನ ...ೇಪ ಕಟ್ಟು ಕತೆ; ಆತನ ಹೆಂಡತಿ ಕೊಟ್ಟ ದೂರು ...ಗಸಲು ಮಾಡಿದ ಷಡ್ಯಂತ್ರವಿದು ಎಂದು ಹೇಳುತ್ತಾರೆ. ... ಹಿಂದೂ ಘಂಟರ್‌ಗಳ ಅಸಲಿಯತ್ತು- ಚಾರಿತ್ರ್ಯ ...ಗೆ ಬದ್ದಂತಾಗಿದೆ!

ಪ್ರೇಮ ಪ್ರಸಂಗ

...ಹುಜೇಫ ಮತ್ತು ಕೊಂಕಣಿಗರ ಪೋರಿ ನಡುವೆ ... ಪ್ರಸಂಗ ನಡೆಯುತ್ತಿದ್ದದ್ದು ಸುತ್ತಲಿನವರಿಗೆಲ್ಲ ಗೊತ್ತಿದ್ದ ...ಸಂಗ ರಹಸ್ಯ. ಇದನ್ನು ಬಳಸಿಕೊಂಡು ಹುಜೇಫನ ...ಂಬದ ಮೇಲಿನ ಸೇಡು ತೀರಿಸಿಕೊಳ್ಳಲು ಪಕ್ಕದ ...ಯ ಭಂಡಾರಿ ಮಾಸ್ತರ್ ಪರಿವಾರ ಪ್ರಯತ್ನ ನಡೆಸಿತ್ತು. ... ಶಿಕ್ಷಕ ರಮೇಶ್ ಭಂಡಾರಿ ಮತ್ತು ಹುಜೇಫನ ...ರ ನಡುವೆ ಭೂವ್ಯಾಜ್ಯ ಎರಡು ವರ್ಷದಿಂದ ನಡೆಯು... ಈ ಜಗಳದಲ್ಲಿ ಭಂಡಾರಿ ಮಾಸ್ತರ್ ಹುಜೇಫನ

ದೀವರ ಹಿರಿಯರು ಯೋಚಿಸಲಿ!!

ಉತ್ತರ ಕನ್ನಡ ಮೇಲುವರ್ಗದ ಜನಿವಾರ ರಾಜಕಾರಣಕ್ಕೆ ಸವಾಲಾಗಿ ನಿಂತವರು ದೀವರು. ದೀವರೆಂದರೆ ಹಿಂದುಳಿದವರ ಧ್ವನಿ ಎಂಬಂತಾಗಿತ್ತು, ಬಂಗಾರಪ್ಪನಂಥವರ ಸಮರ್ಥ ನಾಯಕತ್ವವಿತ್ತು, ದೀವರ (ಈಡಿಗರ) ಸಮುದಾಯದ ಒಬ್ಬ ಎಂಪಿ, ಶಾಸಕರು ನಿರಂತರವಾಗಿ ಆಯ್ಕೆಯಾಗುತ್ತಿದ್ದರು. ಯಾವಾಗ ಬಿಜೆಪಿಯ ಕಮ್ಯುನಲ್ ರಾಜಕಾರಣದ ಕುತಂತ್ರಕ್ಕೆ ದೀವರ ಹೊಸ ತಲೆಮಾರು ಮಾರುಹೋಯ್ತೋ ಆಗದರ ಅಧಃಪತನವೂ ಶುರುವಾಯ್ತು!

ಜಿಲ್ಲೆಯ ಧರ್ಮಕಾರಣದ ಗುದುಮುರಿಗೆಯ ಮುಂಚೂಣಿಯಲ್ಲಿ ದೀವರ ಹುಡುಗರಿದ್ದಾರೆಂಬ ಭಾವನೆ ಬೆಳೆದಿದೆ. ಹಿಂದೂತ್ವದ ದೀಕ್ಷೆ ದೀವರ ಹುಡುಗರಿಗೆ ನೀಡಿದ ಜನಿವಾರಿ ಸಂಘಿಗಳು ನಿಧಾನಕ್ಕೆ ನೇಪಥ್ಯಕ್ಕೆ ಸರಿಯುತ್ತಿದ್ದಾರೆ. ಶೂದ್ರ ದೀವರ ಮೊಣಕೈಗೆ ಅಧಿಕಾರದ ತುಪ್ಪ ಸವರಿದ ಚೆಡ್ಡಿಗಳು ಅಖಾಡಕ್ಕೆ ಬಿಟ್ಟು ದುರ್ಲಾಭ ಗಿಟ್ಟಿಸಲು ಹವಣಿಸುತ್ತಿದ್ದಾರೆ. ಮುನ್ನುಗ್ಗುವ ಸೈನಿಕ ಗುಣಧರ್ಮದ ದೀವರ ಹುಡುಗರು ಸಂಘಪರಿವಾರದ ಮತಾಂಧ ಯುದ್ಧದ ಕಾಲಾಳುಗಳಾಗಿ ರಿಸ್ಕಿಗೆ ಬಿದ್ದಿದ್ದಾರೆ. ಇದು ಕುಮಟಾದಂಥಲ್ಲಿ ಕಣ್ಣಿಗೆ ರಾಚುವ ದುರಂತ!

ಹಿಂದೂತ್ವ ಹೋರಾಟದ ರಕ್ಷಕ ಭಟರಂತೆ ಕಾಣಿಸಿಕೊಳ್ಳುವ ಉಮೇದಿಯ ಪೆದ್ದು ದೀವರ ಪೋರರನ್ನು ಗೂಂಡಾಗಳಂತೆ, ಜಗಳಗಂಟರಂತೆ ಬಿಜೆಪಿ-ಸಂಘಿ ಜನಿವಾರಿಗಳು ವ್ಯವಸ್ಥಿತವಾಗಿ ಬಿಂಬಿಸುತ್ತಿದ್ದಾರೆ. ಸೂರಜ್ ಸೋನಿಯನ್ನು ಮಟ್ಟ ಹಾಕಲೆಂದೇ ಮಾಜಿ ಶಾಸಕ ದಿನಕರ ಶೆಟ್ಟಿಯನ್ನು ಛೂಬಿಡುತ್ತಿದ್ದಾರೆ ಬಿಜೆಪಿ ಬ್ರಾಹ್ಮಣ-ಕೊಂಕಣಿಗರು. ಕುಮಟಾದಲ್ಲಂತೂ ದೀವರ ಹುಡುಗರೇ ಎಲ್ಲ ಅನಿಷ್ಟಕ್ಕೆ ಕಾರಣರು ಎಂಬ ಸೀನ್ ಸೃಷ್ಟಿಸಲಾಗುತ್ತಿದೆ. ಇದನ್ನು ವಿಶು, ಪಚ್ಚುರಂಥ ಉತ್ಸುಕರಾದ ಹುಡುಗರು ಅರ್ಥಮಾಡಿಕೊಳ್ಳಬೇಕಿದೆ. ಸಣ್ಣ-ಪುಟ್ಟ ಗೊಂದಲಕ್ಕೆ ವಿನಾಕಾರಣ ಸಾಬರ ಸತಾಯಿಸುವುದಕ್ಕೆ ತೋಳೇರಿಸಿಹೋದರೆ ಇಡೀ ದೀವರ ಸಮಾಜಕ್ಕೆ ಕಳಂಕ ಹಚ್ಚಲು ಮೇಲುವರ್ಗದ ಶೋಷಕರಿಗೆ ಅನುಕೂಲವಾಗುತ್ತದೆ. ಇತರ ಹಿಂದುಳಿದವರೂ ತಿರುಗಿಬೀಳುತ್ತಾರೆಂಬ ಸತ್ಯ ಅರಿಯಬೇಕಿದೆ.

ಈಗಲಾದರೂ ದೀವರ ಹಿರಿಯರು ಎಚ್ಚೆತ್ತುಕೊಂಡು ಹುಂಬ ಯುವಕರಿಗೆ ಬುದ್ಧಿ ಹೇಳಿ ನಿಯಂತ್ರಿಸುವ ಯೋಚನೆ ಮಾಡಬೇಕಾಗಿದೆ. ಉಬಿರೆಯ ದೀವರ ಗುರುಮಠದ ಸ್ವಾಮಿ ಬ್ರಹ್ಮಾನಂದ ಸರಸ್ವತಿ ಶಿಷ್ಯ ಸಂಕುಲ ಸಂಘಪರಿವಾರದ ವಿಧ್ವಂಸಕ-ವಿದ್ವೇಷದ ಮತಾಂಧ ಕಿತಾಪತಿಗೆ ಬಲಿ ಬೀಳದಂತೆ ತಡೆಯಬೇಕಿದೆ. ಕುಮಟಾದಲ್ಲಿ ಆಗುತ್ತಿರುವ ಅನಾಹುತ, ಧಕ್ಕೆ ನಿಯಂತ್ರಿಸಬೇಕಿದೆ. ಇಲ್ಲದಿದ್ದರೆ ಧರ್ಮಯುದ್ಧ ಗೌಣವಾಗಿ ಜಾತಿಸಂಘರ್ಷ ಸಂಕಷ್ಟ ಎದುರಾದೀತು!





ಹುಜೇಫಾ ತಾಯಿ-ತಂದೆ

ಡಬ್ಬಲ್ ಡಿಗ್ರಿಯಾಗಿರುವ ಸಹೋದರಿಗೆ ಹೊಡೆದಿದ್ದ. ಆತನ ತಾಯ್ತಂದೆಯರಿಗೂ ಬೆದರಿಸಿದ್ದ. ಇದು ಪೊಲೀಸ್ ಪ್ರಕರಣವಾಗಿತ್ತು. ಹೇಗಾದರೂ ಮಾಡಿ ಹುಜೇಫನ ತಂದೆಯ ಜಾಗದಲ್ಲೇ ರಸ್ತೆ ಮಾಡಿಕೊಳ್ಳುವ ಹಠಕ್ಕೆ ಬಿದ್ದಿದ್ದ ಭಂಡಾರಿ ಕೇಸು ಹಿಂದೂ ಸಂಘಟನೆಯ ಪುಂಡರಿಗೆ ವಹಿಸಿದ್ದ.

ಸಾಬರ ಕುಟುಂಬವನ್ನು ಎಷ್ಟು ಸತಾಯಿಸಿದರೂ ಹಿಂದೂ ರೌಡಿಗಳಿಗೆ ವ್ಯಾಜ್ಯ ಬಗೆಹರಿಸಲು ಆಗಲಿಲ್ಲ. ಪೊಲೀಸರೂ ಹಿಂದೂಗಳ ಪರವಾಗೇ ವಕಾಲತ್ತು ವಹಿಸಿದ್ದರು. ಆದರೂ ಕೇಸು ಕೋರ್ಟಿಗೆ ಹೋಯ್ತು. ಇದು ಮಧ್ಯಸ್ಥಿಕೆ ವಹಿಸಿದ್ದ ಹಿಂದೂ ರೌಡಿಯನ್ನು ಕೆರಳಿಸಿತ್ತು. ಆತ ತನ್ನ ಸಹಚರರ ಜತೆ ಸೇರಿ ಹುಜೇಫ ಕೊಂಕಣಿ ಕೂಸಿನ ಜತೆಗಿರುವಾಗ ಹಿಡಿದು ಹೊಡೆಯುವ ಸ್ಕೆಚ್ ಹಾಕಿಕೊಂಡಿದ್ದ. ಅಂತೂ ಅಂಥದೊಂದು ಮುಹೂರ್ತ ಸಿಕ್ಕೇಬಿಟ್ಟಿತು ಹಿಂದೂ ಭಂಡರಿಗೆ. ಅದು 2016 ಜೂನ್ 9ನೇ ದಿನ. ಕುಮಟೆಯ ಹೊರವಲಯದಲ್ಲಿರುವ ಮೂರೂರು ಗುಡ್ಡಕ್ಕೆ ಹುಜೇಫ-ಸಹನಾ ರಿಕ್ಷಾದಲ್ಲಿ ಹೋಗಿದ್ದರು. ಜತೆಯಲ್ಲಿ ಒಬ್ಬ ಗೆಳೆಯನೂ ಇದ್ದ.

ರಿಕ್ಷಾ ಚಲಿಸುತ್ತಲೇ ಇತ್ತು. ಗುಡ್ಡದ ಬಳಿ ರಿಕ್ಷಾ ಬರುತ್ತಿದ್ದಂತೆಯೇ ನಾಮಾಂಕಿತ ಹಿಂದೂ ಹೊಡೆದಾಟಗಾರರೆಂದೇ ಹೆಸರುವಾಸಿ ಆಗಿರುವ ವಿಶು, ಪಚ್ಚು, ಸುಬ್ಬು, ನವೀನ್... ವಗೈರೆ ಒಟ್ಟು 9 ಜನ ಬೈಕ್‌ನಲ್ಲಿ ಬಂದಿದ್ದಾರೆ. ಈ 9 ಜನರನ್ನು ಸರಿಯಾಗಿ ಗುರುತಿಸಿರುವ ಹುಜೇಫ್-ಸಹನಾರಿಗೆ ಜತೆಗಿದ್ದ ಉಳಿದ ಹತ್ತಾರು ಮಂದಿಯ ಪರಿಚಯವಿರಲಿಲ್ಲ. ಇವರೆಲ್ಲ ಹುಜೇಫನ ಮುಖ-ಮೂತಿ ನೋಡದೆ ಹೊಡೆದಿದ್ದಾರೆ. "ಹಿಂದೂ ಹುಡುಗಿ ಲವ್ ಮಾಡ್ತೀಯಾ ಮಗನೆ...?!" ಎಂದು ಮಾರಣಾಂತಿಕವಾಗಿ ಥಳಿಸಿದ್ದಾರೆ. ಇದನ್ನು ನೋಡಲಾಗದೆ ಅಡ್ಡ ನಿಂತ ಸಹನಾಳನ್ನು ಅವಾಚ್ಯವಾಗಿ ನಿಂದಿಸಿದ್ದಾರೆ. ಲೈಂಗಿಕಪೀಡನೆ ಕೊಟ್ಟಿದ್ದಾರೆ. ದೈಹಿಕ ಹಿಂಸೆ ನೀಡಿದ್ದಾರೆ. ಸುರತಕ್ಕೆ ಬಾ ಎಂದು ಕಾಡಿದ್ದಾರೆ. ಆಕೆ ಪ್ರತಿಭಟಿಸಿದಾಗ ಕೈಹಿಂದಕ್ಕೆಳೆದು ತಿರುಗಿಸಿದ್ದಾರೆ. ಆಗಾಕೆ ಬಚಾವಾಗಲು ಒಬ್ಬನ ಕೈಗೆ ಬಲವಾಗಿ ಕಚ್ಚಿ ತಪ್ಪಿಸಿಕೊಂಡಿದ್ದಾಳೆ. ಆಗಾಕೆಯ ವೇಲು ಎಳೆದು ಅಸಹ್ಯ ಫೋಟೋ ಹೊಡೆದಿದ್ದಾರೆ.

ತಾಸುಗಟ್ಟಲೆ ಹಿಂಸೆ, ಲೈಂಗಿಕ ಕಿರುಕುಳ ಕೊಟ್ಟಿದ್ದಾರೆ. ಆಗ ಹುಜೇಫಾ ಪೊಲೀಸರಿಗೆ ಫೋನು ಮಾಡಿದ್ದಾನೆ. ಮನೆಯ ಲ್ಯಾಂಡ್ ಭಾನ್ಗಡಿ ಹೊತ್ತಲ್ಲಿ ಆತ ಎಸ್‌ಐ ಮೊಬೈಲ್ ನಂಬರ್ ಪಡೆದಿದ್ದು ಪ್ರಯೋಜನಕ್ಕೆ ಬಂದಿದೆ. ಪೊಲೀಸರು ಬಂದು ಆ ಪ್ರೇಮಿಗಳ ಬಚಾಯಿಸಿದ್ದಾರೆ. ಇಷ್ಟಕ್ಕೆ ಈ ದೇಶಭಕ್ತರ ವಿಕೃತ ಮುಗಿದಿಲ್ಲ. ಜಾಲತಾಣದಲ್ಲಿ ಹುಡುಗಿಯ ಫೋಟೋ ಹಾಕಿ ಅನೈತಿಕ ಚಟುವಟಿಕೆ ನಡೆಸುತ್ತಿದ್ದರೆಂದು ಬರೆದಿದ್ದಾರೆ. ಫೇಸ್‌ಬುಕ್, ವಾಟ್ಸಪ್, ಟಿವಿ, ಪತ್ರಿಕೆಗಳಿಗೆಲ್ಲ ಕತೆ ಕಟ್ಟಿ ಹಂಚಿದ್ದಾರೆ. ಈ ಸ್ವಯಂಘೋಷಿತ ಹಿಂದೂಧರ್ಮ ರಕ್ಷಕರೇ ಹಿಂದೂ ಹುಡುಗಿಯ ಮಾನಹಾನಿ ಮಾಡಿದ್ದಾರೆ. ಮೈಮೇಲೆ ಒಂದೇ ಒಂದು ಬಟ್ಟೆಯಿರಲಿಲ್ಲವೆಂಬ ಸುಳ್ಳನ್ನು ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

ಅನಿವಾರ್ಯವಾಯ್ತು ಮದುವೆ

ಅಂತರ್ಧರ್ಮೀಯ ಪ್ರೇಮವೇ ಘೋರ ಅಪರಾಧ ಎಂಬಂತೆ ಬಿಂಬಿಸಿದರು ಹಿಂದೂ ಧರ್ಮಾತ್ಮರು. ತಮಾಷೆಯೆಂದರೆ, ಧರ್ಮಗೇಡಿ ಮದುವೆ ಅಕ್ಷಮ್ಯ ಪಾತಕ ಎನ್ನುವ ಹಿಂದೂ ಜಾಗರಣಾ ವೇದಿಕೆಯ ಅಧ್ಯಕ್ಷ ಭಾಸ್ಕರ ನಾಯ್ಕನೇ ಕ್ರಿಶ್ಚಿಯನ್ ಹುಡುಗಿಯನ್ನು ಗಂಧರ್ವ ವಿವಾಹವಾಗಿದ್ದಾನೆ. ಸಹನಾಳ ಬಡ ತಂದೆ-ತಾಯಿಗಳ ಮೇಲೆ ತರತರದ ಒತ್ತಡ-ಬೆದರಿಕೆ ಹಾಕಲಾಯಿತು. ಅವರು ಮಗಳನ್ನು ಮನೆಗೆ ಒಯ್ಯಲು ಸಿದ್ಧರಾಗಲಿಲ್ಲ.

ಹಾಗಾಗಿ ಸಹನಾಳನ್ನು ಸ್ವೀಕಾರ ಕೇಂದ್ರಕ್ಕೆ ಕಳಿಸಲಾಯ್ತು. ಆ ಪಾಪದ ಹುಡುಗಿ ಹಿಂದೂ ಮುಂದಾಳುಗಳು ಧರ್ಮಕಾರಣದ ಮೈಲೇಜಿನ ತೆವಲಿಗೆ ಬಲಿಯಾಗಿ ಅನುಭವಿಸಿದ ರೌರವ ನರಕ ಹೇಳತೀರದು. ಸ್ವೀಕಾರ ಕೇಂದ್ರದಲ್ಲಿ ಆಕೆ ವಿಲವಿಲ ಒದ್ದಾಡಿದಳು. ಹುಜೇಫನ ತಾಯ್ತಂದೆಯೇ ಸಹನಾಗೆ ಸ್ವೀಕಾರ ಕೇಂದ್ರದಿಂದ ಮುಕ್ತಿ ಪಡೆಯಲು ನೆರವಾಗಬೇಕಾಯ್ತು.

ಅವಸರದ ಮದುವೆ ಅನಿವಾರ್ಯವಾಯ್ತು ಹುಜೇಫಗೆ. ಮದುವೆ ಆಗುವ ನಿರ್ಧಾರ ದೃಢವಾಗಿತ್ತಾದರೂ ಸ್ವಂತ ಕಾಲಿನ ಮೇಲೆ ನಿಂತ ನಂತರ ಎಂದು ತೀರ್ಮಾನಿಸಿದ್ದರು. ಆದರೆ ಸಾಮಾಜಿಕ ಜಾಲತಾಣದಲ್ಲಿ ಫೋಟೋ ಸಮೇತ ಬಂದ ಅವಹೇಳನ, ಹೆತ್ತವರ ತಿರಸ್ಕಾರ ಮತ್ತು ಹಿಂದೂ ಭೂಪರ ಕಿರುಕುಳದಿಂದಾಗಿ ತಕ್ಷಣಕ್ಕೆ ಮದುವೆಯಾಗದೇ ಆ ಜೋಡಿಗೆ ಬೇರೆ ದಾರಿಯೇ ಇಲ್ಲದಾಯ್ತು! ಹಳಿಯಾಳದ ಮಸೀದಿಯಲ್ಲಿ ಹುಜೇಫ್-ಸಹನಾ ಗಂಡ-ಹೆಂಡತಿಯಾಗಿದ್ದಾರೆ. ಹಿಂದೂ ಸಹನಾಳನ್ನು ಸಾಬರ ಮನೆಯಲ್ಲಿ ಹೆತ್ತ ಮಗಳಂತೆಯೇ ನೋಡಿಕೊಳ್ಳಲಾಗುತ್ತಿದೆ. ಆಕೆಯೂ ನೆಮ್ಮದಿಯಿಂದಲೇ ಇದ್ದಾಳೆ. ಆದರೆ ಹೆತ್ತವರ ನೆನಪಲ್ಲಿ ಒಮ್ಮೊಮ್ಮೆ ಕಣ್ಣೀರಾಗುತ್ತಾಳೆ. ಹಿಂದೂ ರಾಕ್ಷಸರಿಗೆ ಹೆದರಿ ಸಹನಾಳ ಹೆತ್ತವರು ಮಗಳನ್ನು ಮರೆತುಬಿಟ್ಟಿದ್ದಾರೆ!

ಪಾತಕಿಗಳ ಮೇಲೆ ಕೇಸು

ಮೂರೂರು ಗುಡ್ಡದ ಘಟನೆ ನಡೆದ ಹತ್ತು ದಿನಗಳ ನಂತರ ಸಹನಾ ತನ್ನ ಮೇಲಾದ ಲೈಂಗಿಕ ದೌರ್ಜನ್ಯ ದೈಹಿಕ ಹಿಂಸೆ, ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಆರೋಪ ಹೊರಿಸಿ ಅವಹೇಳನ ಮಾಡಿರುವ ಬಗ್ಗೆ ಕಂಪ್ಲೇಂಟು ಕೊಡುವ ಧೈರ್ಯ ಮಾಡಿದ್ದಾಳೆ. ಇದು ಆಕೆ ಬದುಕಲು ಅನಿವಾರ್ಯವೂ ಆಗಿತ್ತು. ಸಹನಾ ಮತ್ತು ಹುಜೇಫ್ ಗುರುತಿಸಿದ 9 ಜನರ ಮೇಲೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗು ಐಪಿಸಿಯ ಹಲವು ಆ್ಯಕ್ಟ್‌ನಂತೆ ಕೇಸು ಜಡಿಯಲಾಗಿದೆ. ತಿಂಗಳುಗಟ್ಟಲೆ ತಲೆ ಮರೆಸಿಕೊಂಡ ಆರೋಪಿಗಳು ಈಗ ನಿರೀಕ್ಷಣಾ ಜಾಮೀನಿನ ಮೇಲಿದ್ದಾರೆ.

ಹಿಂದೂತ್ವದ ದೀಕ್ಷೆ ಕೊಟ್ಟ ಜನಿವಾರಿಗಳು ಈಗ ಹಿಂದೆ ಸರಿದಿದ್ದಾರೆ. ಹುಂಬ ದೀವರ ಹುಡುಗರು ಸಿಕ್ಕಿಬಿದ್ದಿದ್ದಾರೆ. ಸಹನಾ ಕೊಟ್ಟ ಕಂಪ್ಲೇಂಟು ಕಚ್ಚುವ ಭೀತಿಯಲ್ಲಿ ಒದ್ದಾಡುತ್ತಿದ್ದಾರೆ. ಹಾಗಾಗಿ ಆ ದೂರು ವಾಪಸ್ ಪಡೆಯುವಂತೆ ಮಾಡಲು ತಿಪ್ಪರಲಾಗ ಹಾಕುತ್ತಿದ್ದಾರೆ. ಮೊನ್ನೆ ರಾಮರಥ ಯಾತ್ರೆಯ ನೆಪದಲ್ಲಿ ಹುಜೇಫನ ಮೇಲೆ ಹಿಂದೂತ್ವಕ್ಕೆ ಅಪಮಾನಿಸಿದ ಡೇಂಜರ್ ಆರೋಪ ಮಾಡಿ ಹಣ್ಣುಗಾಯಿ-ನೀರುಗಾಯಿ ಮಾಡಿದ್ದೂ ಕೇಸ್ ವಾಪಸಾತಿ ಬ್ಲಾಕ್‌ಮೇಲ್ ತಂತ್ರಗಾರಿಕೆಯಷ್ಟೇ! ಮೂರೂರು ಗುಡ್ಡದಲ್ಲಿ ತಿಂದ ಹೊಡೆತದ ಆಘಾತದಿಂದಲೇ ಹುಜೇಫ್ ಇನ್ನೂ ಚೇತರಿಸಿಕೊಂಡಿಲ್ಲ. ಈಗ ಮತ್ತೆ ಹೊಡೆದು ಘಾಸಿಗೊಳಿಸಲಾಗಿದೆ!


ಏಕೈಕ ಗಂಡು ಕುಡಿಯನ್ನು ರಕ್ಷಿಸಿಕೊಳ್ಳಲು ಹುಜೇಫನ ಹೆತ್ತವರು ಪರದಾಡುತ್ತಿದ್ದಾರೆ. ಆ ಕುಟುಂಬ ದಿಕ್ಕೆಟ್ಟು ಹೋಗಿದೆ. ಪೊಲೀಸ್ ಇಲಾಖೆಯಿಂದಲೂ ನ್ಯಾಯ ಸಿಗುತ್ತಿಲ್ಲ. ಠಾಣೆಗೆ ಹೋದರೆ ಪೊಲೀಸರೂ ಕೇಸು ವಾಪಸ್ ಪಡೆಯಿರಿ ಎಂದು ಹೆದರಿಸುತ್ತಾರೆ. ವೈರಿ ಪಡೆಯವರೇ ಪೊಲೀಸರಿಗೆ ನಿರ್ದೇಶನ ಕೊಡುತ್ತ ಕಾಡುತ್ತಾರೆ. ಕ್ಷಣಕ್ಷಣವೂ ಹುಜೇಫ್ ಕುಟುಂಬ ಆತಂಕ-ಭಯದಿಂದ ಕಳೆಯುತ್ತಿದೆ. ಮಾನವ ಹಕ್ಕುಗಳೇ ಇಲ್ಲದ ಪರಿಸ್ಥಿತಿಯಲ್ಲಿ ಚಡಪಡಿಸುತ್ತಿದ್ದಾರೆ. ದುಡಿದು ತರುತ್ತಿದ್ದ ಮಗ ಹೆದರಿ ಮನೆಯಲ್ಲೇ ಇರುವಂತಾಗಿದೆ. ಆ ಪರಿವಾರದ ಗೋಳು ಹೇಳತೀರದು.

ಮನುಷ್ಯತ್ವವಿಲ್ಲದ ಹಿಂದೂತ್ವಕ್ಕಾಗಲಿ, ಇಸ್ಲಾಮಿಗಾಗಲಿ ಏನರ್ಥವಿದೆ? ಈಗ ಹೇಳಿ; ಗಡಿಪಾರು ಮಾಡಬೇಕಾಗಿರುವುದು ಹುಜೇಫನಿಗಾ? ಎಮ್ಮೆಲ್ಲೆ ಆಗುವ ತೆವಲಿಂದ ಮುಗ್ಧ ದೀವರ ಹುಡುಗರ ಪುಂಡಾಟಕ್ಕೆ ಇಳಿಸುವ ಸೂರಜ್ ಸೋನಿಗಾ? ಹುಜೇಫನ ಗಡಿಪಾರು ಮಾಡದಿದ್ದರೆ ರಕ್ತಪಾತ ಮಾಡ್ತೇನೆಂದು ಪೊಲೀಸ್ ಅಧಿಕಾರಿಗೆ ಧಮಕಿ ಹಾಕಿದ ಮಾಜಿ ಶಾಸಕನೂ ಅಭಿನವ ಚೆಡ್ಡಿ ಚಾಂಡಲನೂ ಆದ ದಿನಕರ ಶೆಟ್ಟಿಗಾ? ಪಾಪಿಗಳ ಪರ 'ದಂಡ' ಪ್ರಯೋಗಿಸುವ ಕೇಸರೀಕರಣಗೊಂಡಿರುವ ಕುಮಟೆಯ ಪೊಲೀಸರಿಗಾ?

ವರವಿಗಾರ




ದಾವಣಗೆರೆ: ನಕಲಿ ಶಾಮನ 'ವಕೀಲ ಲೀಲೆ'



ದಾವಣಗೆರೆಯ ಈ ವಕೀಲಪ್ಪನ ಕತೆ ಕೇಳಿದರೆ, ಹೊಲವನ್ನೇ ಖಂಡಾಬಟ್ಟೆ ಮೇಯ್ದ ಬೇಲಿಯೂ ನಾಚಿ ನೀರಾಗಿ ಬಿಡುತ್ತೆ. ಈತ ಕೋರ್ಟ್‌ನಲ್ಲಿ ವಾದಿಸಿದ್ದಕ್ಕಿಂತ ಅರ್ಧರಾತ್ರಿ ಹೊತ್ತಲ್ಲಿ ಹೈಸ್ಕೂಲ್ ಗ್ರೌಂಡ್‌ನ ಕತ್ತಲಲ್ಲಿ ಡೀಲ್ ಕುದುರಿಸಿದ್ದೇ ಹೆಚ್ಚು. ದೋ ನಂಬರ್ ದಂಧೆವಾಲಾಗಳು ಮತ್ತು ಪೊಲೀಸರ ನಡುವೆ ರಾಜಿಕಬೂಲಿ ಮಾಡಿಸುವ ಲೀಗಲ್ 'ಮಾಮಾ'ನ ಕಸುಬಿನಲ್ಲಿ ಪಳಗಿದ ಪರಂಧಾಮ ಈತ. ಕದ್ದ ಮಾಲುಗಳ ವ್ಯವಹಾರ ಕುದುರಿಸುವ ಬಂಗಾರದಂಗಡಿ ಮಾರ್ವಾಡಿಗಳ ಪಾಲಿಗಂತೂ ಪಕ್ಕಾ ಡೀಲ್‌ರಾಜಾ! ತನ್ನ ಈ ಸಕಲಪ್ಪು ಕರ್ಮಗೇಡಿ ಕೆಲಸಗಳಿಗೆ ಶಾಸ್ತಿಯೆಂಬಂತೆ ಈಗ ಬಡಾವಣೆ ಪೊಲೀಸ್ ಸ್ಟೇಷನ್‌ನಲ್ಲಿ 420 ಕೇಸ್ ಹೆಟ್ಟಿಸಿಕೊಂಡು ಬಂಧನ ಭೀತಿಯಲ್ಲಿ ದಿನದೂಡುತ್ತಿದ್ದಾನೆ.

ಅವನ ಹೆಸರು ಶಾಮನೂರಪ್ಪ ಅಲಿಯಾಸ್ ಶಾಂ. ದಾವಣಗೆರೆ ವಕೀಲ ಸಂಘದ ಹಾಲಿ ಕಾರ್ಯದರ್ಶಿ. ಅಂತವನೇ ಜನರಿಗೆ ನಾಮ ತೀಡಿದ 420 ಕೇಸ್ ಜಡಿಸಿಕೊಳ್ಳುತ್ತಾನೆಂದರೆ ಆದಿನ್ನೆಂತ ಕಿರಾತಕನಾಗಿರಬೇಡ. ವಕೀಲಿಕೆ ಅಂದರೆ ಇಲ್ಲೀಗಲ್ ರಾಜಿ-ಪಂಚಾಯ್ತಿಯ ಮಾಮಾಗಿರಿ ಅಂದುಕೊಂಡಿರೋ ಶಾಂ ಮೇಲೆ ಈ ಹಿಂದೆಯೇ ಹಲವಾರು ವಂಚನೆಯ ಗುಲ್ಲುಗಳು ಕೇಳಿಬಂದಿದ್ದವು. ನಿಷ್ಠೆಯಿಂದ ಕೆಲಸ ಮಾಡ್ತೀವಿ ಅಂದ ಪೊಲೀಸ್ ಅಧಿಕಾರಿಗಳ ಬಳಿಗೂ ಕರಾಳ ದಂಧೆಗಳ ಡೀಲ್ ಕೊಂಡೊಯ್ದು ರೋದನೆ ಇಕ್ಕುತ್ತಿದ್ದ ಇವನ ಮೇಲೆ ಪೊಲೀಸರಿಗೂ ಕಣ್ಣಿತ್ತು. ಆದರೆ ಎತ್ತಾಕಿಕೊಂಡು ಹೋಗಿ ರುಬ್ಬುವಂತಹ ಒಂದು ಕೇಸ್ ಇರಲಿಲ್ಲ ಅಷ್ಟೆ. ಆದರೆ ಶ್ವೇತಾ ಬಂಗಾರದ ಅಂಗಡಿಯ ಮಾಲೀಕ ನಿತೀಶ್ ಜೈನ್ ಮಡಗಿರುವ 420 ಕೇಸು ಈಗ ಪೊಲೀಸರ ಸಿಟ್ಟಿಗೆ ಬಲ ತುಂಬಿದೆ. ಆದರಲ್ಲೂ ತಕ್ಕಮಟ್ಟಿಗೆ ದಕ್ಷ ಅಧಿಕಾರಿ ಅಂತ ಹೆಸರು ಮಾಡಿರೋ ಬಡಾವಣೆ ಪೊಲೀಸ್ ಠಾಣಾಧಿಕಾರಿ ಶಿಲ್ಪಾ ಮೇಡಂರಂತೂ ಈ ಢೋಂಗೀ ವಕೀಲಪ್ಪನ ಎಡೆಮುರಿ ಕಟ್ಟಲು ತಯಾರಾಗಿ ಕುಳಿತಿದ್ದಾರೆ.



ಅಂದರ್ ದಂಧೆ!

ನಿತೀಶ್ ಜೈನ್ ದಾವಣಗೆರೆಯಲ್ಲಿ ಶ್ವೇತಾ ಗಿರವಿ ಅಂಗಡಿ ನಡೆಸಿಕೊಂಡಿದ್ದಾನೆ. ಬಂಗಾರದ ಭರ್ಜರಿ ವಹಿವಾಟೂ ಇಲ್ಲಿ ನಡೆಯುತ್ತದೆ. ಈತ ಕೆಲಸದ ನೆರವಿಗೆಂದು ತನ್ನ ತಂಗಿಯ ಗಂಡ ಸುನೀಲ್ ಎಂಬಾತನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ. ಈ ಸುನೀಲ್‌ನದು ಪಕ್ಕಾ ಪಳಗಿದ ಕೈ. ಸ್ವಂತ ಭಾವನ ಅಂಗಡಿಯಲ್ಲೇ ದೋಖಬಾಜಿ ಶುರುಹಚ್ಚಿಕೊಂಡಿದ್ದ. ತನ್ನ ಒಂದಷ್ಟು ರೆಗ್ಯುಲರ್ ಗಿರಾಕಿಗಳನ್ನು ಬಂಗಾರ ಖರೀದಿಸಲೆಂದು ಅಂಗಡಿಗೆ ಕಳುಹಿಸುತ್ತಿದ್ದ ಸುನೀಲ್, ಅವರಿಗೆ ಚಿನ್ನ ತೂಗಿ ಕೊಡುವಾಗ 10 ಗ್ರಾಂನ ಜಾಗದಲ್ಲಿ 13 ಗ್ರಾಂ ತೂಗಿ ಚೀಟಿಯಲ್ಲಿ ಮಾತ್ರ 10 ಗ್ರಾಂ ಅಂತಲೇ ಬರೆದುಕೊಡುತ್ತಿದ್ದ. ಅದನ್ನೇ ನಂಬಿ 10 ಗ್ರಾಂಗಷ್ಟೇ ನಿತೀಶ್ ಬಿಲ್ ಬರೆಯುತ್ತಿದ್ದ. ಹೊರಗಡೆ ಬಂದಮೇಲೆ ಹೆಚ್ಚುವರಿ ಮೂರು ಗ್ರಾಂನಲ್ಲಿ ಎರಡು ಗ್ರಾಂ ಸುನೀಲ್‌ಗೆ, ಒಂದು ಗ್ರಾಂ ಗಿರಾಕಿ ಸೋಗಿನ ಮಧ್ಯವರ್ತಿಗಳಿಗೆ. ಸುಮಾರು ದಿನದಿಂದ ಈ ವ್ಯವಹಾರ ನಡೆದುಕೊಂಡೇ ಬಂದಿತ್ತು, ಆದರೆ ಕಳೆದ ಒಂದು ತಿಂಗಳ ಹಿಂದೆ ಸುನೀಲ್ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದ.

ಅನುಮಾನಗೊಂಡ ನಿತೀಶ್ ಜೈನ್ ಸ್ಟಾಕು ನೋಡಿದರೆ ಅಲ್ಲಿ ಕೇಜಿಗಟ್ಟಲೆ ಬಂಗಾರ ಗಾಯಬ್ ಆಗಿತ್ತು. ಆತ ಸುನೀಲ್‌ನ ವಿರುದ್ಧ ಪೊಲೀಸ್ ಕಂಪ್ಲೇಂಟ್ ಕೊಡಬೇಕೆಂದು ತಯಾರಾಗುತ್ತಿದ್ದಾಗಲೇ ಈ ನಮ್ಮ ದಗಲ್‌ಬಾಜಿ ವಕೀಲಪ್ಪ ಎಂಟ್ರಿ ಕೊಟ್ಟಿದ್ದ.


ಇಲ್ಲಿ ದಾವಣಗೆರೆ ಮಾರ್ವಾಡಿಗಳ ಬಗ್ಗೆ ಒಂದು ಮಾತು ಹೇಳಿಬಿಡಲೇಬೇಕು. ಚಿನ್ನದ ಅಂಗಡಿ ತೆರೆದು ಗಿರವಿ ವ್ಯವಹಾರಕ್ಕೆ ಕೂರುವ ಇವರಲ್ಲಿ ಬಹುಪಾಲು ಮಂದಿ ಕದ್ದ ಮಾಲು ಖರೀದಿಸಿ ಲಾಭ ಗಿಟ್ಟಿಸುವುದನ್ನೇ ಪ್ರಧಾನ ಉದ್ಯಮವಾಗಿಸಿಕೊಂಡಿದ್ದಾರೆ. ಹಾಗಾಗಿ ಈ ಮಾರ್ವಾಡಿಗಳಿಗೂ ಪೊಲೀಸರಿಗೂ ಆಗಿಂದಾಗ್ಗೆ ಮುಖಾಮುಖಿಯಾಗುತ್ತಲೇ ಇರುತ್ತದೆ. ಅದನ್ನು ಮ್ಯಾನೇಜ್ ಮಾಡುವುದಕ್ಕೆಂದೇ ಒಬ್ಬೊಬ್ಬ ಕಾಯಂ ವಕೀಲರನ್ನು ಗುತ್ತಿಗೆ ಹಿಡಿದುಕೊಂಡಿರುತ್ತಾರೆ. ಪೊಲೀಸರ ಹತ್ತಿರ ತಮ್ಮ ಡೀಲ್ ಕೊಂಡೊಯ್ದು ಲೀಗಲ್ ಇಶ್ಯೂ ಆಗದಂತೆ ಡೀಲ್ ಕುದುರಿಸಿ ಕೊಡುವುದು ಈ ವಕೀಲಪ್ಪಗಳ ಕಾಯಕ. ಈಗ 420 ಕೇಸ್ ಹೇರಿಸಿಕೊಂಡಿರುವ ನಕಲಿ ಶಾಂ ಕೂಡಾ ಅಂತದೇ ದಂಧೆಯಲ್ಲಿ ಪಳಗಿದವನು. ಒಟ್ಟನಲ್ಲಿ ಮಾರ್ವಾಡಿಗಳ ಸಣ್ಣಪುಟ್ಟ ಏರಿಳಿತಗಳೂ ವಕೀಲರ ವಲಯಕ್ಕೆ ಬಹುಬೇಗ ಬಂದು ತಲುಪುತ್ತವೆ. ಆದೇರೀತಿ ನಿತೀಶ್ ಜೈನ್ ಅಂಗಡಿಯಲ್ಲಿ ನಡೆದ ಭಾನ್ಗಡಿಯ ವಾಸನೆ ಹಿಡಿದು ನಕಲಿ ಶಾಂ ಕೂಡಾ ದಾಂಗುಡಿಯಿಟ್ಟಿದ್ದ.

ನಕಲಿ ಶಾಮನ ನಕಲಿ ಡ್ರಾಮಾ

ಹೇಳಿಕೇಳಿ ಅಂಗಡಿಯನ್ನು ಮುಂಡಾಯಿಸಿ ಹೋದದ್ದು ತನ್ನ ಸ್ವಂತ ತಂಗಿಯ ಗಂಡ. ಪೊಲೀಸ್ ಕೇಸು ಅಂತ ಕೊಟ್ಟರೆ ತಂಗಿಯ ಬಾಳು ಬೀದಿಗೆ ಬರುತ್ತೆ, ಹಾಗಂತ ಸುಮ್ಮನೆಯೂ ಕೂರುವಂತಿಲ್ಲ, ಯಾಕೆಂದರೆ ಅಬೇಸ್ ಆಗಿರೋದು ಹೆಚ್ಚೂಕಮ್ಮಿ ಕೋಟಿ ರೂಪಾಯಿಯ ಮಾಲು. ನಿತೀಶ್ ಜೈನ್ ಅಕ್ಷರಶಃ ಇಕ್ಕಟ್ಟಿಗೆ ಸಿಲುಕಿದ್ದ. ಈ ಇಕ್ಕಟ್ಟನ್ನೇ ತನ್ನ ಟ್ರಂಪ್‌ಕಾರ್ಡ್ ಮಾಡಿಕೊಂಡ ನಕಲಿ ಶಾಂ ಅಖಾಡಕ್ಕಿಳಿದ.

ಈ ಹಿಂದೆಯೇ ಧಾರವಾಡದ ಮತ್ತೊಬ್ಬ ಮಾರ್ವಾಡಿ ಸುನೀಲನ ಮೇಲೆ ನಗರದ ಬಸವನಗರ ಪೊಲೀಸ್ ಠಾಣೆಯಲ್ಲಿ ವಂಚನೆಯ ದೂರು ನೀಡಿದ್ದ. ಹಾಗಾಗಿ ಪೊಲೀಸರು ತಲಾಶ್ ನಡೆಸುತ್ತಿದ್ದರು. ಆ ಮಾಹಿತಿ ಸಂಗ್ರಹಿಸಿದ ನಕಲಿ ಶಾಂ, ತನ್ನದೊಂದು ಪ್ರಪೋಸಲ್ ರೆಡಿ ಮಾಡಿಕೊಂಡು ನಿತೀಶ್ ಜೈನ್ ಬಳಿ ಬಂದ. ದೂರುಕೊಟ್ಟು ತಂಗಿ ಗಂಡನನ್ನೇ ಜೈಲಿಗೆ ಕಳುಹಿಸಿದ ಅಪಖ್ಯಾತಿ ಬೇಡ, ಹೇಗೂ ಪೊಲೀಸರು ಅವನನ್ನು ಬೇರೊಂದು ಕೇಸ್‌ನಲ್ಲಿ ಹುಡುಕಾಡುತ್ತಿದ್ದಾರೆ, ಇವತ್ತಲ್ಲ ನಾಳೆ ಅವನನ್ನು ಹಿಡಿದೇ ಹಿಡಿಯುತ್ತಾರೆ, ಆಗ ಪೊಲೀಸರಿಗೆ ಒಂದಷ್ಟು ರೊಕ್ಕ ಕೊಟ್ಟರೆ ಅವರೇ ಒದ್ದು ಅವನಿಂದ ನಿನ್ನ ಮಾಲನ್ನು ವಾಪಾಸ್ ಕೊಡಿಸುತ್ತಾರೆ, ಕೇಸ್ ಇಲ್ಲದೆಯೇ ನಿನ್ನ ಮಾಲು ನಿನಗೆ ಸಿಗುತ್ತೆ ಅನ್ನೋದು ನಕಲಿ ಶಾಂನ ಪ್ರಪೋಸಲ್ ಆಗಿತ್ತು, ನೇರವಾಗಿ ಕಂಪ್ಲೇಂಟ್ ಕೊಡಲು ನಿತೀಶ್ ಜೈನ್‌ನ ಒಳಸುಳಿಗಳು ಏನೇನಿದ್ದವೊ ಆತನೂ ನಕಲಿ ಶಾಂಗೆ ಜೈ ಅಂದುಬಿಟ್ಟ. ನೋಡನೋಡುತ್ತಿದ್ದಂತೆಯೇ ಐದು ಲಕ್ಷದ ಡೀಲ್‌ಗೆ ಜೈನ್ ಎಂಬ ಬಕರಾವನ್ನು ಶಾಮ ಕುದುರಿಸಿಕೊಂಡಿದ್ದ.

ಅದರಂತೆ ಕಳೆದ ವರ್ಷದ ನವೆಂಬರ್ 8ರಂದು ಶಾಂನ ಮಾಮೂಲಿ ಡೀಲ್ ಅಡ್ಡೆಯಾದ ಹೈಸ್ಕೂಲ್ ಗ್ರೌಂಡ್ಸ್‌ನ ಕಾರ್ ಸ್ಟಾಂಡಿನ ಬಳಿಗೆ ನಿತೀಶ್ ಜೈನ್




ಮತ್ತು ಅವರ ಅಣ್ಣನನ್ನು ಕರೆಸಿಕೊಂಡು ಮುಂಗಡವಾಗಿ ಮೂರು ಲಕ್ಷ ರೂಪಾಯಿ ಪಡೆದಿದ್ದ. ಅವತ್ತು ಜೈನ್ ಸೋದರರಿಗೆ ನಂಬಿಕೆ ಹುಟ್ಟಿಸಲೆಂದು ತನ್ನ ಸುತ್ತ ಅಲ್ಲೊಬ್ಬ ಇಲ್ಲೊಬ್ಬ ವ್ಯಕ್ತಿಗಳನ್ನು ನಿಲ್ಲಿಸಿ, ಅವರು ಮಫ್ತಿಯಲ್ಲಿರೋ ಪೊಲೀಸರು ಅಂತ ತೋರಿಸಿದ್ದ. ಅಸಲಿಗೆ ಅವರ್ಯಾರೂ ಪೊಲೀಸರೇ ಅಲ್ಲ, ಅವನೇ ಸೆಟ್ ಮಾಡಿ ಕರೆತಂದಿದ್ದ ಜೂನಿಯರ್ ವಂಚಕರು!

ಶಾಮ ನಾಪತ್ತೆ

ಹಾಗೆ ಜೈನ್ ಜೇಬಿಗೆ ಕೈಯಿಟ್ಟು ಮೂರು ಲಕ್ಷ ಎತ್ತಿದ ಶಾಮ ಅಲ್ಲಿಂದಾಚೆಗೆ ನಿತೀಶ್ ಜೈನ್‌ಗೆ ಮುಖ ತೋರಿಸುವುದಿರಲಿ, ಫೋನ್‌ಗೂ ಸಿಗದೆ ಸತಾಯಿಸಲು ಶುರು ಮಾಡಿದ್ದ. ಅದೇವೇಳೆಗೆ ಈ ಹಿಂದೆ ಶಾಮ ಮಾಡಿದ್ದ ವಂಚನೆಗಳ ವರಾತಗಳೂ ಒಂದೊಂದಾಗಿ ಮಾರ್ವಾಡಿ ಮಿತ್ರರಿಂದ ನಿತೀಶ್ ಜೈನ್‌ನ ಕಿವಿ ಹೊಕ್ಕಿದ್ದವು. ತನಗೆ ನಾಮ ತೀಡಲೆಂದೇ ಈತ ಇಷ್ಟೆಲ್ಲ ಹೈಡ್ರಾಮಾ ಮಾಡಿದ್ದಾನೆನ್ನುವುದು ಖಾತ್ರಿಯಾಗುತ್ತಿದ್ದಂತೆಯೇ ಬಡಾವಣೆ ಪೊಲೀಸ್ ಠಾಣೆಯ ಶಿಲ್ಪ ಮೇಡಂರ ಮುಂದೆ ಇಡೀ ಪುರಾಣ ಬಿಚ್ಚಿಟ್ಟ ನಿತೀಶ್ ಜೈನ್ ನಕಲಿ ಶಾಮನ ಮೇಲೆ 420 ಕೇಸು ಜಡಿದಿದ್ದಾನೆ.

ಮೊದಲೇ ತನ್ನ ವಿರುದ್ಧ ಬುಸುಗುಡುತ್ತಿರುವ ಪೊಲೀಸರ ಕೈಗೆ ಸಿಕ್ಕಿಬಿದ್ದರೆ ಮುಗಿದೇಹೋಯ್ತು ಅನ್ನೋದನ್ನು ಚೆನ್ನಾಗಿ ಗ್ರಹಿಸಿದ ಶಾಮ, ಭೂಗತನಾಗಿ ನಿರೀಕ್ಷಣಾ ಜಾಮೀನಿಗೆ ಇನ್ನಿಲ್ಲದ ಕಸರತ್ತು ನಡೆಸಿದ್ದ. ಸದ್ಯ ಆರು ವಾರಗಳ ಷರತ್ತು ಬದ್ಧ ಜಾಮೀನನ್ನು ಕೋರ್ಟ್ ಕೊಟ್ಟಿದೆ, ಆದರೆ ವಕೀಲನೇ ಜನರಿಗೆ ವಂಚನೆ ಮಾಡಿರೋ ಪ್ರಕರಣವನ್ನು ಗಂಭೀರವಾಗಿ



ಪರಿಗಣಿಸಿರೋ ನ್ಯಾಯಾಲಯ ಶಾಮನ ವಿರು
ಕೆಂಡಾಮಂಡಲವಾಗಿದೆ. ಆತನಿಗೆ ಜಾಮೀನು ನೀಡ
ದೀರ್ಘ ಸಮಯ ತೆಗೆದುಕೊಂಡದ್ದೇ ಇದಕ್ಕೆ ಸಾಕ್ಷಿ.
ಪೊಲೀಸರೂ ಕಾಯುತ್ತಿದ್ದಾರೆ. ನಕಲಿ ಶಾಮನ ಮೈಮೆ
ಪೊಲೀಸರ ಅಸಲಿ ನೃತ್ಯಗಳ ಕಳೆಗಟ್ಟಿಸಲು ಸಕಾ
ಬೂಟು-ಲಾಠಿಗಳು ಸಜ್ಜಾಗಿ ಕುಣಿಯುತ್ತಿವೆ.

ಶಾಮನ ಪುರಾಣ, ಗಾಂಧಿನಗರ ಹೈರಾ

ಈ ಶಾಮ ಅಲಿಯಾಸ್ ಶಾಮನೂರಪ್ಪ ಮೂ
ದಲಿತ ಸಮುದಾಯಕ್ಕೆ ಸೇರಿದವ. ಇವರ ಅಪ್ಪ ಲಕ್ಷ
ಇದೇ ದಾವಣಗೆರೆ ನಗರಸಭೆಯ
ಪೌರಕಾರ್ಮಿಕನಾಗಿದ್ದ. ಇಬ್ಬರು ಮಕ್ಕಳಲ್ಲಿ
ಕಿರಿಯವನ ಮೇಲೆ ಅಪಾರ ನಂಬಿಕೆ ಆತ
ಅಂಬೇಡ್ಕರ್‌ರಂತೆ ನಮ್ಮ ಸಮುದಾಯ ವನ್ನು ಉ
ಮಾಡಲಿ ಅನ್ನೋ ಕಾರಣಕ್ಕೆ ಕಷ್ಟಬಿದ್ದು ಆರ್.
ಲಾ ಕಾಲೇಜಿಗೆ ಸೇರಿಸಿದ್ದ ಆದರೆ ಶೋಕಿಗೆ ಜೋತು
ಶಾಮ ದಲಿತ ಸಂವೇದನೆಯನ್ನೇ ಕಳೆದು ಕೊ
ಅಂಬೇಡ್ಕರ್‌ರ ಬದ್ಧತೆಗೂ ಎಳ್ಳುನೀರು ಬಿ
ಕೊನೆಗೊಮ್ಮೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊ
ಶಾಮನೂರಪ್ಪ ಅನ್ನೋ ಹೆಸರನ್ನು ಶಾಂ ಅ
ಕತ್ತರಿಸಿಕೊಂಡು ಕಪ್ಪುಕೋಟು ಹೊದ್ದುಕೊಂಡ.
ದಲಿತರಿಗೆ ದನಿಯಾಗುವ ಬದಲು ಕಳ್ಳ ಮಾರ್ವಾಡಿ
ಭ್ರಷ್ಟ ಪೊಲೀಸಪ್ಪಂದಿರ, ರೊಕ್ಕಸ್ಥ ರಾಜಕಾರಣಿ
ಡೀಲ್ ಚಾಕರಿಗೆ ನಿಂತುಬಿಟ್ಟ. ಅದೇ ಕೊರಗಲ್ಲಿ ಅ
ಅಪ್ಪನೂ ಕುಡಿತದ ಚಟವೇರಿಸಿಕೊಂಡು ಕಣ್ಮು
ಇದ್ದೊಬ್ಬ ಅಣ್ಣನೂ ಜೆಡಿಎಸ್ ಪಾರ್ಟಿಯಲ್ಲಿ ಲೋ
ಪುಢಾರಿ ಯಾಗಿ ಗುರುತಿಸಿಕೊಳ್ಳುತ್ತಲೇ ಅ
ಹಾದಿಯನ್ನೇ ಹಿಡಿದು ಮಸಣ ಸೇರಿದ.

ಶಾಮ ಕೈಗೆತ್ತಿಕೊಂಡಿದ್ದೆಲ್ಲ 420 ಕೇಸುಗ
ಹಾಗೆ ನೋಡಿದರೆ, ಡಬ್ಲಿಂಗ್ ದಂಧೆಯ ವ್ಯವಹಾ
ಇವನ ಆದಾಯದ ಮೂಲ. ಇವನಿಗೆ ಜನ್ಮಕೊ
ಗಾಂಧಿನಗರ, ದಾವಣಗೆರೆ ನಗರದಲ್ಲೇ ಹೆಸರುವಾ
ದಲಿತ, ಶೋಷಿತ ಸಮುದಾಯಗಳೇ ಹೆಚ್ಚಾಗಿರುವ ಪ್ರದ
1948ರಲ್ಲಿ ಮಹಾತ್ಮಗಾಂಧಿ ಬಂದು ನಡೆದಾ
ನೆಲವಿದು. ಬಡತನ ಮೈಮುರಿದು ಮಲಗಿದೆ. ಅ
ಈ ಮುಗ್ಧ ಬದುಕುಗಳ ನಿರ್ಗತಿಕತೆಯನ್ನೇ ಬಂಡವ
ಮಾಡಿಕೊಂಡು ಬೆಳೆದು ಮೇಲಕ್ಕೆ ಜಿಗಿದವರೂ
ಕಾಣಸಿಗುತ್ತಾರೆ. ದಲಿತರನ್ನು ಶೋಷಿಸಿ ಉದ್ಧಾರವಾ
ದಲಿತರೂ ಕಾಣಸಿಗುತ್ತಾರೆ. ಹಾಲಿ ಸಮಾಜ ಕಲ್ಯಾ
ಸಚಿವ ಆಂಜನೇಯ, ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ದುಗ
ಸೂಪರಿಂಟೆಂಡೆಂಟ್ ಇಂಜಿನಿಯರ್ ಮೈಲಪ್ಪ, ಕೆ.ಎ.
ಅಧಿಕಾರಿ ಪುರುಷೋತ್ತಮ, ಎಸಿಪಿ ದುಗ್ಗಪ್ಪ, ಐ.ಎ.
ಅಧಿಕಾರಿ ವಿನೋದ್ (ಹೈದರಾಬಾದ್‌ನಲ್ಲಿ ಡಿ.ಸಿ), ಕೆಡಿಎ
ಸದಸ್ಯ ದುಗ್ಗಪ್ಪ (ಈತ ಸದಸ್ಯನಾಗುವ ತನಕ ಹಿರಿಯೂ
ಡಿವೈಎಸ್‌ಪಿ ಆಗಿದ್ದ) ಇವರಿಗೆಲ್ಲ ಇದೇ ಗಾಂಧಿನ
ಜನ್ಮಸ್ಥಾನ. ಇಂತಹ ಘಟಾನುಘಟಿಗಳಿದ್ದರೂ ಗಾಂಧಿನಗ
ದಲಿತರ ಬದುಕು ಕಿಂಚಿತ್ತೂ ಏರಿಕೆ ಕಂಡಿಲ್ಲ.

ಇಂಥಾ ಗಾಂಧಿನಗರದಲ್ಲಿ ಬೇರುಬಿಟ್ಟ ನಕಲಿ ಶಾ
ಕೂಡಾ ತನ್ನ ಕಿರಾತಕ ಕಾಯಕಗಳನ್ನು ರಕ್ಷಿಸಿಕೊಳ್ಳ
ದಲಿತ ಎನ್ನುವ ಗುರಾಣಿ ಬಳಸುತ್ತಾನೆಯೇ ವಿನಾ ಅ
ಒಡನಾಡಿ ದಲಿತ ಬದುಕುಗಳ ಬಗ್ಗೆ ಕಿಂಚಿತ್ತೂ ಕಾ
ವಹಿಸುವುದಿಲ್ಲ, ತನ್ನಪ್ಪನ ಆಸೆಯಂತೆ ಅವನು ದಲಿ
ಬದುಕು ಹಸನಾಗಿಸಲು ಹೋರಾಟಕ್ಕಿಳಿದಿದ್ದರೆ ಇ
ಇಂಥಾ ಹೀನ ಸಂಕಟಕ್ಕೆ ಗುರಿಯಾಗುತ್ತಿರಲಿ
ಕಪ್ಪುಕೋಟಿಗೂ ಒಂದು ಗೌರವ ಬರುತ್ತಿತ್ತು.
ದುಡ್ಡಿನ ಹಿಂದೆ ಬಿದ್ದ ನಕಲಿ ಶಾಮನಂತವರಿಗೆ ಇ
ಹೇಗೆ ತಾನೆ ಅರ್ಥವಾದೀತು...

■ ಟಿ.ಎನ್. ಷಣ್ಮು

ಗಾಂಧಿನಗರದ ಸಾವಿನ ಏಜೆಂಟ್ ಮೋಹನ!

ಗಾಂಧಿನಗರದ ಪಾಲಿಗೆ ಸದ್ಯ ನಕಲಿ ಶಾಮ ಮತ್ತು ಆರ್.ಕೆ.ಮೋಹನರೇ ಖತರ್ನಾಕ್ ಕಿರಾತಕರು. ಈ ಆರ್.ಕೆ.ಮೋಹನ ಸೆಕೆಂಡ್ಸ್ ಲಿಕ್ಕರ್ ದಂಧೆಯ ಮೂಲಕ ಗಾಂಧಿನಗರದ ದಲಿತರ ಪಾಲಿಗೆ ಅಕ್ಷರಶಃ ಸಾವಿನ ಏಜೆಂಟ್ ಆಗಿದ್ದಾನೆ. ಇವನ ಅಣ್ಣ ಮಲ್ಲಿಕಾರ್ಜುನ, ಹಿಂದೊಮ್ಮೆ ನಗರಪಾಲಿಕೆಯ ಅಧ್ಯಕ್ಷನಾಗಿದ್ದ. ದಲಿತರ ಹೆಸರಲ್ಲಿ ಸಂಪತ್ತು ದೋಚಿದ್ದ. ಅಂತವನ ತಮ್ಮನಾದ ಮೋಹನ ಗಾಂಧಿನಗರದಲ್ಲಿ ಆರ್.ಕೆ. ಬಾರ್ ತೆರೆದು ಕೂತಿದ್ದಾನೆ. ಇವನ ನಕಲಿ ಹೆಂಡದ ಮಾರಾಟದ ದಂಧೆ ಜೋರು. ಯಾರೂ ಪ್ರಶ್ನಿಸುವಂತಿಲ್ಲ. ಮುನ್ನೂರ ಅರವತ್ತು ದಿನವೂ ಇಲ್ಲಿ ನಕಲಿ ಮದ್ಯದ ಸಾಮ್ರಾಜ್ಯ ದಲಿತ ಯುವಕರ ಮೇಲೆ ಸವಾರಿ ಮಾಡುತ್ತಲೇ ಇರುತ್ತೆ. ಸ್ಪಿರಿಟ್ ಮಿಶ್ರಣ ಹೆಂಡ ಅವರಿಗೆಲ್ಲ ಯಮಲೋಕದ ದಾರಿ ತೋರಿಸುತ್ತದೆ. ಈ ಆರ್.ಕೆ.ಮೋಹನನ ಈ ದಂಧೆಗೆ ನಕಲಿ ಪೊಲೀಸರ ದಂಡಿದೆ. ಶಾಮನಂತಾ ವಕೀಲರಿದ್ದಾರೆ.

ದಲಿತರ ಮನೆ ಮುರಿಯಲು ಶಾಮ ಮತ್ತು ಮೋಹನ್ ಪಣತೊಟ್ಟಂತಿದೆ. ಮೋಹನನ ದಂಧೆಗೆ ಶಾಂ ಕಾನೂನು ನೆರವು ನೀಡುವ ಮೂಲಕ ದಲಿತ ಯುವಕರನ್ನು ಮದ್ಯವ್ಯಸನಿಗಳನ್ನಾಗಿ ಮಾಡಿ ರೊಕ್ಕ ದೋಚಿದರೆ, ಮೋಹನನ ಕಂಟ್ರಿ ಹೆಂಡ ಯುವಕರನ್ನು ಅನಾಮತ್ತು ಬಲಿತೆಗೆದುಕೊಳ್ಳುತ್ತಿದೆ. ಹಿಂದೊಮ್ಮೆ ಇದೇ ಬಡಾವಣೆ ಠಾಣೆಯ ಎಸ್.ಐ ಆಗಿದ್ದವರೊಬ್ಬರು ಇವರಿಬ್ಬರಿಗೂ ಸಾಥ್ ನೀಡುತ್ತಿದ್ದ. ನಕಲಿ ದೂರು, ನಕಲಿ ಬಂಧನ, ನಕಲಿ ರಾಜಿಗಳಂತಹ ಶಾಂ-ಮೋಹನರ ನಕಲಿ ದಂಧೆಗಳಿಗೆ ಎಸ್‌ಐ ಬೆಂಬಲವಿತ್ತು. ದುರಂತವೆಂದರೆ ಈತನೂ ದಲಿತ ಸಮುದಾಯಕ್ಕೆ ಸೇರಿದವನು. ತಮಗೆ ಸಿಕ್ಕ ಅಧಿಕಾರವನ್ನು ದಲಿತರ ಉದ್ಧಾರಕ್ಕೆ ಬಳಸಬೇಕಿದ್ದ ಇಂತವರು ಸ್ವಾರ್ಥಕ್ಕೆ ಗಂಟುಬಿದ್ದಿದ್ದರಿಂದಲೇ ಇವತ್ತಿಗೂ ಬಹುಪಾಲು ದಲಿತರ ಹೀನಾಯ ಸ್ಥಿತಿಯಲ್ಲಿರೋದು. ಅಬಕಾರಿ ಅಧಿಕಾರಿಗಳನ್ನು ಖರೀದಿಸಿಟ್ಟುಕೊಂಡಿರುವ ಮೋಹನ್‌ನ ದಂಧೆ ಎಗ್ಗಿಲ್ಲದೆ ಸಾಗುತ್ತಿದೆ. ಇದೇ ಗಾಂಧಿನಗರದಿಂದ ಪುಟದೆದ್ದು ಹೋದ ಘಟಾನುಘಟಿ ರಾಜಕಾರಣಿಯೊಬ್ಬರ ಭರಪೂರ ಬೆಂಬಲ ಆತನಿಗಿರೋದೆ ಇದಕ್ಕೆ ಕಾರಣ. ಜೊತೆಗೆ ನಕಲಿ ಶಾಮನಂತೂ ಇದ್ದೇ ಇದ್ದಾನಲ್ಲ!



ಬಿ.ಚಂದ್ರೇಗೌಡ

ಕಟ್ಟೆಪುರಾಣ

ಯಸ್ಸೆಂ ಕಿಸ್ಣ ಹೋಗೇಬುಟ್ಟ ಕಣಮಾವ



ಕಾಳಮಾವ ಮಗ್ಗುಲು ಕೊಟ್ಟು ಮಲಗಿದ್ದಾನೆ. ದದಾದಲು ಶಕ್ತಿಯಿಲ್ಲ, ಎತ್ತಬೇಕು, ಇಳುಕಬೇಕ ಎಂಬ ತುಂಕಕಾರಿ ಸುದ್ದಿ ಜುಮ್ಮಿಗೆ ತಲುಪಿತು. ಕೂಡಲೆ ಅವಳು ೀಗಲ ಕೇರಿಯಲ್ಲಿದ್ದ ಕಾಳಮಾವನ ಮನೆಗೆ ಹೋದಳು. ಟ್ಟ ನಿಶ್ಯಬ್ಧವಾಗಿತ್ತು. ದನದ ಪಿಶಾಚಿಯಂತೆ ಕಂಡ ೀಮೆಹುಸು ಸೋಮಾರಿತನದಲ್ಲಿ ಜುಮ್ಮಿ ನೋಡಿತು. ಲೆ ಬಾಗಿಲಲ್ಲೇ ಇದ್ದ ಕೊಟ್ಟಿಗೆ ತಡಾದು ಒಳಗೋದಳು. ಳಮಾವ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನಂತೆ ಕಾಲು ೀಡಿ ಮಲಗಿದ್ದ. ಯಾರೋ ಬಂದಂತಾಗಿ ತುಸು ಕಣ್ಣು ರೆದು ದಿಟ್ಟಸಿದ.

"ನಾನು ಕಣಮಾವ ಜುಮ್ಮೀ."

"ಬಾ."

"ಮನಿಕ ಮನಿಕ ಏಳುಬ್ಯಾಡ."

"ಮನಿಕಂಡು ಮಾತಾಡೊವೊಟು ಸುಸ್ತಾಗಿಲ್ಲ ಕಂಡ್ಳೆ. ನ್ನಾಗಿದ್ದೀನಿ. ಸ್ವಲ್ಪ ಆರಗ್ನೆ ಕಡಿಮ್ಯಾಗ್ಯದೆ ಅಷ್ಟೆಯ."

"ವಯಿಸಾದ ಮ್ಯಾಲೆ ಅಂಗೆ ಅಲವೇ?"

"ನನಿಗ್ಯಾವಯಿಸಾಗಿದತ್ಲೆ, ನನ್ನ ವಯಿಸಿನೋರು ಮ್ಯರಿತ ಂತವ್ರುರೆ."

"ಅದೇನೊ ನಿಜ."

"ಈ ಬರಗಾಲ ಬಂದು ನನ್ನ ಕೆಡಿಗಿಬುಡ್ತು ಕಂಡ್ಳೆ. ಗ್ಲೆ ಒಂದೈವತ್ತೊರ್ಸಾಗಿತ್ತು ಇಂತ ಬರಗಾಲ ಬಂದು."

"ನೀನಂಗಂತಿ. ಜನ ಚನ್ನಾಗೆ ಅವ್ರುರೆ."

"ಮ್ಯದೆ ಹೊಟ್ಟಿಲ್ಲ, ಕಣ ಮಾಡಲಿಲ್ಲ, ಹುಲ್ಲು ಬಡಿಲಿಲ್ಲ, ದ್ರು ಚನಾಗ್ಯವುರೆ ಅಂತಿಯಲ್ಲೇ?"

"ಊರುಡುಗರ್ಯಲ್ಲ ಬೆಂಗಳೂರಿಗೋಗ್ಯವೆ. ಇಲ್ಲಿರೋರಿಗೆ ರಕಾರ ಅಕ್ಕಿ ಕೊಡ್ತ ಅದೆ. ಯಂಗೊ ಕಾಲ ಹಾಕ್ತ ವುರೆ."

"ವಾಟಿಸ್ಸೆ ಎಲ್ಲಿಗೋದ?"

"ಅವುನು ನಂಜನಗೂಡು ಯಲಕ್ಷನ್ನಿಗೋಗ್ಯವುನೆ."

"ಅಲ್ಯಾವ ಯಲಕ್ಷನ್ಲೆ?"

"ಯಮ್ಮೆಲ್ಲೆ ಯಲಕ್ಷನ್ ಬಂದದೇ."

"ಅಲ್ಯಾರು ತೀರೋದ್ರೂ?"

"ಯಾರು ತೀರೋಗಿಲ್ಲ ಕಣ ಮಾವ. ಸೀನಿವಾಸ ಸಾದ ಅಂತ ಮಂತ್ರಿಯಿದ್ದ. ಅವುನು ಕಾಯ್ಲೆ ಮನ್ಸ. ಯಾವಾಗ್ಲು ಮಾತ್ರೆ ತಿನ್ನಕಂಡು ಕೆಮ್ಮಿಕಂಡು ಮನಿಗಿತ್ತಾವುಲೆ ರೋಣಂತೆ. ಅದ ನೋಡಕ್ಯಾಗದೆ ಸಿದ್ದರಾಮಯ್ಯ ಅವುನ ತೆ ಕಿತಗಂಡು ಕಾಗೋಡು ತಿಮ್ಮಪ್ಪ ಅನ್ನೋನ ಕೈಗೆ ೊಟ್ನಂತೆ. ಅದ್ಕೆ ಸಿಟ್ಟು ಮಾಡಿಕೊಂಡು ಇದು ನಿಗವುಮಾನ ಅಂತ ರಾಜಿನಾಮೆ ಕೊಟ್ನಂತೆ. ಆ ಯಲಕ್ಷನ್ ಗ ಬಂದದೆ."

"ವಾಟಿಸ್ಸೆ ಯಾರ ಪರ ಹೋಗ್ಯವುನೆ?"

"ಅವುನ್ಯಾರೊ ಜೆಡಿಎಸ್ಸಲ್ಲಿದ್ದೋನ ಕರಕಂಡು ಬಂದು ಕಾಂಗ್ರೆಸ್ ತಿಕೆಟು ಕೊಟ್ಟಿದ್ದರಂತೆ. ಅವುನ ಪರ ಹೋಗ್ಯವುನೆ."

"ಉಗ್ರಿನು ಹೋಗಿದ್ದನೆ?"

"ಅವುನು ಗುಂಡ್ಳುಪ್ಯಾಟಗೋಗ್ಯವುನೆ."

"ಅಲ್ಯಾಕೋದ?"

"ಅಲ್ಲಿ ಮಾದೇವ ಪ್ರುಸಾದ ಅಂತ ಮಂತ್ರಿಯಿದ್ದ. ಪಾಪ ಅವುನು ಚಿಕ್ಕಮಗಳೂರಿಗೋಗಿದ್ನಂತೆ. ಅಲ್ಲಿ ಮದ್ದೆ ಸಳಿ. ಅಂತದ್ರುಲಿ ಎ.ಸಿ. ಹಾಯ್ಕಂಡು ಮನಿಗಿದ್ರಂತೆ. ಆಗ ಸರೀಳಾದ ಸರೀಳ್ಯಲ್ಲ ತಣ್ಣಾಗಾಗಿ ತೀರೊದ್ರಂತೆ. ಆ ಯಲಕ್ಷನ್ ಬಂದದೆ."

"ಅವುನ ಬದ್ಲಿಗ್ಯಾರು ನಿಂತವುರೆ?"

"ಅವುನೆಡ್ತಿನೆ ನಿಲ್ಸಿದ್ದರಂತೆ. ಅವುಳು ಇಂಗ್ಲಿಷ್‌ನ್ಯಲ್ಲ ಚನ್ನಾಗಿ ಓದಿಕಂಡಿದ್ದಳಂತೆ. ಅವುಳು ಗೆದ್ದು ಬುಡ್ತಳೆ ಅಂತ ಬಿಜೆಪಿಗಳು ಬಾಯಿಗೆ ಬಂದಂಗೆ ಅಂದು ಅವುಮಾನ ಮಾಡಿದ್ದವಂತೆ. ಪಾಪ ಅವುಳ ಕಣ್ಣೀರ ನೋಡಕ್ಯಾಗದಿಲ್ಲ."

"ಅದ್ಯಾಕಂಗೆ ಬೋದವುಲೆ ಆ ಭ್ಯರ್ಕೆ ಬಡ್ಡೆತ್ತವು?"

"ಅವು ಮದ್ದಿಂದ ಅಂಗೆ ಅಲವೆ ಮಾವ. ಅವುನ್ಯಾವನೋ ಮೈಸೂರಿನೋನು ತಂಗಿ ತಂಗಿ ಅಂತಿದ್ದೋನು ಅವುಳ್ನೆ ಮದಿವಾದನಂತೆ. ಅಂತ ಮುಂಡೆ ಮಕ್ಕಳ ಬಾಯಿಂದ ವಳ್ಳೆ ಮಾತು ಬಂದವೇ?"

"ಗೆದ್ದಳವುಳು."

"ಊ ಗೆದ್ದಳಂತೆ. ನಾಗರತ್ನಮ್ಮ, ನಜೀರ್ ಸಾಬುರ್ಯಲ್ಲ ಆ ಊರೋರೆ ಅಂತ ಕಣ ಮಾವ."

"ಗುಂಡ್ಳುಪ್ಯಾಟೆ ನನಿಗೊತ್ತಿಲ್ಲವೇನ್ಲೆ ನಮ್ಮ ಕ್ಯಂಗೇಗೌಡನ ಮಗ ಬಸುರಾಜನಿಗೆ ಇಲ್ಲಿಂದ್ಲೆ ಆಲವೆ ಹೆಣ್ಣು ಕೊಟ್ಟಿರದು."

"ಆ ಬಸುರಾಜ ಇಲ್ಲ ಕಣ ಮಾವ."

"ಏನಾದ?"

"ನ್ಯಾಣಾಯ್ಕಂಡು ಸತ್ತೋದ."

"ಅದ್ಯಾಕ ನ್ಯಾಣಾಯ್ಕಂಡಾ?"

"ಅವುನು ಸೊಸೈಟಿಲಿದ್ದ ಯಾರ್‍ಯಾರೊ ದುಡ್ಡು ತಿನ್ನಕಂಡು ಇವುನ ಮ್ಯಾಲೆ ಬತ್ತಂತೆ, ಅದ ಕೇಳಕ್ಕೆ ಮ್ಯಾಲಾಫೀಸರ್‍ರು ಬತ್ತರೆ ಅಂದಾಗ ಅವುವಮಾನಾಯ್ತದೆ ಅಂತ ನ್ಯಾಣಾಯ್ಕಂಡನಂತೆ."

"ಅಸಿಸಿ, ಲ್ಯಕ್ಕ ತಪ್ಪಿದ್ರೆ ಹಿಂಗಲ್ಲ ಹಿಂಗೆ ಅನ್ನಬೇಕು: ತಿಂದಿದ್ರೆ ತಂದು ಕಟ್ಟಬೇಕು. ಅದ್ಕೆ ನ್ಯಾಣಾಯ್ಕಂಡು ಬುಡದೆ?"

"ಮಾನ ಮರಿಯಾದಿ ಇದ್ದೋರು ಅಂಗೆ ಅಲವೆ ಸಾಯದು. ಅವುನೇನು ಯಸ್ಸೆಂ ಕಿಸ್ಣನೆ?"

"ಕಿಸ್ಣ ಯಾವ ದುಡ್ಡ ತಿಂದಿದ್ದಾ?"

"ಅವುನೀಟೋರ್ಸ್ ತಿಂದಿದ್ದು ಕಾಂಗ್ರೆಸ್ಸಿನ ದುಡ್ಡಂತಲ್ಲ ಮಾವ. ಈಗ ಕಾಂಗ್ರೆಸ್ ಬುಟ್ಟು ಹೋದ ಅತ್ಲಗೆ."

"ಯಾಕವುನಿಗೇನಾಗಿತ್ತೊ?"

"ಸೋನಿಯಾ ಗಾಂಧಿ ಮಗ ಸರಿಯಾಗಿ ನ್ಯಡಿಸಿಗಳ್ಳಿಲವಂತೆ."

"ನ್ಯಡಿಸಿಗಳ್ಳಿಲ್ಲ ಅಂದ್ರೆ ಅವುನೇನು ಇವುನ ಮಗನೊ ಅಥವಾ ಮೊಮ್ಮಗನೊ. ಅನುಸರಿಸಿಕೊಂಡು ಹೋಗಬೇಕಾಗಿತ್ತು ಕಂಡ್ಳೆ."

"ಇವುನು ಹೋಯ್ತಿದ್ದೊ ಏನೊ, ಕಿಸ್ಣನೆಂಡ್ತಿ 'ನಿನ್ನ ಕತೆಯಾಯ್ತು, ಮಗಳು ಅಳಿಯನ ಬವುಸ್ಯ ನೋಡು. ಆ ಬಿಜೆಪಿಗಳೇನೊ ತೊಂದ್ರೆ ಕೊಡಂಗೆ ಕಾಣ್ತರೆ. ನೀನು ಈಗ್ಲೆ ಬಿಜೆಪಿ ಸೇರಿದ್ರೆ ಅವುರಿಗೆ ವಳ್ಳೆದಾಯ್ತದೆ' ಅಂತ ಹಠ ಮಾಡಿದ್ರಂತೆ. ದಸರತ ಕೈಕೆ ಮಾತು ಕೇಳಿ ಹಾಳಾದಂಗೆ ಇವುನು ಹಾಳಾದ ಅತ್ಲಗೆ."

"ಸಾಯುಕಡೆಸತಿ ಇಂಥ ಹೇಲು ತಿನ್ನೊ ಕ್ಯಲಸ ಮಾಡಕ್ಯಾಗದಿಲ್ಲ ಅನ್ನಕಾಗಲಿಲ್ಲವೆ."

"ಹೆಂಡತಿ ಹೇಳಿದಂಗೆ ಕೇಳೋರು ಏನು ಮಾಡಕ್ಯೂ ಹೇಸದಿಲ್ಲ ಕಣ ಮಾವ. ಆದ್ರು ಯಸ್ಸೆಂ ಕಿಸ್ಣನ ತಂಗಿ ನಾವು ಕಾಲಾದಿಂದ ಕಾಂಗ್ರೆಸ್ ಅನ್ನ ತಿಂದು ಬದುಕಿದೋರು. ನಾವು ಹುಟ್ಟಿರೊ ಸೀರೆ ಇರೊ ಮನೆ ಕಾಂಗ್ರೆಸ್ ಪಾರ್ಟಿಯಿಂದ ಬಂದಿರೋದು. ಹೆಂಡತಿ ಅಳಿಯನಿಗಾಗಿ ಅಂತ ಕ್ಯಲಸ ಮಾಡಬ್ಯಾಡ. ನಿನ್ನ ಜೊತೆಲುಟ್ಟಿರೊ ಇಷ್ಟು ಜನವ ಆಡಿಕತ್ತರೆ ಅಂತ ಅತ್ತಲಂತೆ. ಇವುನು ಅವುಳ ಮಾತ ಕೇಳದೆ ಬಿಜೆಪಿ ಸೇರಕ್ಕೆ ಡೆಲ್ಲಿಗೋದ್ನಂತೆ. ಇತ್ತಗೆ ಅವುನ ತಂಗಿ ಪ್ರಾಣೋಯ್ತಂತೆ ಕಣ ಮಾವ."

"ಪಾಪ, ಮರಿಯಾದಸ್ತರಿಗೆ ಮಾನವೇ ಪ್ರಾಣ. ಅದು ಹೋದ ಮ್ಯಾಲೆ ಇನ್ನಿದ್ದೇನು ಅಂತ ಹೋಗಿರಬೇಕು. ಈ ಯಸ್ಸೆಂ ಕಿಸ್ಣ ಕಡಿಗಾಲ್ದಲ್ಲಿ ಇಂತ ಕ್ಯಲಸ ಮಾಡದಕ್ಕಿಂತ ಇಲಿ ಪಾಶಾಣ ತಿನ್ನಬವುದಿತ್ತು, ನಮ್ಮ ಜನಾಂಗಕ್ಕೆ ಯಂತ ಅವುಮಾನುವುಲೆ, ಇವುನು ಮಾಡಿರೊ ಕ್ಯಲಸ."

"ಜನಾಂಗ ಯಾವತ್ತು ಅವುನು ನಮ್ಮೋನು ಅಂದಿದ್ರು ಮಾವ. ಏಟೇ ಕಷ್ಟ ಬಂದ್ರು ಅವುನ ಮನೆತಕ್ಕೋಗದಂಗೆ ಬದುಕಿದ್ದಿವಿ."

"ಅದು ನಿಜವೆ. ಇವುಂದೇನಿದೆ ಮಸ ಕತೆ ಅಲ್ಲ ಕಂಡ್ಳೇ. ಭಾಳ ಹಿಂದೆ ಒಬ್ಬ ಸಿನುಮ ಆಕ್ಟ್ರಸ್ಸತ್ರ ದುಡ್ಡೀಸಗಂಡು ಮದಿವಾಯ್ತಿನಿ ಅಂತ ಕೈ ಕೊಟ್ಟಿದ್ದ. ಈಗ ಕಾಂಗ್ರೆಸ್ಸಿಗೆ ಕೊಟ್ಟವುನಷ್ಟೆಯ."

"ಪಾಪ ಆ ಗಂಡುಸತ್ತಿರೊ ಸೋನಿಯಾ ಗಾಂಧಿ ಹತ್ತೊರುಸ ದೇಸ ಕಾಪಾಡಿದ್ಲು, ಇವುನ್ನ ಭಾಳ ನಂಬಿದ್ಲಂತೆ. ಅಂತ ಹೆಣ್ಣೆಂಗುಸು ಏನು ತಿಳಕಂಡಳು ಅನ್ನದ್ನು ಯೇಚ್ನೆ ಮಾಡದೆ ವಂಟೋದನಲ್ಲ ಮಾವ."

"ಹೋಗ್ಲಿ ಬುಡ್ಳೆ ಇನ್ನು ಮುಂದೆ ಅವುಂದು ಒಂದು ಬಾಳೆ ಅನ್ನಿಸಿಗತ್ತನೆ ನಮಿಗೇನು."

"ಹೋದದ್ದು ಅಂದ್ರೆ ಇವುನ್ನ ಕರಿಸಿಗಳರು ಶಾಲೊಚ್ಚಿ ಹಾರ ಹಾಕಬೇಕಲವೆ ಮಾವ. ಇವುನೆ ಹಾರ ಶಾಲು ತಗಂಡೋಗಿ ಹಾಕಿ ಸೇರಿಕಂಡ ಅಂದ್ರೆ ಇವುನಿಗೆ ಮಾನ ಮರಿಯಾದಿ ಅನ್ನದೇನಾರ ಇದ್ದತೆ ಮಾವ?"

"ಆ ಮಾನಗೆಟ್ಟೋನ ಸುದ್ದಿ ಬುಡ್ಳೆ ಅತ್ತಗೆ. ಲೇ ಇವುಳೆ ಕಾಫಿ ತಂದು ಕೊಡ್ಳೆ ಜುಮ್ಮಿಗೆ. ಏಟೊತ್ತಾಯ್ತು ಅವುಳು ಬಂದು."

"ಕಾಫಿನು ಬ್ಯಾಡ ಏನೂ ಬ್ಯಾಡ ಬತ್ತಿನಿ ಕಣ ಮಾವ."

"ಮಜ್ಜಿಗೆನಾರ ಕುಡದೋಗ್ಲೆ"

"ಆ ಸೀಮೆ ಹಸಿನ ಮಜ್ಜಿಗೆ ಕುಡಿಯಕ್ಯೂ ಒಂಥರ ಕಣ ಮಾವ. ನೀನು ಯಾವಾಗ್ಲು ಹಿಂಗೆ ಮನಿಕಬ್ಯಾಡ. ಎದ್ದು ಜಯರಾಮನಂಗಡಿ ತಕ್ಕಾರ ಬಂದು ಕೂತಗ."


"ಸಟೀಗುಸಾರಾಗ್ಲಿ ಬತ್ತಿನಿ." ■

ಗದಗ: ಗೌಡಿಕೆ ಪಾಟೀಲರಿಗೆ ದುರ್ಗತಿ ಕಾದಿದೆಯಾ?



ಎಚ್.ಕೆ. ಪಾಟೀಲ್

ಗದಗ ರಾಜಕಾರಣದಲ್ಲಿ ಹುಲಕೋಟಿ ಗೌಡರ ಜಕೀಯಕ್ಕೆ ಭರ್ತಿ 50 ವರ್ಷಗಳ ಇತಿಹಾಸವಿದೆ. ಹಾಲಿ ಮೀಣಾಭಿವೃದ್ಧಿ ಸಚಿವ ಹೆಚ್.ಕೆ.ಪಾಟೀಲರ ತಂದೆ ಹೆಚ್.ಪಾಟೀಲರು 7 ಬಾರಿ ಶಾಸಕರಾಗಿ, 6 ಬಾರಿ ಸಚಿವರಾಗಿ, ದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಮೆರೆದ ರಿ ಅಂತಹದು. 1984 ರಲ್ಲಿ ಜನತಾ ಪಕ್ಷದ ಳಿಯಿಂದಾಗಿ ವಿ.ಎಸ್.ಮುತ್ತಿನ ಪೆಂಡಿಮಠ ದ್ಧ ಒಮ್ಮೆ ಸೋತದ್ದು ಬಿಟ್ಟರೆ ಎದುರಾಳಿಗಳೇ ಲ್ಲದಂತ ವಾತಾವರಣ ನಿರ್ಮಿಸಿಕೊಂಡಿದ್ದರು. 990ರಲ್ಲಿ ಮುಖ್ಯಮಂತ್ರಿ ಗಾದಿಗಾಗಿ ಭಾರೀ ೇಸ್ ನಡೆಸಿದ್ದ ಕೆ.ಎಚ್. ಪಾಟೀಲರಿಗೆ ಆವತ್ತು ಜೀವ್ ಗಾಂಧಿ ಬಂಗಾರಪ್ಪನವರಿಗೆ ಜೈ ಅಂದದ್ದು ರಿ ನಿರಾಸೆ ತಂದಿತ್ತು, ಅನಾರೋಗ್ಯದಿಂದಾಗಿ 1992ರಲ್ಲಿ ಹೆಚ್.ಪಾಟೀಲರು ನಿಧನರಾದ ನಂತರದಿಂದ ಇಲ್ಲಿಯವರೆಗೆ ದಗಿನಲ್ಲಿ ಅವರ ಮಗ ಹೆಚ್.ಕೆ.ಪಾಟೀಲರದ್ದೇ ಕಾರುಬಾರು ಡೆದಿದೆ.



ರಾಜಕಾರಣಕ್ಕೆ ಬರುವುದಕ್ಕೂ ಮುನ್ನ ವಿಶಾಲ ಕರ್ನಾಟಕ ತ್ರಿಕೆಯ ಸಂಪಾದಕರಾಗಿ ಪರಿಸಾರಂಗದಲ್ಲಿದ್ದ ಹೆಚ್.ಕೆ.ಪಾಟೀಲರು ದೆಯ ಸಾವಿನ ಕಾರಣಕ್ಕೆ ಪತ್ರಕರ್ತನ ಕಾಯಕಕ್ಕೆ ಗುಡ್‌ಬೈ ಳಿ ಸಕ್ರಿಯ ರಾಜಕಾರಣಕ್ಕೆ ಧುಮುಕಿದರು. 1993ರಲ್ಲಿ ಮುಖ್ಯ ಪದವೀಧರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದ ರು 1994ರಿಂದ 2004ರವರೆಗೆ ತಮ್ಮ ಚಿಕ್ಕಪ್ಪನ ಮಗ ಚ್.ಆರ್ ಪಾಟೀಲ್‌ರನ್ನು ಶಾಸಕರನ್ನಾಗಿ ಮಾಡುತ್ತಾ ಗದಗಿನಲ್ಲಿ ತಮ್ಮ ಕುಟುಂಬದ ಗೌಡಿಕೆ ಪಾಳೆಗಾರಿಕೆ ವಿಜೃಂಭಿಸುವಂತೆ ನೋಡಿಕೊಂಡು ಬಂದಿದ್ದಾರೆ.

1999ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಹೆಚ್.ಕೆ.ಪಾಟೀಲ್‌ರು ಕೃಷ್ಣ ವಿರುದ್ಧ ಬಂಡೆದ್ದು, ಪರ್ಯಾಯ ನಾಯಕನಾಗಲು ಲಿಂಗಾಯತರ ಲಾಬಿ ಶುರುವಿಟ್ಟುಕೊಂಡು ವಿಫಲರಾದದ್ದೂ ಉಂಟು. 2004ರಲ್ಲೂ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರಕಾರದಲ್ಲಿ ದೇವೇಗೌಡರ ಕೃಪೆಯಿಂದ ಸಿ.ಎಂ.ಗಾದಿಯ ಕನಸು ಕಂಡಿದ್ದರು. ಆದರೆ ಗೌಡರ ಕೃಪೆ ತೂಕದ ಮನುಷ್ಯ ಧರ್ಮ ಸಿಂಗ್‌ರಿಗೆ ಒಲಿದಿತ್ತು. ಆದರೂ ಅಂದು ಹೆಚ್.ಕೆ.ಪಾಟೀಲ್‌ರು ಜಬರದಸ್ತ್ ಖಾತೆ ದಕ್ಕಿಸಿಕೊಂಡಿದ್ದರು.

ಸತತ ಸೋಲುಗಳು

ಮೊದಲಿನಿಂದಲೂ ಮುಖಾಮುಖಿ ಚುನಾವಣಾ ರಾಜಕಾರಣದಿಂದ ದೂರ ಉಳಿದು ಎಂಎಲ್‌ಸಿ ತಂತ್ರಗಾರಿಕೆಯಲ್ಲೇ ಆಟವಾಡುತ್ತಾ ಬಂದಿರುವ ಎಚ್.ಕೆ.ಪಾಟೀಲರಿಗೆ ಈಗ ಸೋಲಿನ ಭೀತಿ ಕಾಡುತ್ತಿರುವಂತಿದೆ. 2008ರವರೆಗೆ ಗದಗಿನಲ್ಲಿ ಪಾಟೀಲರಿಗೆ ಪ್ರತಿಸ್ಪರ್ಧಿಗಳೆಂಬುವವರೇ ಇರಲಿಲ್ಲ, ಆದರೆ ಯಾವಾಗ ಬಳ್ಳಾರಿಯ ಗಣಿರಾಮ ಶ್ರೀರಾಮುಲು 2006ರಲ್ಲಿ ಗದಗ ಜಿಲ್ಲೆಗೆ ಉಸ್ತುವಾರಿ ಸಚಿವನಾಗಿ ಆಗಮಿಸಿದನೋ ಆಗಿನಿಂದ ಹೆಚ್.ಕೆ.ಪಾಟೀಲ್‌ರ ಸುದೀರ್ಘ ರಾಜಕೀಯಕ್ಕೆ ಗ್ರಹಣ ಬಡಿದಂತಾಯಿತು. ಶ್ರೀರಾಮುಲು ನೀರಿನಂತೆ ಹಣ ಚೆಲ್ಲಿ ನೂರಾರು ಸಾಮೂಹಿಕ ಮದುವೆ, ಗಲ್ಲಿಗೆ ಒಂದರಂತೆ ಪುಟ್ಟರಾಜ ಗವಾಯಿಗಳ ಪ್ರತಿಮೆ, ಗಾಂಧಿ ಪ್ರತಿಮೆ, ಭೀಷ್ಮ ಕೆರೆಯಲ್ಲಿ ಬಸವಣ್ಣನ ಪ್ರತಿಮೆ ಅನಾವರಣ ಮಾಡಿಸಿ ಫೇಮಸ್ ಆದದ್ದಲ್ಲದೆ ಬಿಜೆಪಿಗೆ ಮತ ಸಮೂಹವನ್ನು ಸೃಷ್ಟಿ ಮಾಡಿದ್ದ, ಅದರ ಪ್ರತಿಫಲದೆಂಬಂತೆ 2008ರಲ್ಲಿ ಬಿಜೆಪಿಯ ಶ್ರೀಶೈಲಪ್ಪ ಬಿದರೂರ ಎದುರು ಹೆಚ್.ಕೆ.ಪಾಟೀಲ್ 10 ಸಾವಿರ ಮತಗಳ ಅಂತರದಿಂದ ಸೋತರು. ಅಲ್ಲದೇ 2010ರ ವಾಯುವ್ಯ ಪದವೀಧರ ಚುನಾವಣೆಯಲ್ಲೂ ಯಡ್ಡಿಯ ಶಿಷ್ಯ ಮೋಹನ ಲಿಂಬಿಕಾಯಿ ಎದುರು ಮಕಾಡೆ ಮಲಗಿದ್ದರು.

ಹೀಗೆ ಸತತ ಎರಡು ಸೋಲುಗಳಿಂದ ಕಂಗೆಟ್ಟ ಹೆಚ್.ಕೆ.ಪಾಟೀಲ್‌ರ ಕೈಹಿಡಿದದ್ದು ಶುದ್ಧ ನೀರಿನ ಅಭಿಯಾನ. ತಮ್ಮ ತಂದೆಯ ಹೆಸರಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪಿಸಿದ ಪಾಟೀಲರು ಕೇವಲ ಎರಡು ರೂಪಾಯಿಗೆ ಬಿಂದಿಗೆ ಕುಡಿಯುವ ನೀರಿನ ಯೋಜನೆಯನ್ನು ಊರೂರಲ್ಲಿ ಜಾರಿಗೆ ತಂದರು. ಅದು ಅವರಿಗೆ ಅಪಾರ ಹೆಸರು ತಂದುಕೊಟ್ಟಿದ್ದಲ್ಲದೆ 2013ರ ಚುನಾವಣೆಯಲ್ಲಿ ಗೆಲುವನ್ನೂ ದಕ್ಕಿಸಿಕೊಟ್ಟಿತು.

ಅಸಲಿಗೆ, ಆ ಚುನಾವಣೆಯಲ್ಲಿ ರಾಮುಲು ಭಂಟ ಅನಿಲ್ ಮೆಣಸಿನಕಾಯಿ ಬಿ.ಎಸ್.ಆರ್ ಅಭ್ಯರ್ಥಿಯಾಗಿ, ಎಸ್.ವಿ.ಬಿದರೂರ ಬಿಜೆಪಿ ಅಭ್ಯರ್ಥಿಯಾಗಿ ಮತ್ತು ಎಸ್.ಬಿ.ಸಂಕಣ್ಣ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು ಪಾಟೀಲರಿಗೆ ಅನುಕೂಲವಾಯ್ತು, ಬಿಜೆಪಿಯ ಮತಗಳು ವಿಭಜನೆಗೊಂಡಿದ್ದರಿಂದ ಪಾಟೀಲರು ಗೆದ್ದು ಬಂದರು. ಜೊತೆಗೆ ತಾನು ಗೆದ್ದರೆ ಗದಗಿನ ಜನತೆಗೆ ವಾರಕ್ಕೊಮ್ಮೆ ನೀರು ಕೊಡುವುದಾಗಿ ಭರವಸೆ ಕೊಟ್ಟಿದ್ದೂ ಅವರ ಕೈಹಿಡಿದಿತ್ತು, ಆದರೆ ಹೆಚ್.ಕೆ.ಪಾಟೀಲ್‌ರು ಇಂದು ಆ ಭರವಸೆ ಮರೆತಿದ್ದಾರೆ. ಗದಗಿನಲ್ಲಿ ಇವತ್ತು ತಿಂಗಳಿಗೊಮ್ಮೆ ಕುಡಿಯುವ ನೀರು ಸರಬರಾಜಾದರೆ ಅದೇ ಪುಣ್ಯ!

ಇನ್ನು ಗದಗಿನ ಕಪ್ಪತ್ತಗುಡ್ಡವನ್ನು ತೋಡಲು ಬಲ್ಡೋಟಾ ಕಂಪನಿಗೆ ಗುತ್ತಿಗೆ ನೀಡಲು ಸರ್ಕಾರ ಮುಂದಾದರೂ ಅದರ ವಿರುದ್ಧ ಸ್ಥಳೀಯ ಮಂತ್ರಿಯಾಗಿ ದನಿ ಬಿಚ್ಚದ ಪಾಟೀಲರ ವಿರುದ್ಧ ಜನರಿಗೆ ಮುನಿಸಿದೆ. ತೋಂಟದ ಸಿದ್ಧಲಿಂಗ ಶ್ರೀಗಳು, ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಮತ್ತು ಇನ್ನಿತರರ ಬೃಹತ್ ಹೋರಾಟದಿಂದಾಗಿ ಸದ್ಯಕ್ಕೆ ಕಪ್ಪತಗುಡ್ಡದ ದೊಗ್ಡೆ ತನ್ನ ಬೇಸನ್ನು ನಿಲ್ಲಿಸಿದೆ.

ಇವೆಲ್ಲವೂ ಮುಂದಿನ ಚುನಾವಣೆಯಲ್ಲಿ ಎಚ್.ಕೆ. ಪಾಟೀಲರಿಗೆ ಒಂದು ಗತಿ ಕಾಣಿಸಲು ಕಾದು ಕುಳಿತಂತೆ ಕಾಣುತ್ತಿವೆ. ಕಳೆದ ಚುನಾವಣೆಯಲ್ಲಿ ಹೆಚ್.ಕೆ.ಪಾಟೀಲ್ ವಿರುದ್ಧ 36 ಸಾವಿರ ಮತ ಪಡೆದಿದ್ದ ಅನಿಲ್ ಮೆಣಸಿನಕಾಯಿ ಸೋತ ನಂತರ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದಾನೆ. ಯಡ್ಡಿ ಬಿಜೆಪಿಗೆ ವಾಪಾಸಾಗಿರೋದರಿಂದ ಕೆಜೆಪಿಯ ಹುರಿಯಾಳಾಗಿದ್ದ ಸಂಕಣ್ಣ ಕೂಡಾ ತಣ್ಣಗಾಗಿದ್ದಾರೆ. ಈಗೇನಿದ್ದರೂ ಬಿಜೆಪಿಯ ಮಾಜಿ ಶಾಸಕ ಎಸ್.ವಿ.ಬಿದರೂರರದ್ದೇ ಕಾರುಬಾರು. ಹೀಗೆ ಇವರೆಲ್ಲಾ ಒಟ್ಟಾಗಿರೋದು ಕೂಡಾ ಹೆಚ್.ಪಾಟೀಲ್‌ರಿಗೆ ಸಂಕಟವನ್ನು ಸೂಚಿಸುತ್ತದೆ. ಈಗಾಗಲೇ ಯಡ್ಡಿ ಕೂಡ ಬಿದರೂರರಿಗೆ ಬಿಜೆಪಿ ಟಿಕೇಟ್ ನೀಡಲು ಸಜ್ಜಾಗಿದ್ದು, ಪಾಟೀಲರು ಎಚ್ಚೆತ್ತುಕೊಳ್ಳದಿದ್ದರೆ ಸೋಲಿನ ಪುನರಾವರ್ತನೆಯಾಗುವುದರಲ್ಲಿ ಅನುಮಾನವೇ ಇಲ್ಲ.

■ ಸ.ಶರಣಪ್ಪ ಪಾಟೀಲ್ ಕರಮುದಿ

ವಿಚಾರಶಕ್ತಿ



ಬಸವ ಶಾಸನ-3

ಸಹಸ್ರಾರು ವರ್ಷಗಳಿಂದ ಭಾರತೀಯರು ಶಾಸ್ತ್ರ ಪಂಚಾಂಗಗಳನ್ನು ನಂಬಿ ಬದುಕಿದವರಾಗಿದ್ದರು. ಜನರು ವೈಚಾರಿಕತೆಯನ್ನು ನಂಬಿ ಬದುಕಬೇಕೆಂದು ಬಸವಣ್ಣನವರು ಹೇಳಿದರು. "ಕರ್ಣದಲಿ ಜನಿಸಿದವರುಂಟೆ ಜಗದೊಳು" ಎಂದು ಪ್ರಶ್ನಿಸಿದರು. "ವಾರ ತಿಥಿ ಸುಮುಹೂರ್ತ ಎಂಬ ಲೌಕಿಕದ ಕರ್ಮವ ಮಾಡಿದಡೆ ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ" ಎಂದು ಚೆನ್ನಬಸವಣ್ಣನವರು ಸಾರಿದರು.

"ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು
ತೆತ್ತೀಸಕೋಟಿ ದೇವತೆಗಳ ನಾವು ಬಲ್ಲೆವು
ಅದೇನು ಕಾರಣವೆಂದಡೆ;
ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದರಾಗಿ
ಇವರು ದೇವರೆಂಬುದ ನಾ ಬಲ್ಲೆನಾಗಿ
ಒಲ್ಲೆನೆಂದಾತನಂಬಿಗ ಚೌಡಯ್ಯ"

ಅಂಬಿಗರ ಚೌಡಯ್ಯನವರು ಗುಡಿಗುಂಡಾರಗಳ ದೇವರುಗಳನ್ನು ಅಲ್ಲಗಳೆದರು.

"ಸತ್ತು ಮಣ್ಣಾಗಿ ಹೋದ ಮಾತಾಪಿತರುಗಳು ತಮ್ಮ ಸಂತಾನವಾಗಿ ಜನಿಸಿ ಬಂದರೆಂದು ಹೆತ್ತು ಹೆಸರಿಟ್ಟು ಕರೆವರಯ್ಯಾ" ಎಂದು ಮಡಿವಾಳ ಮಾಚಿದೇವರು ಪುನರ್ಜನ್ಮವನ್ನು ತಿರಸ್ಕರಿಸಿದರು. "ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?" ಎಂದು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಪ್ರಶ್ನಿಸಿದಳು. ಹೀಗೆ ಕಾಯಕಜೀವಿಗಳು ವಿಚಾರಶಕ್ತಿಯನ್ನು ಬೆಳೆಸಿಕೊಂಡರು.

ಆತ್ಮಶಕ್ತಿ

ಮನಸ್ಸನ್ನು ಕೇಂದ್ರೀಕರಿಸುವ ಇಷ್ಟಲಿಂಗ ಯೋಗವು ಖಂಡಿತವಾಗಿಯೂ ಆತ್ಮಶಕ್ತಿಯನ್ನು ವೃದ್ಧಿಸುವ ಕುರುಹು ಆಗಿದೆ. 'ಮರಣವೆ ಮಹಾನವಮಿ' ಎಂದು ಬಸವಣ್ಣನವರು ಹೇಳಿದ್ದು ಧೈರ್ಯದ ಅತ್ಯುನ್ನತ ಸ್ಥಿತಿಯ ದ್ಯೋತಕವಾಗಿದೆ. ಇಷ್ಟಲಿಂಗಯೋಗದ ಮೂಲಕ ಲಿಂಗಾಂಗಸಾಮರಸ್ಯ ಸಾಧಿಸಿದ ಶರಣರು ಸಾವಿಗೂ ಅಂಜದ ವೀರರಾದರು. ಇಷ್ಟಲಿಂಗವು ಯಾವುದೇ ಹೊರಗಿನ ಶಕ್ತಿಯ ಮೇಲೆ ಅವಲಂಬಿತವಾಗದಂಥ ಆತ್ಮಶಕ್ತಿಯನ್ನು ಕೊಡುತ್ತದೆ ಮತ್ತು ಆ ಮೂಲಕ ಸಕಲಜೀವಾತ್ಮರಿಗೆ ಲೇಸನೆ ಬಯಸುವ ದಯಾಭಾವ ಮೂಡಿಸುತ್ತದೆ. ದಯವೇ ಇಷ್ಟಲಿಂಗದ ಮೂಲ ಸೆಲೆಯಾಗಿದೆ. ಆದ್ದರಿಂದಲೇ ಬಸವಣ್ಣನವರು 'ದಯೆಯೆ ಧರ್ಮದ ಮೂಲವಯ್ಯಾ' ಎಂದು ಹೇಳಿದರು. 'ಕೂಡಲಸಂಗಮದೇವರೇ ಧರ್ಮದ ಮೂಲ' ಎಂದು ಅವರು ಹೇಳಲಿಲ್ಲ. ದಯೆ ಮತ್ತು ಧೈರ್ಯ ಇಷ್ಟಲಿಂಗ ತತ್ತ್ವದ ಮಹಾ ಕಾಣಿಕೆಗಳಾಗಿವೆ. ದೇವರು ದಯೆಯ ರೂಪದಲ್ಲಿ ಮಾತ್ರ ಇರುತ್ತಾನೆ. ದೇವರ ಮೂಲ ಹೆಸರೇ ದಯೆ ಎಂಬುದು ಬಸವಣ್ಣನವರ ನಂಬಿಕೆಯಾಗಿತ್ತು. ದಯೆಯು ಮನುಷ್ಯನನ್ನು ವಸ್ತುಮೋಹದಿಂದ ಹೊರ ತರುವುದು. ವಸ್ತುಮೋಹಿಗಳು ಅತ್ಯಂತ ದುರ್ಬಲ ವ್ಯಕ್ತಿತ್ವದವರು. ದಯೆಯುಳ್ಳವರು ಸಹಜವಾಗಿಯೆ ಐಹಿಕ ಆಸೆಗಳಿಂದ ಹೊರಬರುವುದರಿಂದ ಅವರು ಬದುಕಿಗೆ ಅಂಜುವವರಲ್ಲ, ಹೀಗಾಗಿ ಅವರು ವೀರಗುಣವನ್ನು ಹೊಂದಿರುತ್ತಾರೆ. ಜೀವಕಾರುಣ್ಯದ ಮೂಲಕ ಹೊಸ ಜಗತ್ತನ್ನು ರೂಪಿಸಬೇಕೆನ್ನುವವರಿಗೆ ಜಗತ್ತಿನ ಎಲ್ಲ ವಸ್ತುಗಳು ತೃಣಸಮಾನವಾಗಿ ಕಾಣತೊಡಗುವವು. "ತಾ ಮಲಗುವ ದರ್ಭೆ ಮಂಚ, ಉಣ್ಬುವುದು ಪಡಿಯಕ್ಕಿ, ಕುಡಿಯುವುದು ಒಂದಾವಿನ ಹಾಲು, ಸಿರಿಯ ನೆಚ್ಚಿ ಕೆಡಬೇಡ ಮನುಜಾ" ಎಂದು ಮೋಳಿಗೆ ಮಾರಯ್ಯನವರು ಹೇಳಿದ್ದಾರೆ. ಹೀಗೆ ಐಹಿಕ ವಸ್ತುಗಳಲ್ಲಿ ಸರ್ವರಿಗೂ ಸಮಪಾಲು ಬಯಸುವ ಶರಣರು ಸ್ವತಃ ಐಹಿಕ ಆಸೆಗಳಿಂದ ಮುಕ್ತರಾಗುವಂಥ ಆತ್ಮಶಕ್ತಿಯನ್ನು ಹೊಂದಿದ್ದರು.

ಇಂಥ ಆತ್ಮಶಕ್ತಿಯನ್ನು ಹೊಂದಿದ್ದರಿಂದಲೇ ಅವರು ತಮ್ಮ ಹೃದಯದೊಳಗೆ ಇಡೀ ಜಗತ್ತನ್ನು ತುಂಬಿಕೊಂಡರು. ಹೃದಯದ ಜ್ಞಾನದಿಂದ ಮಾತ್ರ ಇಡೀ ಜಗತ್ತನ್ನು ಸರ್ವಸಮತ್ವಭಾವದಿಂದ ನೋಡಲು ಸಾಧ್ಯ. ಅಂಥ ಸಾಧನೆಯನ್ನು ಮಾಡಿದವರು ನಮ್ಮ ಶರಣರು. ಆ ಮೂಲಕ ಅವರು ಜಂಗಮಪೂಜೆ ಮಾಡಿದರು. ಜಂಗಮಪೂಜೆ ಎಂದರೆ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಕ್ರಿಯಾಶೀಲರಾಗಿ ಲೋಕದ ಹಿತ ಕಾಪಾಡುವುದು. "ಇನ್ನು ಜಂಗಮವೇ ಲಿಂಗವೆಂದು ನಂಬಿದೆ" ಎಂದು ಬಸವಣ್ಣನವರು ಹೇಳಿದ್ದಾರೆ. ಇಷ್ಟಲಿಂಗದ ಮೂಲಕ ಅರಿವು ಪಡೆದವರು ಜಂಗಮಲಿಂಗವೆಂಬ ಸಮಾಜದಲ್ಲಿ ಆಚರಣೆಗೆ ತರುತ್ತಾರೆ. ಇಷ್ಟಲಿಂಗವು ಆತ್ಮಶಕ್ತಿಯನ್ನು ಹೆಚ್ಚಿಸುವ ಗರಡಿಮನೆಯಂತೆ ಇದೆ. ಆದರೆ ಅಲ್ಲಿ ಶಕ್ತಿಯನ್ನು ಪಡೆದಾತ ಜಂಗಮಲಿಂಗವೆಂಬ ಜಗತ್ತಿನ ಅಖಾಡಾದಲ್ಲಿ ಸತ್ಯದ ಗೆಲವಿಗಾಗಿ ಹೋರಾಟವನ್ನು ಮಾಡಲೇಬೇಕು.

ಚಳವಳಿಯ ಶಕ್ತಿ

ಶರಣರು ಎಲ್ಲ ತೆರನಾದ ಅನ್ಯಾಯಗಳ ವಿರುದ್ಧ ಚಳವಳಿ ಹೂಡುವ ಸಾಮರ್ಥ್ಯವನ್ನು ಹೊಂದಿದ್ದರು. "ಲಿಂಗಾರ್ಚನೆ ಮಾಡುವ ಮಹಿಮರೆಲ್ಲ ಸಲುಗೆಯಿಂದ ಒಳಗೈದಾರೆ. ಆನು ದೇವಾ ಹೊರಗಣವನು, ನಿಮ್ಮ ನಾಮವಿಡಿದ ಅನಾಮಿಕ ನಾನು. ಸಂಚೋಳಿ ಸಂಚೋಳಿ ಎಂದು ಇಂಬಿನಲ್ಲಿ ಇದ್ದೇನೆ" ಎಂಬ ಬಸವಣ್ಣನವರ ವಚನ ಚಳವಳಿಯ ಸಂಕೇತವಾಗಿದೆ. ಬಸವಪೂರ್ವ ಜಗತ್ತಿನಲ್ಲಿ ಯಾವುದೇ ಚಳವಳಿ ನಡೆದ ದಾಖಲೆಗಳಿಲ್ಲ. ಅಲ್ಲಿಯವರೆಗೆ ಜಗತ್ತಿನಲ್ಲಿ ಅನ್ಯಾಯದ ಯುದ್ಧಗಳಾಗುತ್ತಿದ್ದವು. ಹಾಗೆಯೆ ಅವುಗಳ ವಿರುದ್ಧ ನ್ಯಾಯದ ಯುದ್ಧಗಳಾಗುತ್ತಿದ್ದವು. ಜಗತ್ತಿಗೆ ಚಳವಳಿಯ ಪಾಠ ಕಲಿಸಿದವರೇ ಬಸವಣ್ಣನವರು. ಶರಣರ ಚಳವಳಿಗಳು ಸತ್ಯ ಮತ್ತು ಅಹಿಂಸೆಯ ನೆಲೆಯಲ್ಲಿ ನಡೆದವು.

ಶಿವಾಲಯದ ಗರ್ಭಗುಡಿಯೊಳಗೆ ಮಹಿಮರು (ಬಸವಣ್ಣನವರ ವ್ಯಂಗ್ಯದ ರೀತಿಯಿದು. ಇದರರ್ಥ ಮಹಾಜನರೆಂದು ಕರೆಯಲಾಗುವ ಪಟ್ಟಭದ್ರ ಹಿತಾಸಕ್ತಿಗಳು) ಲಿಂಗಾರ್ಚನೆಗಾಗಿ ಸಲುಗೆಯಿಂದ ದೇವರು ನಮ್ಮಂಥವರಿಗೆ ಮಾತ್ರ ಎನ್ನುವ ರೀತಿಯಲ್ಲಿ ನಿಂತಿದ್ದಾರೆ. ಆದರೆ ದೇವರೇ ನಾನು ಹೊರಗಣವನು ಎಂದು ಬಸವಣ್ಣನವರು ಹೇಳುತ್ತಾರೆ. ಹೊರಗಣವನು ಎಂದರೆ ಗುಡಿಯ ಪ್ರವೇಶಕ್ಕೆ ಹೊರತಾದ ಅಸ್ಪೃಶ್ಯನು. ಬ್ರಾಹ್ಮಣ ಕುಲದಲ್ಲಿ ಜನಿಸಿದರೂ ಅಲ್ಲಿನ ತಾರತಮ್ಯವನ್ನು ಧಿಕ್ಕರಿಸಿದ ಬಸವಣ್ಣನವರು ಮಾನಸಿಕವಾಗಿ ಕೆಳಜಾತೀಕರಣಕ್ಕೆ ಒಳಗಾಗಿ ದಲಿತರು ಮತ್ತು ಇತರೆ ಕಾಯಕಜೀವಿಗಳ ಉದ್ಧಾರಕ್ಕಾಗಿ ತಮ್ಮ ಬದುಕನ್ನೇ ಪಣಕ್ಕಿಡುತ್ತಾರೆ. ಯಾವುದೇ ಅಹಂಕಾರಕ್ಕೆ ಒಳಗಾಗದ ಬಸವಣ್ಣನವರು 'ನಿಮ್ಮ ನಾಮವಿಡಿದ ಅನಾಮಿಕ' ಎಂದು ಹೇಳುವಲ್ಲಿ ಮತ್ತೆ ತಮ್ಮನ್ನು ಅಸ್ಪೃಶ್ಯರೊಂದಿಗೆ ಗುರುತಿಸಿಕೊಳ್ಳುತ್ತಾರೆ. ವೈದಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಅನಾಮಿಕರಾಗಿಯೆ ಬದುಕಿದವರು ಎಂಬುದನ್ನು ಸೂಚಿಸುತ್ತಾರೆ. 'ಸಂಚೋಳಿ ಸಂಚೋಳಿ ಎಂದು ದೂರದಲ್ಲಿ ಇದ್ದೇನೆ' ಎಂದು ಒಳಗಿದ್ದವರಿಗೆ ಎಚ್ಚರಿಸುತ್ತಾರೆ. ಅಸ್ಪೃಶ್ಯರು ಊರ ಒಳಗೆ ಬರುವ ಸಂದರ್ಭದಲ್ಲಿ ಬಳಸುವ ಸಂಚೋಳಿ ಪದವನ್ನೇ ಬಳಸುತ್ತಾರೆ. ಸಂಚೋಳಿ ಎಂಬುದಕ್ಕೆ ಎಚ್ಚರ ಎಂಬ ಅರ್ಥವೂ ಇರುವುದರಿಂದ ಈ ವಚನ ವಿಶಿಷ್ಟವಾದ ಚಳವಳಿಯನ್ನು ಸೂಚಿಸುತ್ತದೆ. ಬಸವಣ್ಣನವರು ಶಿವಾಲಯದ ಹೊರಗೆ ಅಸ್ಪೃಶ್ಯರ ಜೊತೆ ನಿಂತು ಅವರಿಗೆ ಮಾನಸಿಕ ಧೈರ್ಯ ತುಂಬುವ ಮತ್ತು ಒಳಗಿರುವ ಜನರ ಟೊಳ್ಳುತನವನ್ನು ಬಯಲಿಗೆಳೆಯುವ ಕ್ರಿಯೆಯನ್ನು ಈ ವಚನ ಒಳಗೊಂಡಿದೆ.

ಕ್ರಿಯಾಶಕ್ತಿ

ಶರಣರಿಗೆ ಕಾಯಕವು ಜೀವನಗಾಥೆಯಂತೆ ಕಂಡಿತು. ಅವರಿಗೆ ಕಾಯಕವೇ ಕೈಲಾಸವಾಯಿತು. "ಸಾಕ್ಷಾತ್ ಅಮರೇಶ್ವರ ಲಿಂಗವಾದಡೂ ಕಾಯಕದೊಳಗು" ಎಂದು ಆಯ್ದಕ್ಕಿ ಮಾರಯ್ಯನವರು ಹೇಳಿದ್ದಾರೆ. ಅವರು ದುಡಿಮೆಯಲ್ಲೇ ದೇವರನ್ನು ಕಂಡರು. ಆ ದುಡಿಮೆಯ ಫಲವನ್ನು ಲೋಕಕಲ್ಯಾಣಕ್ಕಾಗಿ ಬಳಸಿದರು. ಅವರು ಕೂಡಿಡುವ ದುಃಖಕ್ಕೆ ಬಲಿಯಾಗಲಿಲ್ಲ, ಆದರೆ ದಾಸೋಹದ ಮೂಲಕ ಕೊಡುವುದರಲ್ಲಿ ಆನಂದ ಪಟ್ಟರು. ಕಲ್ಯಾಣವನ್ನು ಸಮೃದ್ಧಿಯ ದೇಶವಾಗಿಸಿದರು. ಬಿಜ್ಜಳ ದೊರೆಯ ಬೊಕ್ಕಸವನ್ನೂ ತುಂಬಿಸಿದರು. ಶರಣರ ಈ ಕ್ರಿಯಾಶಕ್ತಿ ಭರತಖಂಡದ ವಿವಿಧ ದೇಶ ಮತ್ತು ಪ್ರದೇಶಗಳ ಜನರನ್ನು ಆಕರ್ಷಿಸಿತು. ವಿವಿಧ ತತ್ತ್ವ ಸಿದ್ಧಾಂತಗಳ ಜನರು ಕೂಡ ಬಂದು ಇಷ್ಟಲಿಂಗದ ಆರಾಧಕರಾದರು.

ತನ್ನ ತಾ ಅರಿಯುವ ಶಕ್ತಿ

ಸೃಷ್ಟಿಕರ್ತ ಮತ್ತು ಸೃಷ್ಟಿಯ ಕುರಿತು ಇಷ್ಟಲಿಂಗಯೋಗಿ ಅರಿವು ಪಡೆದ ಮೇಲೆ ಪರಮಾತ್ಮ ಮತ್ತು ಲೋಕಾತ್ಮಗಳ ಜೊತೆ ತನ್ನ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾನೆ. ವಿಶ್ವಚೈತನ್ಯದ ಒಂದು ಕಣವಾದ ತಾನು ಶಿವಸ್ವರೂಪಿ ಎಂಬ ಸತ್ಯದ ಸಾಕ್ಷಾತ್ಕಾರವಾದ ಮೇಲೆ ಸಕಲಜೀವಾತ್ಮರಿಗೆ ಲೇಸನೆ ಬಯಸುವುದು ಮತ್ತು ಅದಕ್ಕಾಗಿ ಕಾರ್ಯೋನ್ಮುಖವಾಗುವುದು ತನ್ನ ಆದ್ಯ ಕರ್ತವ್ಯ ಎಂದು ಭಾವಿಸುತ್ತಾನೆ. "ಅರಿವೆ ಗುರು, ಆಚಾರವೆ ಶಿಷ್ಯ ಜ್ಞಾನವೆ ಲಿಂಗ, ಪರಿಣಾಮವೆ ತಪ, ಸಮತೆಯೆಂಬುದೆ ಯೋಗದಾಗು ನೋಡಾ" ಎಂದು ಹಾವಿನಾಳ ಕಲ್ಲಯ್ಯನವರು ಹೇಳಿದ್ದು ಮನೋಜ್ಞವಾಗಿದೆ. ಲಿಂಗಾಯತ ಧರ್ಮದ ಅಂತಿಮ ಗುರಿ ಸಮತಾವಾದವೇ ಆಗಿದೆ.

"ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕರ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ."



ಧರ್ಮದ ಅಂತಿಮ ಗುರಿಯನ್ನು ಅರಿಯದೆ ಲಿಂಗಪೂಜೆ ವ್ಯರ್ಥ ಎಂದು ಬಸವಣ್ಣನವರು ಈ ವಚನದಲ್ಲಿ ತಿಳಿಸಿದ್ದಾರೆ. ಶಿವಪಥವು ಸಮತೆಯ ಪಥವಾಗಿದೆ. ಹೇಡಿಗಳ ಕೈಯಲ್ಲಿ ಚಂದ್ರಾಯುಧ ನಿಷ್ಪ್ರಯೋಜಕವಾಗಿರುತ್ತದೆ. ಅದೇ ರೀತಿ ಮಾನವಕುಲದಲ್ಲಿ ಏಕತೆ ಮತ್ತು ಸಮಾನತೆ ಬಯಸದವನ ಕೈಯಲ್ಲಿ ಲಿಂಗವಿದ್ದೂ ನಿಷ್ಪ್ರಯೋಜಕ.

"ಎರೆದಡೆ ನನೆಯದು, ಮರೆದಡೆ ಬಾಡದು
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ
ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನನೆಯಿತು" ಎಂದು ಬಸವಣ್ಣನವರು ಹೇಳುವಲ್ಲಿ ಜಂಗಮ (ಸಮಾಜ) ಸೇವೆಯೆ ಪ್ರಮುಖವಾಗಿದೆ. ಸಕಲಜೀವಿಗಳ ಏಳ್ಗೆಯ ಉದ್ದೇಶದಿಂದ ಕಾರ್ಯೋನ್ಮುಖವಾಗದಿದ್ದರೆ ಇಷ್ಟಲಿಂಗ ಪೂಜೆಯು ನಿಷ್ಪ್ರಯೋಜಕ ಪೂಜೆಯಾಗುತ್ತದೆ.

ಪರಿವರ್ತನಾ ಶಕ್ತಿ

ಲಿಂಗಾಂಗಸಾಮರಸ್ಯದ ಅರಿವು ಮಾನವನನ್ನು ಐಹಿಕ ಆಸೆಗಳಿಂದ ಮುಕ್ತಗೊಳಿಸಿ ಇಡೀ ಮಾನವಕುಲವನ್ನು ಸರ್ವೋದಯದ ಕಡೆಗೆ ಒಯ್ಯುವಂಥ ಪರಿವರ್ತನಾ ಸಾಮರ್ಥ್ಯವನ್ನು ಹೊಂದಿದೆ. ಪರಿವರ್ತನೆಯು ನಿಸರ್ಗದ ನಿಯಮವಾಗಿದೆ. ಬಸವಧರ್ಮವು ಪರಿವರ್ತನಾ ಪ್ರಧಾನ ಧರ್ಮವಾಗಿದ್ದರಿಂದ ಈ ಧರ್ಮವನ್ನು ನಿಸರ್ಗಧರ್ಮ ಎಂದೂ ಕರೆಯಬಹುದು. ಕಾಯಕವು ನಿಸರ್ಗ ನಿಯಮದ ಮೂಲಾಧಾರವಾಗಿದೆ. ಎಲ್ಲ ಚರಾಚರ ವಸ್ತುಗಳ ಮತ್ತು ಜೀವಿಗಳು ಸದಾ ಕಾಯಕನಿರತವಾಗಿರುತ್ತವೆ. ಯಾವುದು ಕಾಯಕ ಮಾಡುವುದಿಲ್ಲವೋ ಅದಕ್ಕೆ ಅಸ್ತಿತ್ವದಲ್ಲಿರುವ ಹಕ್ಕಿಲ್ಲ. ಹಣ್ಣೆಲೆಯು ದ್ಯುತಿಸಂಶ್ಲೇಷಣೆ ಮಾಡುವುದನ್ನು ನಿಲ್ಲಿಸಿದಾಗ ಮರವು ಅದನ್ನು ತ್ಯಜಿಸುತ್ತದೆ. ಇದಕ್ಕೆ ಕಾರ್ಲ್ ಮಾರ್ಕ್ಸ್ 'ನಿಷೇಧದ ನಿಷೇಧ' ಎಂದು ಕರೆದಿದ್ದಾರೆ. ನಿಸರ್ಗದಲ್ಲಿ ಯಾವುದು ಕ್ರಿಯಾಶೀಲವಾಗಿಲ್ಲವೋ ಅದಕ್ಕೆ ಸ್ಥಾನವಿಲ್ಲ.

ಮೂರು ಅವಸ್ಥೆಗಳ ಧರ್ಮ

ಲಿಂಗಾಯತ ಧರ್ಮವು ಮೂರು ಅವಸ್ಥೆಗಳಿಂದ ಕೂಡಿದ ಧರ್ಮವಾಗಿದೆ. ಇಡೀ ವಚನ ಸಾಹಿತ್ಯ ಈ ಮೂರು ಅವಸ್ಥೆಗಳ ವಿವರಣೆಗೆ ಮೀಸಲಾಗಿದೆ. 12ನೇ ಶತಮಾನದ ವಚನಕಾರರು ವಚನಗಳ ರಚನೆ ಮಾಡಿದರು. ಹೊರತಾಗಿ ವಿವಿಧ ಅವಸ್ಥೆ ಮತ್ತು ಸ್ಥಲಗಳ ವಚನಗಳೆಂದು ಬರೆದಿಲ್ಲ. ಆದರೆ 15ನೇ ಶತಮಾನದ ಸಂಕಲನಕಾರರು ವಿವಿಧ ಸ್ಥಲಗಳ ವಚನಗಳನ್ನು ವಿಂಗಡಿಸಿ ವಚನಕಟ್ಟುಗಳನ್ನು ಸಿದ್ಧಪಡಿಸಿದರು. ಬಸವಣ್ಣ, ಅಲ್ಲಮಪ್ರಭು ಮತ್ತು ಚೆನ್ನಬಸವಣ್ಣನವರ ವಚನಗಳನ್ನು ಮಾತ್ರ ಷಟ್‌ಸ್ಥ
ವಿಂಗಡಿಸಲಾಗಿದೆ. ಸಿದ್ಧರಾಮೇಶ್ವರರ ಷಟ್‌ಸ್ಥಲದ ವ
ಎಂದು ಹೇಳಿದ್ದರೂ ವಚನಗಳ ವಿಂಗಡನೆಯಾಗಿ

ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚ
ಈ ಅವಸ್ಥೆಗಳು. ಮಾನವನನ್ನು ಶರಣನಾಗಿಸುವ ಪ್ರ
ವಿಶ್ವಮಾನವ ಪ್ರಜ್ಞೆಯನ್ನು ಮೂಡಿಸುವಲ್ಲಿ ಈ ಅ
ಪಾತ್ರ ಹಿರಿದಾಗಿದೆ.

ಅಷ್ಟಾವರಣ

ಗುರು, ಲಿಂಗ, ಜಂಗಮ, ಪಾದೋದಕ, ಪ
ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟ ಆವರ
ಮಾನವನ ಮನಸ್ಸು ಐಹಿಕ ಆಕರ್ಷಣೆಗ
ಕಲುಷಿತವಾಗದಂತೆ ಈ ಎಂಟು ಆವರ
ರಕ್ಷಾಕವಚಗಳಂತೆ ತಡೆಯುತ್ತವೆ. ಇವು ಮನಸ್ಸಿನ ಕೋ
ಅಥವಾ ಹೊದಿಕೆಗಳು. ಇವುಗಳಿಂದಾಗಿ ಮನಸ್ಸಿನ
ಬಾಹ್ಯ ಆಕರ್ಷಣೆಗಳ ಪ್ರಭಾವ ಬೀಳುವುದಿಲ್ಲ. ಬಿತ್ತ
ಬೀಜಗಳನ್ನು ಸಿದ್ಧಪಡಿಸುವ ಬೀಜೋಪಚಾರದಂತೆ ಮ
ಸಿದ್ಧಪಡಿಸುವ ಕಾರ್ಯ ಅಷ್ಟಾವರಣಗಳಲ್ಲಿ ನಡೆಯ
ಅರಿವೆ ಗುರು, ವಿಶ್ವತತ್ತ್ವವೇ ಲಿಂಗ, ಚರಾಚರ
ಕೂಡಿದ ಸೃಷ್ಟಿಯೆ ಜಂಗಮ, ಲಿಂಗಕ್ಕೆ ಮಜ್ಜನಕ್ಕೆ
ಪಾದ (ಜ್ಞಾನ) ಉದಕ. ಪ್ರಸಾದಕಾಯ ಮೊದಲು
ಜೀವಿಸಲಿಕ್ಕೆ ಬೇಕಾದುದೆಲ್ಲವೂ ದೇವರು ಕೊಟ್ಟರು
ಪ್ರಸಾದ. ಶೂನ್ಯದಿಂದ ಬಂದ ವಿಶ್ವ ಮತ್ತೆ ಆ ಚೈತನ್ಯ
ಶೂನ್ಯವನ್ನೇ ಸೇರುವಂಥ ಅಂತಿಮ ಸತ್ಯದ
ಮೂಡಿಸುವುದು ವಿಭೂತಿ. ಒಳನೋಟಗಳ ಸಂಕೇ
ರುದ್ರಾಕ್ಷಿ. ಸತ್ಯ, ಮಂಗಳಕರ (ಶಿವ) ವ
ಸುಂದರವಾದುದನ್ನು ಜಪಿಸುವುದೇ ಮಂತ್ರ.
ಅಷ್ಟಾವರಣಗಳಿಂದ ಮನಸ್ಸು ಸಂಸ್ಕಾರಗೊಳ್ಳುತ್ತದೆ

"ಗುರು ತನ್ನ ವಿನೋದಕ್ಕೆ ಗುರುವಾದ
ಗುರು ತನ್ನ ವಿನೋದಕ್ಕೆ ಲಿಂಗವಾದ
ಗುರು ತನ್ನ ವಿನೋದಕ್ಕೆ ಜಂಗಮವಾದ
ಗುರು ತನ್ನ ವಿನೋದಕ್ಕೆ ಪಾದೋದಕವಾದ
ಗುರು ತನ್ನ ವಿನೋದಕ್ಕೆ ಪ್ರಸಾದವಾದ
ಗುರು ತನ್ನ ವಿನೋದಕ್ಕೆ ವಿಭೂತಿಯಾದ
ಗುರು ತನ್ನ ವಿನೋದಕ್ಕೆ ರುದ್ರಾಕ್ಷಿಯಾದ
ಗುರು ತನ್ನ ವಿನೋದಕ್ಕೆ ಮಹಾಮಂತ್ರವಾದ
ಇಂತೀ ಭೇದವನರಿಯದೆ,
ಗುರು ಲಿಂಗ ಜಂಗಮ ಪಾದತೀರ್ಥ ಪ್ರಸಾದ ವಿ
ರುದ್ರಾಕ್ಷಿ
ಓಂ ನಮಃ ಶಿವಾಯಯೆಂಬ ಮಂತ್ರವ ಬೇ
ಅರಿಯಬಾರದು.
ಅದಲ್ಲದೆ ಒಂದರಲ್ಲಿಯೂ ವಿಶ್ವಾಸ ಬೇರಾದ
ಅಂಗೈಯಲ್ಲಿದ್ದ ಲಿಂಗವು ಜಾರಿತ್ತು.
ಮಾಡಿದ ಪೂಜೆಗೆ ಕಿಂಚಿತ್ತು ಫಲಪದವಿಯ ಕೆ
ಭವಹೇತುಗಳ ಮಾಡುವನಯ್ಯಾ.
ಇಷ್ಟಲಿಂಗದಲ್ಲಿ ನೈಷ್ಠೆ ನಟ್ಟು ಬಿಟ್ಟು ತ್ರಿವಿಧವ ಪ
ಹಿಡಿಯದೆ
ವಿರಕ್ತನಾದನಯ್ಯಾ ಗುರು ಚೆನ್ನಮಲ್ಲಿಕಾರ್ಜುನ

ಅಕ್ಕ ಮಹಾದೇವಿ ಈ ವಚನದ ಮೂಲಕ
ಲೀಲೆಯನ್ನು ಅರಿತುಕೊಳ್ಳಲು ಸೂಚಿಸುತ್ತಾಳೆ.

ಷಟ್‌ಸ್ಥಲ

ಹೀಗೆ ಅಷ್ಟಾವರಣದಿಂದ ಸಂಪೂರ್ಣ ಸ
ಹೊಂದಿದ ಮನಸ್ಸು ಷಟ್‌ಸ್ಥಲಗಳೆಂಬ ಮಾನಸಿಕ ವಿಕ
ಸ್ಥಲಗಳ ಕಡೆಗೆ ಹೊರಳುತ್ತದೆ. ಇದುವೇ ಲಿಂಗ
ಧರ್ಮದ ವ್ಯಕ್ತಿತ್ವ ವಿಕಸನ ವ್ಯವಸ್ಥೆ. ನರಜನ್ಮದಿಂದ ಹರಜ
ಒಯ್ಯುವ ಪರಿ ಇದು. ಅಂದರೆ ಮಾನವ
ವಿಶ್ವಮಾನವನಾಗುತ್ತ ಶಿವಸ್ವರೂಪಿಯಾಗುವ ಕ್ರಮ.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮ
ಐಕ್ಯ ಎಂಬ ಷಟ್‌ಸ್ಥಲಗಳಲ್ಲದೆ ನಿರವಯಸ್ಥಲವೆಂಬ ಸಪ್ತ
ಬಗ್ಗೆಯೂ ಬಸವಣ್ಣನವರು ಹೇಳುತ್ತಾರೆ. ಮೂಲ
ಶೂನ್ಯದಿಂದ ಬಂದದ್ದು ಕೊನೆಯಲ್ಲಿ ಶೂನ್ಯವನ್ನೇ ಸೇರುವ
ಸಂಬಂಧಿಸಿದಂತೆ ಸಪ್ತಸ್ಥಲವಾದ ನಿರವಯ ಸ್ಥಲ
ಬಸವಣ್ಣನವರು ಈ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

"ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ
ನಿರವಯಸ್ಥಲವನೆಯ್ದುವೆನಯ್ಯಾ
ಕೂಡಲಸಂಗಮದೇವಾ."

ಅಲ್ಲಮಪ್ರಭುಗಳು ಷಟ್‌ಸ್ಥಲಗಳ ಹೀಗೆ ವಿವರಿಸ

"ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊ
ನೈಷ್ಠೆಯಿಂದ ಮಹೇಶ್ವರನಾಗಿ,
ಆ ನೈಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯ
ಆ ಸಾವಧಾನದೊಳಗಣ ಸ್ವಾನುಭವದಿ

ವ್ಯಾಘ್ರನ ಕರೆ 7

ದರ್ಬಾರಿಯಿಂದ ಉಗಿಸಿಕೊಂಡಿದ್ದು!

ಇಂಗ್ಲಿಷ್ ಮೂಲ: ಆರ್ಥರ್ ಪೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ

ನಮ್ಮ ವಿಜಯೋತ್ಸವದ ಗುಂಪಿನಲ್ಲಿ ನನ್ನ ಹಳೆಯ ...ತ ಜಿರ್ರೋ ಕೂಡ ಇದ್ದಿದ್ದನ್ನು ನೋಡಿ ನನಗೆ ಆಶ್ಚರ್ಯ ...ಯಿತು. ಏಳು ಮೈಲು ನಡೆದು ಬಂದಿದ್ದ ಆವನು ...ಯ ಹುಲಿಯೊಂದು ಅವರ ಹಳ್ಳಿಯ ಸುತ್ತ ಮತ್ತೆ ...ದಿರುವ ಸಮಾಚಾರ ತಿಳಿಸಿದ. ಈ ಸುದ್ದಿಯನ್ನು ...ಗತಿಸಿದ ದರ್ಬಾರಿ ಮತ್ತು ಶಕ್ಕು ಈ ಹುಲಿ ಹಿಂದೊಮ್ಮೆ ...ಿಯ ಎಮ್ಮೆಯ ಬಳಿ ಗಾಯಗೊಂಡಿದ್ದು, ಆಗಿನಿಂದ ...ು ಬಲಿ ಎಮ್ಮೆಯನ್ನು ಮುಟ್ಟುತ್ತಲೂ ಇಲ್ಲವೆಂದು ...ಳಿದರು. ಮರುದಿನ ಬೆಳಗ್ಗೆ ನಾವು ಒಂದು ದಿನಕ್ಕೆ ...ಕಾದ ಸಾಮಗ್ರಿಗಳೊಂದಿಗೆ ಹುಲಿಯ ಬಗೆಗೆ ವಿಷಯ ...ಗ್ರಹಿಸಲು ಹೊರಟೆವು.

ನಮ್ಮ ಅದೃಷ್ಟ ಚೆನ್ನಾಗಿತ್ತು. ಒಂದೆರಡು ಗಂಟೆಗಳ ...್ನಡಿಗೆಯ ನಂತರ ಭಾರೀ ಹುಲಿಯೊಂದರ ಹೆಜ್ಜೆಗುರುತು ... ಕಂಡುಬಂದವು. ಅದು ಒಳಹೊಕ್ಕಿದ್ದ ಕಾಡು ಸೋವುಗೆ ...ಡಿ ಹುಲಿಯನ್ನು ಬೇಟೆಯಾಡಲು ಪ್ರಶಸ್ತವಾದ ಸ್ಥಳವೆಂದು ...ರಿಗಳು ತಿಳಿಸಿದರು. ನಾನು ಹಂದಿಯೊಂದನ್ನು ಬಲಿ ...ಗಿ ಕಟ್ಟುವ ಸೂಚನೆ ನೀಡಿದೆ. ಹುಲಿಗಳಿಗೆ ಹಂದಿಯ ...ಂಸ ಪ್ರಿಯವಾದರೂ ಅದು ಒಂದೇ ಸುತ್ತಿನಲ್ಲಿ ಅದನ್ನು ...ದು ಮುಗಿಸುತ್ತದೆ. ಹಾಗಾಗಿ ನಾನು ಬಲಿಯನ್ನು ಕಟ್ಟಿದಾ ...ಂದ ಕಾಯಬೇಕಾಗುತ್ತದೆ ಎಂದು ದರ್ಬಾರಿ ಅಭಿಪ್ರಾಯ ...ಿ. ಕೆಲವೊಮ್ಮೆ ಮತ್ತೆ ಇದೇ ದಾರಿಯಲ್ಲಿ ಹಲವಾರು ...ಿಗಳು ಬರದೇ ಹೋಗಬಹುದು. ಹಾಗಾಗಿ ದೊಡ್ಡ ...ಣಿಯೊಂದನ್ನು ಕಟ್ಟುವುದು ಸೂಕ್ತ ಎನ್ನುವುದು ನಮ್ಮ ...ರಿಗಳ ಸಲಹೆಯಾಗಿತ್ತು. ವಾಸ್ತವದ ವಿಚಾರವೆಂದರೆ ...ನಿಗೂ ಪ್ರಿಯವಾದ ಹಂದಿಮಾಂಸಕ್ಕಾಗಿ ನಾವು ಹಣ ...ಳುಮಾಡುವುದು ಅವನಿಗೆ ಇಷ್ಟವಿರಲಿಲ್ಲ!

ಧಾರ್ಮಿಕ ಕಾರಣಗಳಿಗಾಗಿ ಎತ್ತನ್ನು ಬಲಿಪಶುವಾಗಿ ...ಸುವುದಕ್ಕೆ ವಿರೋಧವಿತ್ತು. ಹಾಗಾಗಿ ಶಿಕಾರಿಗಳು ...ರಿಗೆ ಹೋಗಿ ಯಾವುದಾದರೂ ಪ್ರಾಣಿಗಾಗಿ ಹುಡುಕು ...ವೆ ಎಂದಾಗ ನಾನು ಒಪ್ಪಿದೆ. ಎರಡು ಗಂಟೆಗಳ ನಂತರ ...ಖವೆಲ್ಲಾ ನಗುವನ್ನು ತುಂಬಿಕೊಂಡು ಅವರು ತಂದದ್ದೇನು ...ತ್ತೇ? ಮೂಳೆ ಚಕ್ಕಳವಾಗಿದ್ದ ಒಂದು ಮುದಿ ಕತ್ತೆಯನ್ನು! ...ಗೌರವವಿರುವ ಯಾವುದೇ ಹುಲಿ ಇದನ್ನು ಮುಟ್ಟು ...ದು ಸಾಧ್ಯವೇ ಇಲ್ಲ ಎಂದು ನಾನು ಶಿಕಾರಿಗಳಿಗೆ ...ಸಿದೆ. ಅದನ್ನು ಒಪ್ಪದ ಅವರು ಹುಲಿ ಇದನ್ನು ಬಾಯಿ ...ರಿಸಿ ತಿನ್ನುತ್ತದೆ ಎಂದು ಸಮರ್ಥಿಸಿಕೊಂಡರು! ಈ ...ಳೆಯ ಚೀಲಕ್ಕೆ ಕೊಡಬೇಕಾದ ಬೆಲೆ ನನ್ನನ್ನು ದಂಗು ...ಿಸಿತು.

ಬಲಿಪಶುಗಳನ್ನು ಉಪಯೋಗಿಸಿ ಬೇಟೆಯಾಡುವುದು ...್ಯಾಯವೆಂದು ನನಗೆ ಯಾವಾಗಲೂ ಅನ್ನಿಸುತ್ತಿತ್ತು. ...ಾಯ್ತಿನಿಂದಲೂ ಇದು ಒಪ್ಪಿತವಾದ ಬೇಟೆಯ ವಿಧಾನ ...ಿದ್ದರೂ ನಾನು ಇದನ್ನು ದ್ವೇಷಿಸುತ್ತಿದ್ದೆ. ನಾನು ಮೊದಲ ...ರಿಗೆ ಮೇಕೆಯೊಂದನ್ನು ಬಲಿಪಶುವಾಗಿ ಉಪಯೋಗಿಸಿ ...ಗ ಅದರ ಕರುಣಾಜನಕ ಕೂಗನ್ನು ಕೇಳಿ ಮರದಿಂದ ...ದು ಅದರ ಕಟ್ಟನ್ನು ಬಿಚ್ಚಿಕೊಂಡು ಊರಿಗೆ ಕರೆತಂದಿದ್ದೆ. ...ಗ ಈ ಮುದಿಕತ್ತೆಯನ್ನು ಬಲಿಕಂಬಕ್ಕೆ ಕಟ್ಟಬೇಕಾಗಿತ್ತು!

ಹುಲಿಗಳಿಗೆ ಸಿಂಹಗಳಂತೆ ವಾಸನಾಶಕ್ತಿ ಇರುವುದಿಲ್ಲ, ಅವು ಶಬ್ದ ಮತ್ತು ದೃಷ್ಟಿಯ ಆಧಾರದ ಮೇಲೆ ಬೇಟೆಯಾಡುತ್ತವೆ. ಹಾಗಾಗಿ ಸತ್ತ ಪ್ರಾಣಿಯ ವಾಸನೆಯ ಮೂಲಕ ಹುಲಿಗಳನ್ನು ಆಕರ್ಷಿಸುವುದು ಅಸಾಧ್ಯ. ಅದು ಕೊಲ್ಲಬಹುದಾದ ಸಾವಿರಾರು ಪ್ರಾಣಿಗಳನ್ನು ಉಳಿಸುವ ದೃಷ್ಟಿಯಿಂದ ಒಂದನ್ನು ಬಲಿಕೊಡುವುದು ತಪ್ಪಲ್ಲ ಎಂದೂ ಕೆಲವರು ವಾದಿಸುತ್ತಿದ್ದರು. ಹಾಗಿದ್ದರೂ ನನಗೆ ಅದು ಸಮ್ಮತವಾಗುತ್ತಿರಲಿಲ್ಲ.

ಮರುದಿನ ಬೆಳಗ್ಗೆ ಮುದಿಕತ್ತೆಯನ್ನು ಹುಲಿಯೊಂದು ಎಳೆದುಕೊಂಡು ಹೋಗಿದೆಯೆಂಬ ಸಮಾಚಾರ ಬಂದಿತು. ನಾವು ತ್ವರಿತವಾಗಿ ಆ ಸ್ಥಳವನ್ನು ತಲುಪಿದೆವು. ಹುಲಿ ಕತ್ತೆಯನ್ನು ಎಳೆದುಕೊಂಡ ಹೋದ ಜಾಡಿನಲ್ಲಿ ನಾವು ಮುಂದೆ ಹೋದೆವು. ಮೊದಲ 300 ಅಡಿಗಳಷ್ಟು ದೂರ



ಒಂದು ಒಣಗಿದ ಹಳ್ಳದ ಪಾತ್ರದಲ್ಲಿ ಹೋಗಿದ್ದ ಅದು ಅಲ್ಲಿಂದ ಕಡಿದಾದ ಹಳ್ಳದ ದಂಡೆಯನ್ನು ಏರಿ ಎತ್ತರದ ಹುಲ್ಲುಗಳ ಮಧ್ಯೆ ನುಸುಳಿಕೊಂಡಿತ್ತು. ಸ್ವಲ್ಪ ದೂರ ಹುಲ್ಲಿನಲ್ಲಿ ನಾನು ಮುಂದುವರೆಯುತ್ತಿದ್ದಂತೆ ನನ್ನ ಧೈರ್ಯ ಉಡುಗಿತು. ಮರದ ತುದಿಯಲ್ಲಿ ಕುಳಿತಿದ್ದ ಕೋತಿಗಳು 'ಹುಲಿ ಹುಲಿ ಎಚ್ಚರ!' ಎಂದು ಕಿರುಚುತ್ತಿದ್ದವು: ಹತ್ತಿರದಲ್ಲೆಲ್ಲೋ ಇರುವ ಮುದಿಹುಲಿ. ನಾವು ಮುಂದುವರೆದಿದ್ದರೆ ಆಕ್ರಮಣ ಮಾಡಬಹುದಿತ್ತು, ಆದರೆ ನಾವು ಸುಮ್ಮನೆ ಹಿಂತಿರುಗಿದ್ದರೆ ಹುಲಿ ನಮ್ಮ ಕೈತಪ್ಪಿ ಹೋಗುತ್ತಿತ್ತು. ಹಾಗಾಗಿ ಸೋವುಗೆ ಮಾಡಿ ಬೇಟೆಯಾಡುವುದೊಂದೇ ಉಳಿದ ದಾರಿಯಾಗಿತ್ತು. ಆದರೆ ಅವತ್ತು ಸಂತೆಯ ದಿನವಾದ್ದರಿಂದ ಅಟ್ಟಾಳುಗಳು ಸಂಜೆ ನಾಲ್ಕು ಗಂಟೆಯವರೆಗೆ ಸಿಗಲಿಲ್ಲ. ನಾಲ್ಕು ಗಂಟೆಗೆ ಸುಮಾರು ನೂರು ಜನ ಬಂದು ಸೇರಿದರು. ಅದರಲ್ಲಿ ಅರ್ಧದಷ್ಟು ಜನರನ್ನು ತಡೆಗೋಡೆಯಾಗಿ ಬಳಸಿ ಉಳಿದವರನ್ನು ಸೋವುಗೆ ಕೆಲಸಕ್ಕೆ ಹಚ್ಚಿದೆವು. ನಾವು ಬಲಿಯನ್ನು ಕಟ್ಟಿದ್ದ ಸ್ಥಳವನ್ನು V ಆಕಾರದ ಕೆಳತುದಿಯಾಗಿಟ್ಟುಕೊಂಡು ಅಲ್ಲಿ ನನಗಾಗಿ ಮಚಾನನ್ನು ಕಟ್ಟಲಾಗಿತ್ತು. ಅದೇ ಸ್ಥಳದಿಂದ ತಡೆಯುವ ಜನರನ್ನು ಎರಡು ಸಾಲಿನಲ್ಲಿ ಮರದ ಮೇಲೆ ಕೂರಿಸಿದೆವು. ಅಟ್ಟಾಳುಗಳು ಆಕೃತಿಯ ಮುಖದಿಂದ ಹುಲಿಯನ್ನು ತಳ್ಳುತ್ತಾ ತುದಿಯಲ್ಲಿದ್ದ ನನ್ನ ಕಡೆ ಬರಬೇಕಾಗಿತ್ತು. ಪ್ರಥಮ ಬಾರಿಗೆ ಇಂತಹ ವ್ಯವಸ್ಥೆಯನ್ನು ನೋಡುತ್ತಿದ್ದ ನನಗೆ ಇದು ಬಹಳ ಕುತೂಹಲಕರವಾಗಿತ್ತು.

ನನ್ನ ಮಚಾನು ನೆಲದಿಂದ ಕೇವಲ 7 ಅಡಿ ಎತ್ತರದಲ್ಲಿದ್ದು ಕೋಪಗೊಂಡಿರುವ ಹುಲಿಯ ಕೈಯಳತೆಯಲ್ಲಿತ್ತು. ಆದರೆ ಬದಲಾಯಿಸುವ ಸಮಯವಿಲ್ಲದಿದ್ದರಿಂದ ನಾನು ಅಲ್ಲಿ ಕುಳಿತುಕೊಂಡೆ. ಕೂಡಲೆ ಚಿರತೆಯೊಂದು ನನ್ನ ಹಿಂದಿನ ಬೆಟ್ಟದಿಂದ ಎರಡು ಮೂರು ಬಾರಿ ಘರ್ಜಿಸಿತು. ನಂತರದ ಮೌನವನ್ನು ಭೇದಿಸಿ ಸೋವುಗೆ ಪ್ರಾರಂಭಿಸುವ ದರ್ಬಾರಿಯ ಸೂಚನೆ ಮೊಳಗಿತು. ಕೂಡಲೆ ಪ್ರಾರಂಭವಾದ ಅಟ್ಟಾಳುಗಳ ಕೂಗಾಟ ಕಾಡನ್ನೇ ನಡುಗಿಸುವಂತಿತ್ತು. ಅವರಿನ್ನೂ ಕೆಲವೇ ಕೂಗು ಹಾಕುವಷ್ಟರಲ್ಲಿ ನನ್ನ ಬಲಗಡೆ ಟಪ್‌ಟಪ್ ಎನ್ನುವ ಶಬ್ದ ಕೇಳಿಸಿತು. ಕೆಲವೇ ಕ್ಷಣಗಳಲ್ಲಿ ನನ್ನ ಎದುರಿಗೆ ಸುಮಾರು 100 ಅಡಿ ದೂರದಲ್ಲಿ ಒಂದು ಸಣ್ಣ ದಿಬ್ಬದ ಮೇಲೆ ದೈತ್ಯ ಹುಲಿಯೊಂದು ಚುರುಕಾಗಿ ನಡೆದುಬರುತ್ತಿತ್ತು. ಸೋವುಗೆ ಬೇಟೆಯಲ್ಲಿ ವನ್ಯಮೃಗ ಮಚಾನನ್ನು ದಾಟಿದ ಮೇಲೆ ಮಾತ್ರ ಗುಂಡು ಹಾರಿಸಬೇಕೆಂಬ ಅನುಭವಿಗಳ ಮಾತನ್ನು ಕಡೆಗಣಿಸಿ ನಾನು ಹುಲಿ ಸುಮಾರು 60 ಅಡಿಗಳಷ್ಟು ದೂರವಿದ್ದಾಗ ಆತುರದಿಂದ ಅದರ ಭುಜಕ್ಕೆ ಗುರಿಯಿಟ್ಟು ಬಂದೂಕನ್ನು ಚಲಾಯಿಸಿದೆ. ತಕ್ಷಣ ಮರೆಯಾದ ಹುಲಿ ಮರುಕ್ಷಣದಲ್ಲಿ ನನ್ನ ಇರುವಿಕೆ ತಿಳಿಯದೆ ನನ್ನ ಕಡೆಯೇ ಬರುತ್ತಿತ್ತು. ನನ್ನ ಹಳೆಯ ಬಂದೂಕನ್ನು ಮತ್ತೆ ಲೋಡ್ ಮಾಡಲಾಗದೆ ನಾನು ಅಸಹಾಯಕನಾದೆ. ನನ್ನಿಂದ ಕೇವಲ 15 ಅಡಿ ದೂರದಲ್ಲಿದ್ದ ಅದು ರೋಷಾವೇಶದಿಂದ ತನ್ನ ಶತ್ರುವನ್ನು ಹುಡುಕುತ್ತಿತ್ತು. ಅದೃಷ್ಟವಶಾತ್ ನಾನು ಅದರ ಕಣ್ಣಿಗೆ ಬೀಳಲಿಲ್ಲ. ನನ್ನ ಬಳಿ ಇನ್ನೊಂದು ಸಣ್ಣ ಪಿಸ್ತೂಲು ಇದ್ದರೂ ಅದನ್ನು ಎತ್ತಿಕೊಳ್ಳಲು ನಾನು ಸ್ವಲ್ಪವೇ ಸದ್ದು ಮಾಡಿದ್ದರೂ ಹುಲಿ ನನ್ನ ಮೇಲೆ ಆಕ್ರಮಣ ಮಾಡುತ್ತಿತ್ತು. ನನ್ನೆದುರು ಅದು ನಿಂತಿದ್ದ ಕೆಲವೇ ಕ್ಷಣಗಳು ನನಗೆ ಯುಗವಾಗಿ ಕಾಣುತ್ತಿತ್ತು. ಆಗ ನನ್ನ ಎಡಗಡೆ ಇದ್ದ ಒಬ್ಬ ತಡೆಯಾಳು ಭಯದಿಂದ ಮರದಲ್ಲಿ ಇನ್ನೂ ಮೇಲೇರಲು ಶುರುಮಾಡಿದ. ಈ ಚಲನೆಯನ್ನು ಗಮನಿಸಿದ ಹುಲಿ ನಡುಗುವ ಕೈಗಳಿಂದ ನಿರುಪಯುಕ್ತ ಬಂದೂಕನ್ನು ಹಿಡಿದುಕೊಂಡಿದ್ದ ನನ್ನನ್ನು ಬಿಟ್ಟು ಆ ಮರದ ಕಡೆ ದೌಡಾಯಿಸಿತು. ಮುಂದೆ ಅದರ ರೌದ್ರಾವತಾರದ ಪೂರ್ಣ ದರ್ಶನವಾಯಿತು. ಕೋಪದಿಂದ ಘರ್ಜಿಸುತ್ತಾ ಮರದ ಕಡೆ ನುಗ್ಗಿದ ಅದು ಮರವನ್ನು ಏರಲಾರದೆ ಅದೇ ಕೋಪದಲ್ಲಿ ಅಟ್ಟಾಳುಗಳು ಸೋವುಗೆ ಮಾಡಿಕೊಂಡ ಬರುತ್ತಿದ್ದ ದಿಕ್ಕಿನಲ್ಲೇ ಕಾಡಿನಲ್ಲಿ ಓಡಿ ಹೋಯಿತು! ನಾನು ಶ್ವಾಸಕೋಶಗಳು ಹರಿಯುವಷ್ಟು ಜೋರಾಗಿ ಕೂಗಿ ಅಟ್ಟಾಳುಗಳನ್ನು ಎಚ್ಚರಿಸತೊಡಗಿದೆ. ನನ್ನ ಅದೃಷ್ಟಕ್ಕೆ ಅವರೆಲ್ಲಾ ಮರವನ್ನೇರಿದ್ದರು.

ಅಲ್ಲಿಗೆ ಬಂದ ದರ್ಬಾರಿಯ ಅನುಭವಿ ಕಣ್ಣುಗಳು ಹುಲಿ ನನ್ನ ಕಡೆ ಬಂದ ದಾರಿಯನ್ನು ಸ್ಪಷ್ಟವಾಗಿ ಗುರುತಿಸಿದವು. ಮತ್ತೆ ಲೋಡ್ ಮಾಡಲಾಗದಂತಹ ಹಳೆಯ ಬಂದೂಕನ್ನು ಬಳಸುತ್ತಿರುವುದು ಮೂರ್ಖತನವೆಂದು ಮತ್ತು ಇದರಿಂದಾಗಿ ನನ್ನ ಜೀವವನ್ನು ಅಪಾಯಕ್ಕೆ ಒಡ್ಡಿಕೊಂಡಿದ್ದೇನೆಂದು ಸರಳ ಭಾಷೆಯಲ್ಲಿ ಅವನು ನನ್ನನ್ನು ತೆಗಳಿದ. ಕಾಡಿನ ಶಿಕಾರಿಯೊಬ್ಬ ಈ ರೀತಿ ನನಗೆ ಬೈದಿದ್ದು ಜೀವನದಲ್ಲಿ ಪ್ರಥಮ ಬಾರಿಯಾಗಿತ್ತು. ಆದರೆ ಅವನು ಹೇಳಿದ ಮಾತುಗಳು ಅಕ್ಷರಶಃ ಸತ್ಯವಾಗಿತ್ತು. ಇದೇ ಬಂದೂಕಿನಿಂದ ನಾನು ಹಿಂದೆ ಅನುಭವಿಸಿದ ವೈಫಲ್ಯಗಳು ನೆನಪಾದವು. ಮಿಲಿಟರಿಯಲ್ಲಿ ಗುರಿಕಾರನಾಗಿ ನನಗಿದ್ದ ಪ್ರಸಿದ್ಧಿಯನ್ನು ನೆನಪಿಸಿಕೊಂಡು ಈ ಬಂದೂಕನ್ನು ಇನ್ನೆಂದೂ ಬಳಸಬಾರದೆಂದು ನಿರ್ಧರಿಸಿದೆ. ಹುಲಿ ಗಾಯಗೊಂಡಿದೆಯೇ ಇಲ್ಲವೆ ಎನ್ನುವ ಬಗೆಗೆ ಅಟ್ಟಾಳುಗಳಲ್ಲಿ ಒಮ್ಮತವಿರಲಿಲ್ಲ. ಅವರನ್ನು ಊರಿಗೆ ಕಳಿಸಿ ನಾವು ರಕ್ತದ ಗುರುತಿಗಾಗಿ ಹುಡುಕಿ ನಿರಾಶರಾದೆವು. ಹುಲಿ ಅಪಾಯದಿಂದ ಪಾರಾಗಿತ್ತು. ಆಗಲೇ ಕತ್ತಲಾಗುತ್ತಿದ್ದುದರಿಂದ ನಾವು ಊರಿಗೆ ಹಿಂತಿರುಗಿದೆವು.

ಮರುದಿನ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಊರಿನವರಿಗಾಗಿ ಒಂದು ಸಂತೋಷ ಸಂಜೆಯನ್ನು ಏರ್ಪಡಿಸಿದ್ದೆ. ಭಾರೀ ಪ್ರಮಾಣದಲ್ಲಿ ಸೇಂದಿ ಮತ್ತು ಪಟಾಕಿಯನ್ನು ತರಿಸಿದೆ. ಆದರೆ ಮಧ್ಯಾಹ್ನದ ಟೀ ಕುಡಿಯುತ್ತಿರುವಾಗ ಹುಲಿಯೊಂದು ಕಾಡೆಮ್ಮೆಯನ್ನು ಕೊಂದ ಒಳ್ಳೆಯ ಸಮಾಚಾರ ದೊರಕಿತು. ನಾನು ತಕ್ಷಣ ಆ ಹಳ್ಳಿಗೆ ಹೋದೆ. ಹುಲಿ ಕೊಂದು ಹಾಕಿದ್ದ ಕಾಡೆಮ್ಮೆಯ ಮರಿಯ ಶವವನ್ನು ಒಬ್ಬ ಗುಡ್ಡಗಾಡು ಮಹಿಳೆ ನೋಡಿದ್ದಳು. ಅವಳು ಎಲ್ಲಾ ವಿವರಗಳನ್ನು ನೀಡಿದ್ದಲ್ಲದೆ ತಾನೇ ಬಂದು ಶವವನ್ನು ತೋರಿಸುವುದಾಗಿ ಹೇಳಿದಳು. ಕೇವಲ ನಾಲ್ಕು ಅಡಿ ಎತ್ತರವಿದ್ದ ಅವಳ ಹಿಂದೆ ದೈತ್ಯಾಕಾರದ ನಾನು ನಡೆಯುತ್ತಿದ್ದೆ! ಕಾಡನ್ನು ಪ್ರವೇಶಿಸುವ ಮುನ್ನ ಅವಳು ತನ್ನ ಲಂಗವನ್ನು ಚಡ್ಡಿಯಂತೆ ಎತ್ತಿಕಟ್ಟಿಕೊಂಡು ತಲೆಯ ಮೇಲಿನ ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಂಡಳು. ದಟ್ಟ ಕಾಡಿನಲ್ಲಿ ಬೆಕ್ಕಿನ ಹೆಜ್ಜೆಗಳನ್ನಿಡುತ್ತಾ ದಾರಿಯನ್ನು ಹುಡುಕಿಕೊಂಡು ಅವಳು ನೇರವಾಗಿ ಶವವನ್ನು ನೋಡಿದ್ದ ಸ್ಥಳಕ್ಕೆ ನನ್ನನ್ನು ಕರೆದುಕೊಂಡ ಹೋದ ರೀತಿ ನನಗೆ ಕಾಡಿನ ಬಗೆಗೆ ಕಣ್ಣು ತೆರೆಸುವಂತಿತ್ತು.

ಅಲ್ಲಿಗೆ ಹೋಗುತ್ತಿದ್ದಂತೆ ನಮಗೆ ಒಂದು ದೊಡ್ಡ ಗುಟುರು ಹಾಕುವ ಶಬ್ದ ಕೇಳಿ ನಾವು ಸುಧಾರಿಸಿಕೊಳ್ಳುವ ಮೊದಲೇ ಕಾಡೆಮ್ಮೆಯೊಂದು ಓಡಿಹೋಗುತ್ತಿರುವುದು ಕಾಣಿಸಿತು. ಸತ್ತು ಹೋಗಿರುವ ಕರುವಿನ ತಾಯಿಯಾದ ಇದು ಶವದ ಬಳಿ ಕಾವಲು ಕಾಯುತ್ತಿತ್ತು. ಆದರೆ ಶವ ಮಾತ್ರ ಮೊದಲಿದ್ದ ಜಾಗದಲ್ಲಿ ಇರಲೇ ಇಲ್ಲ. ಹತ್ತು ಅಡಿ ದೂರದ ಮರದ ರೆಂಬೆಗಳ ಮಧ್ಯೆ ಸಿಕ್ಕಿಕೊಂಡು ನೇತಾಡುತ್ತಿರುವ ಶವವನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಅದೊಂದು ಎಳೆಯ ಕರುವಾಗಿತ್ತು. ಆಗಲೇ ಕತ್ತಲಾಗುತ್ತಿದ್ದುದರಿಂದ ಆ ಮಹಿಳೆ ಮನೆಗೆ ಹೋಗಲು ಒಪ್ಪಿಗೆ ಕೇಳಿದಳು. ಅವಳಿಗೆ ಧನ್ಯವಾದ ಹೇಳಿದ ನಾನು ಅವಳ ಕೈಯಲ್ಲಿ ಕೆಲವು ಬೆಳ್ಳಿಯ ನಾಣ್ಯಗಳನ್ನಿಟ್ಟೆ. ಬಾಗಿ ನನಗೆ ವಂದಿಸಿ ದಟ್ಟ ಕಾಡಿನಲ್ಲಿ ಏಕಾಕಿಯಾಗಿ ಅವಳು ಊರಿನ ಕಡೆ ಓಡಿಹೋದಳು. ಅವಳ ರಕ್ಷಣೆಗಾಗಿ ಒಬ್ಬ ಪುರುಷನನ್ನು ಜೊತೆಯಾಗಿ ಕಳಿಸುವುದು ಕಾಡಿನ ಜನಗಳ ರೀತಿನೀತಿಗಳಿಗೆ ಸಂಪೂರ್ಣ ವಿರುದ್ಧವಾಗುತ್ತಿತ್ತು.

(ಮುಂದುವರೆಯುವುದು)

ಪ್ರಾಣಲಿಂಗಿಯಾಗಿ,
ಆ ಸ್ವಾನುಭಾವದೊಳಗಣ ಅರಿವಿನಿಂದ ಶರಣನಾಗಿ,
ಆ ಅರಿವು ನಿಜದಲ್ಲಿ ಸಮರಸಭಾವವನೈದಿ ನಿರ್ಭಾವ
ಪದದೊಳು ನಿಂದ ಭೇದವೇ
ಐಕ್ಯಸ್ಥಲ ಕಾಣಾ ಗುಹೇಶ್ವರಾ."

ಮಾನವರು ಶಿವಸ್ವರೂಪಿಯಾಗುವಂಥ ವ್ಯಕ್ತಿತ್ವ ವಿಕಸನದ ...ರೂಪವನ್ನು ಅಲ್ಲಮಪ್ರಭುಗಳು ಈ ವಚನದಲ್ಲಿ ...ಸಿಸಿದ್ದಾರೆ.

ಪಂಚಾಚಾರ

ಮಾನವರು ಶಿವಸ್ವರೂಪಿಗಳಾದ ಮೇಲೆ ವ್ಯಕ್ತಿತ್ವ ...ಸದ ಅಂತಿಮ ಘಟ್ಟವನ್ನು ತಲುಪಿದಂತಾಗಲಿಲ್ಲ, ...ವೆ ಲಿಂಗಾಯತ ಧರ್ಮದ ವೈಶಿಷ್ಟ್ಯವಾಗಿದೆ. ಆತ ...ಪೂರ್ಣನಾಗುವುದು ಕಾಯಕ, ಪ್ರಸಾದ ಮತ್ತು ...ಸೋಹ ಪ್ರಜ್ಞೆಯನ್ನು ಕ್ರಿಯೆಗೆ ಇಳಿಸುವ ಮೂಲಕ ...ಚ ಆಚಾರಗಳನ್ನು ಪಾಲಿಸಿದಾಗ ಮಾತ್ರ. ಇಷ್ಟಲಿಂಗದ ...ಲಕ ಏಕದೇವೋಪಾಸನೆ ಮಾಡುವುದು ಲಿಂಗಾಚಾರ. ...ಸತ್ಯ ಕಾಯಕದಿಂದ ಬಂದುದನ್ನು ದೇವರು ಕೊಟ್ಟ ...ಸಾದವೆಂದು ಸ್ವೀಕರಿಸಿ ಜ್ಞಾನಕ್ಕೆ, ಧರ್ಮಕ್ಕೆ ಮತ್ತು ಸಮಾಜಕ್ಕೆ ಕೂಡ ವಿನಿಯೋಗಿಸುವುದು ಸದಾಚಾರ. ಜಾತ್ಯತೀತನಾಗಿ ಬದುಕುವುದೇ ಶಿವಾಚಾರ. ಧರ್ಮದ ತತ್ವಗಳು ನಿಂದನೆಗೆ ಒಳಗಾಗದಂತೆ ನೋಡಿಕೊಳ್ಳುವುದೇ ಗಣಾಚಾರ. ತಾನು ಎಲ್ಲರಿಗಿಂತ ಕಿರಿಯ ಎಂದು ಭಾವಿಸುತ್ತ ಅಹಂಕಾರ ಮುಕ್ತನಾಗಿ ಸೇವಾಭಾವ ತಾಳುವುದೇ ಭೃತ್ಯಾಚಾರ. ಹೀಗೆ ಮಾನವ ಬೆಳವಣಿಗೆ ಹೊಂದುತ್ತ ಕೊನೆಯಲ್ಲಿ ಸಮಾಜಸೇವೆ ಮಾಡುವುದೇ ಲಿಂಗಾಯತ ಧರ್ಮ ಕಲಿಸುವ ಪಾಠವಾಗಿದೆ. ಈ ವಿಚಾರವನ್ನು ಚೆನ್ನಬಸವಣ್ಣನವರು ಕೆಳಗಿನ ವಚನದಲ್ಲಿ ಮನೋಜ್ಞವಾಗಿ ತಿಳಿಸಿದ್ದಾರೆ.



"ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ
ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ:
ಲಿಂಗವಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ.
ಸಜ್ಜನ ಕಾಯಕದಲ್ಲಿ ತಂದು ಗುರು ಲಿಂಗ ಜಂಗಮಕ್ಕೆ
ನೀಡಿ
ಸತ್ಯಶುದ್ಧನಾಗಿಹುದೆ ಸದಾಚಾರ.
ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ,
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ.
ಶಿವಶರಣರೆ ಹಿರಿಯರಾಗಿ ತಾನೆ
ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೆ
ಭೃತ್ಯಾಚಾರ.
ಇಂತೀ ಪಂಚಾಚಾರವುಳ್ಳ ಪರಮಸದ್ಭಕ್ತರ
ಒಕ್ಕುದನಿಕ್ಕಿ ಸಲಹಯ್ಯಾ
ಪ್ರಭುವೆ ಕೂಡಲಚೆನ್ನಸಂಗಮದೇವಾ."



ಅಜ್ಞಾನರಣದಲ್ಲಿ ಮನಸ್ಸು ಹದಗೊಂಡು ವಸ್ತುಮೋಹಕ್ಕೆ ಒಳಗಾಗದಂಥ ಸಾಮರ್ಥ್ಯ ಪಡೆಯುವುದು. ಯಾವುದೇ ವಸ್ತು ನನ್ನದಲ್ಲ ಎಂಬ ಭಾವ ಮೂಡುವುದು. ಅದೇ ಮನಸ್ಸು ಷಟ್‌ಸ್ಥಲದಲ್ಲಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವಷ್ಟು ವಿಕಸನಗೊಳ್ಳುತ್ತ ಹೋಗುವುದು. ಮುಂದೆ ಪಂಚಾಚಾರದಲ್ಲಿ ಹಿಂದಿನ ಎರಡು ಅವಸ್ಥೆಗಳಲ್ಲಿ ಪಡೆದ ಅರಿವನ್ನು ಆಚರಣೆಗೆ ಇಳಿಸುವುದು.

ಈ ಆಚರಣೆಯ ಅಂತರಾಳವೆಂದರೆ 'ನನ್ನದಲ್ಲ ಎಂದು ಭಾವಿಸುವ ವಸ್ತು ನಮ್ಮೆಲ್ಲರದು' ಎಂದು ಪರಿಗಣಿಸಿ ಲೋಕಮುಖಿಯಾಗುವುದು. ಇದುವೆ ಮಾನವರಲ್ಲಾಗುವ ದೊಡ್ಡ ಪರಿವರ್ತನೆ. ಹೀಗೆ ಶರಣರು ಸ್ವಂತಕ್ಕೆ ಏನನ್ನೂ ಬಯಸಲಿಲ್ಲ ಆದರೆ ಈ ಭೂಮಿಯ ಸಕಲ ಸಂಪತ್ತು ಸರ್ವರಿಗೂ ಸಮನಾಗಿ ಸೇರಿದ್ದು ಎಂಬುದನ್ನು ಪ್ರತಿಪಾದಿಸಿದರು. 'ಎಲ್ಲವೂ ಎಲ್ಲರಿಗಾಗಿ' ಎಂಬುದು ಬಸವದರ್ಶನವಾಗಿದೆ.

(ಮುಂದುವರೆಯುವುದು)

■ ರಂಜಾನ್ ದರ್ಗಾ

ರಾಮಲಲ್ಲಾನ (ಬಾಲರಾಮನ) ಹಾದಿಗಿದ್ದ ತಡೆಗಳು ತೆರವಾಗುತ್ತಿವೆಯೇ

EPW
ಸಂಪಾದಕೀಯ

ಕೃಪೆ: *Economic and Political Weekly*
April 1, 2017. Vol. 52. No.13

■ ಅನು: ಶಿವಸುಂದರ್

ಆದರೆ ನ್ಯಾಯ ಪ್ರಕ್ರಿಯೆಯನ್ನು ಖಾತರಿಗೊಳಿಸುವ ತನ್ನ ಪ್ರಾಥಮಿಕ ಜವಾಬ್ದಾರಿಯನ್ನು ಪೂರೈಸುವ ಬದಲಿಗೆ, ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಜೆ.ಎಸ್. ಖೇಹರ್ ಅವರು ಪ್ರಕರಣದಲ್ಲಿರುವ ಉಭಯ ಪಕ್ಷಗಳಿಗೂ ನ್ಯಾಯಾಲಯದ ಹೊರಗಡೆಯೇ ವಿವಾದವನ್ನು ಬಗೆಹರಿಸಿ ಕೊಳ್ಳಲು ಸಲಹೆ ಮಾಡಿದ್ದಾರೆ. ಅಷ್ಟು ಮಾತ್ರವಲ್ಲ, ಅಗತ್ಯ ಬಿದ್ದರೆ ಅಂಥ ಒಂದು ಸಂಧಾನ ಮಾತುಕತೆಯಲ್ಲಿ ತಾನು ಮಧ್ಯಸ್ಥಿಕೆಯನ್ನು ವಹಿಸುವುದಾಗಿಯೂ ಹೇಳಿದ್ದಾರೆ. ಉಭಯ ಪಕ್ಷಗಳೂ ಒಂದಷ್ಟನ್ನು ಬಿಟ್ಟುಕೊಡುತ್ತಾ ಒಂದಷ್ಟನ್ನು ಪಡೆದುಕೊಳ್ಳುತ್ತಾ ವಿವಾದವನ್ನು ಬಗೆಹರಿಸಿ ಕೊಳ್ಳಲು ಪ್ರಯತ್ನಿಸಿ. ಎರಡೂ ಪಕ್ಷಗಳು ನಿಯೋಜಿಸುವ ಮಧ್ಯಸ್ಥಿಕೆದಾರರ ಜೊತೆ ನಾನೂ ಇರಬೇಕೆಂದು ಎರಡೂ ಪಕ್ಷಗಳು ಬಯಸುವುದಾದಲ್ಲಿ ನಾನು ಆ ಜವಾಬ್ದಾರಿಯನ್ನು ಹೊರಲು ಮಾತ್ರ ಪರಿಗಣಿಸುತ್ತಾರೆಂದು ಎಲ್ಲರೂ ನಿರೀಕ್ಷಿಸುತ್ತಾರೆ.

ಅಲಹಾಬಾದ್ ಉಚ್ಚ ನ್ಯಾಯಾಲಯ ವಾದಿಸಿದಂತೆ ದೇವನಾದ ರಾಮ ಮಸೀದಿಯ ಮಧ್ಯ ಗುಮ್ಮಟದ ಕೆಳಗೆ ಹುಟ್ಟಿದ್ದಾನೆಂಬ ನಂಬಿಕೆ ಈ ಪ್ರಕರಣದಲ್ಲಿ ನಿಜಕ್ಕೂ ಸುಸಂಗತವೇ? ಒಂದುವೇಳೆ ಅದನ್ನು ನಿಜವೆಂದೇ ಭಾವಿಸಿದರೂ ಅದು ಆತನಿಗೆ 1528ರಷ್ಟು ಹಿಂದೆ ಕಟ್ಟಲ್ಪಟ್ಟ ಮಸೀದಿ ಜಾಗದ ಮೇಲೆ ಆಸ್ತಿ ಹಕ್ಕನ್ನು ಒದಗಿಸುವುದೇ? ದೇವಸ್ಥಾನವನ್ನು ಕೆಡವಿಹಾಕಿ ಮಸೀದಿಯನ್ನು ಕಟ್ಟಲಾಯಿತೇ? ಈ ಎಲ್ಲಾ ಸಂಗತಿಗಳನ್ನು ನಿರ್ವಿವಾದವಾಗಿ ಬಗೆಹರಿಸಬಲ್ಲ ಯಾವುದೇ ಸಾಕ್ಷಿಯಿಲ್ಲವೆಂಬ ಸಂಗತಿಯನ್ನು ಬದಿಗಿಟ್ಟು ನೋಡಿದರೂ, ಭೂಮಿಯ ಒಡೆತನವನ್ನು ಅಧಿಕಾರವನ್ನು ನಿರಾಕರಿಸಲು ಕಾಲಮಿತಿ (ಲಿಮಿಟೇಷನ್ ಆಕ್ಟ್) ಕಾಯಿದೆಯನ್ನು ಏಕೆ ಅನ್ವಯಿಸುತ್ತಿಲ್ಲ?

ಮಸೀದಿಯೊಳಗೆ ನುಗ್ಗಿ ಅದರ ಮಧ್ಯ ಗುಮ್ಮಟದ ಕೆ... ಮೂರು ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದರಿಂದ ಹಿಡಿ... 2010ರ ಸೆಪ್ಟೆಂಬರ್ 30 ರಂದು ಅಲಹಾಬಾ... ಹೈಕೋರ್ಟಿನ ಲಖನೌ ಪೀಠ ಬಾಬ್ರಿ ಮಸೀದಿಯ... ಕೆಡವಿದ ಜಾಗವನ್ನು ರಾಮಲಲ್ಲ (ಬಾಲರಾಮ)ನ ... ಕೊಡುವವರೆಗೆ ಒಂದಲ್ಲ ಒಂದು ರೀತಿಯಲ್ಲಿ ಭಾ... ಪ್ರಭುತ್ವದ ಕಾರ್ಯಾಂಗ ಮತ್ತು ಶಾಸಕಾಂಗಗಳೆರಡ... ಬಾಲರಾಮನು ಮಸೀದಿಯನ್ನು ವಶಪಡಿಸಿಕೊಳ್ಳುವು... ಪೂರಕವಾಗಿಯೇ ವರ್ತಿಸಿವೆ. ಶಾಸಕಾಂಗವಂತೂ 1993... ಅಯೋಧ್ಯೆಯ ಒಂದಷ್ಟು ಜಾಗವನ್ನು ವಶಪಡಿಸಿಕೊಳ... ಕಾಯಿದೆಯನ್ನೂ ಮಾಡಿತ್ತು. ಅಲಹಾಬಾದ್ ಹೈಕೋರ್ಟಿ... ಲಖನೌ ಪೀಠದ ರೂಪದಲ್ಲಿ ನ್ಯಾಯಾಂಗವು ... ಬಾಲರಾಮನು ಮಸೀದಿಯನ್ನು ಸ್ವಾಧೀನಪಡಿಸಿಕೊಂಡಿ...

> ಬಾಬ್ರಿ ಮಸೀದಿ-ರಾಮ ಜನ್ಮಭೂಮಿ ವಿವಾದವನ್ನು ಬಗೆಹರಿಸಲು ಸುಪ್ರೀಂಕೋರ್ಟು ನ್ಯಾಯನಿರ್ಧಾರಣೆಯ ಪ್ರಕ್ರಿಯೆಗಿಂತ ಉಭಯ ಪಕ್ಷಗಳ ನಡುವೆ ಮಾತುಕತೆ ವಿಧಾನವನ್ನು ಮುಂದಿರಿಸಿರುವುದು ಅನ್ಯಾಯಯುತ ಪರಿಣಾಮಗಳನ್ನು ಉಂಟುಮಾಡಲಿದೆ.





ಅಲಹಾಬಾದ್ ಹೈಕೋರ್ಟಿನ ಲಖನೌ ಪೀಠವು ಬಾಬ್ರಿ ಮಸೀದಿ-ರಾಮ ಜನ್ಮಭೂಮಿ ವಿವಾದದಲ್ಲಿ 2010ರ ಸೆಪ್ಟೆಂಬರ್ 30ರಂದು ಕೊಟ್ಟ ತೀರ್ಪು ಸಾರಾಂಶದಲ್ಲಿ ಹಿಂದೂ ಮೂಲಭೂತವಾದಿಗಳ ನಂಬುಗೆಗಳನ್ನೇ ವಾಸ್ತವ ಸತ್ಯವೆಂದು ಒಪ್ಪಿಕೊಂಡುಬಿಟ್ಟಿತ್ತು. ಲಿಬರ್ಹಾನ್ ಆಯೋಗದ ಅಧಿಕೃತ ವಿಚಾರಣೆಯ ಪ್ರಕಾರ, ಈ ನಂಬುಗೆಯನ್ನು ಒಂದು ಧಾರ್ಮಿಕ ವಿಶ್ವಾಸವಾಗಿ ಕಾಪಿಟ್ಟುಕೊಂಡವರೇ 1992ರ ಡಿಸೆಂಬರ್ 6 ರಂದು, ಅತ್ಯಂತ ಜತನದಿಂದ ಮತ್ತು ಪೂರ್ವ ಯೋಜಿತ ಸಿದ್ಧತೆಯಿಂದ ಮಸೀದಿಯನ್ನು ಕೆಡವಿಹಾಕಿದ್ದವರಾಗಿದ್ದರು. ಆ ದಿನದಂದು ಬಾಬ್ರಿ ಮಸೀದಿಯನ್ನು ಕೆಡವಿಹಾಕಿರೆಂದು ಪ್ರಚೋದನಾತ್ಮಕ ಭಾಷಣ ಮಾಡಿದ ಭಾರತೀಯ ಜನತಾ ಪಕ್ಷ ಮತ್ತು ಆರೆಸ್ಸೆಸ್‌ಗೆ ಸಂಬಂಧಪಟ್ಟ ಇತರ ಸಂಘಟನೆಗಳ ಅತ್ಯುನ್ನತ ನಾಯಕರ ನಂಬುಗೆಯೂ ಇದೇ ಆಗಿತ್ತು. ಆದರೆ ಯಾವುದೇ ಧರ್ಮದವರಾಗಿದ್ದರೂ ಅಥವಾ ನಾಸ್ತಿಕರೇ ಆಗಿದ್ದರೂ, ಈ ದೇಶದ ನಾಗರಿಕರೇ ಆಗಿರುವ ನಾವು, ಆ ನಾಗರಿಕತ್ವವು ಕೊಡಮಾಡುವ ಹಕ್ಕುಗಳನ್ನು ಪ್ರಭುತ್ವವು ಖಾತರಿಗೊಳಿಸಬೇಕೆಂದು ಬಯಸುತ್ತಾ, ಈ ದೇಶದ ಸುಪ್ರೀಂಕೋರ್ಟು ಈ ಪ್ರಕರಣದಲ್ಲಿ ಸಂವಿಧಾನವನ್ನು ಮತ್ತು ಕಾನೂನನ್ನು ಚಾಚೂತಪ್ಪದಂತೆ ಎತ್ತಿಹಿಡಿಯುತ್ತದೆಂದು ನಿರೀಕ್ಷಿಸಿದ್ದೆವು.

ಸಿದ್ಧವಾಗಿದ್ದೇನೆ ಎಂದು ನ್ಯಾಯಮೂರ್ತಿ ಖೇಹರ್ ಹೇಳಿದರೆಂದು ವರದಿಯಾಗಿದೆ. ಅವರ ದೃಷ್ಟಿಯಲ್ಲಿ ಈ ವಿವಾದವು ಧರ್ಮ ಮತ್ತು ಭಾವನೆಗಳಿಗೆ ಸಂಬಂಧಪಟ್ಟ ವಿಷಯವಾಗಿದೆ. ಆದ್ದರಿಂದ ನಿಮ್ಮಗಳ ನಡುವೆ ನೀವು ವಿವಾದವನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗದಿದ್ದರೆ ಮಾತ್ರ ನ್ಯಾಯಾಲಯದ ಮಧ್ಯಪ್ರವೇಶವಾಗಬೇಕೆಂಬುದು ಅವರ ನಿಲುವಾಗಿದೆ.

ಈ ವಿವಾದದಲ್ಲಿ ಒಂದು ಪಕ್ಷದವರಿಗೆ, ಕೇಂದ್ರದಲ್ಲಿ ಮತ್ತು ನಾಶಗೊಂಡ ಬಾಬ್ರಿ ಮಸೀದಿ ಜಾಗವಿರುವ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿರುವ ಹಿಂದೂತ್ವವಾದಿಗಳು ಬೆಂಬಲಕ್ಕಿದ್ದಾರೆ. ಹೀಗಿರುವಾಗ ಅಸಮಾನ ಬಲರ ನಡುವೆ ನಡೆಯುವ ಸಂಧಾನ ಮಾತುಕತೆಯು ನ್ಯಾಯೋಚಿತವಾಗಿ ವಿವಾದವನ್ನು ಬಗೆಹರಿಸುತ್ತದೆಂದು ಯೋಚಿಸುವುದಾದರೂ ಹೇಗೆ ಸಾಧ್ಯ? ನಿರ್ದಿಷ್ಟವಾಗಿ ಇಂಥ ಪ್ರಕರಣಗಳಲ್ಲೇ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಂಥವರು ಉಭಯಪಕ್ಷಗಳ ಹಿಂದಿರುವ ಸಾಪೇಕ್ಷ ರಾಜಕೀಯ ಬಲಾಬಲಗಳನ್ನು ಕಿಂಚಿತ್ತೂ ಗಣನೆಗೆ ತೆಗೆದುಕೊಳ್ಳದೆ, ನ್ಯಾಯದಾನಕ್ಕೆ ಕೇವಲ ಸಾಕ್ಷಿಗಳನ್ನೂ, ಪ್ರಕರಣಕ್ಕೆ ಸಂಬಂಧಪಟ್ಟ ಸತ್ಯಸಂಗತಿಗಳನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಕಾನೂನುಗಳ ಸರಿಯಾದ ವ್ಯಾಖ್ಯಾನವನ್ನು

ಬಿಜೆಪಿಯ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ರಾಮಮಂದಿರ ನಿರ್ಮಾಣ ಮಾಡುವ ಸಲುವಾಗಿ ಒಂದು ಕೇಂದ್ರೀಯ ಕಾಯಿದೆಯನ್ನೇ ಜಾರಿ ಮಾಡಲು ಪ್ರಧಾನಿ ನರೇಂದ್ರ ಮೋದಿಯವರ ಉದ್ದೇಶವಾಗಿದೆ. ಅದಕ್ಕೆ ಅವರು ರಾಜ್ಯಸಭೆಯಲ್ಲೂ ಬಹುಮತ ಪಡೆಯಲು ಕಾಯುತ್ತಿರುವುದು ನಿಚ್ಚಳವಾಗಿದೆ. ಆದರೆ ಅದಕ್ಕೆ ಮೊದಲು ಅವರು ಈ ವಿವಾದದಿಂದ ನ್ಯಾಯಾಂಗವನ್ನು ಹೊರಗಟ್ಟಬೇಕಿದೆ. ಪ್ರಾಯಶಃ ಇದೇ ಕಾರಣಕ್ಕೆ ಈವರೆಗೆ ಈ ವಿವಾದದಲ್ಲಿ ಯಾವತ್ತಿಗೂ ತಲೆಹಾಕದ (ಆರೆಸ್ಸೆಸ್ ಮತ್ತು ಬಿಜೆಪಿಯ) ಸುಬ್ರಹ್ಮಣ್ಯ ಸ್ವಾಮಿಯವರಿಗೆ ದಿಢೀರನೆ ಈ ವಿವಾದದಲ್ಲಿ ಪ್ರವೇಶಿಸಿ ಬಾಬ್ರಿ ಮಸೀದಿ ಉರುಳಿದ ಸ್ಥಳದಲ್ಲಿ ರಾಮ ಮಂದಿರ ಕಟ್ಟಲು ಅನುಮತಿ ನೀಡಬೇಕೆಂದು ಸುಪ್ರೀಂ ಕೋರ್ಟಿನ ಪೀಠದ ಮುಂದೆ ಅರ್ಜಿ ಹಾಕಲು ಅವಕಾಶ ಕೊಟ್ಟಿರಬಹುದೇ? ಇಲ್ಲದಿದ್ದರೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಯವರು ಸುಬ್ರಹ್ಮಣ್ಯಸ್ವಾಮಿ ಯವರಿಗೆ ಅನಗತ್ಯವಾಗಿ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟದ್ದನ್ನು ಬೇರೆ ಹೇಗೆ ಅರ್ಥೈಸಲು ಸಾಧ್ಯ?

1949ರ ಡಿಸೆಂಬರ್ 22-23ರ ಮಧ್ಯರಾತ್ರಿ ಮೂವರು ವ್ಯಕ್ತಿಗಳ ನೇತೃತ್ವದಲ್ಲಿ ಅಂದಾಜು 50 ಜನರು

ಕಾನೂನು ಸಮ್ಮತಿಯ ಮುದ್ರೆಯನ್ನೊತ್ತಿದೆ. ಈಗ ದೇ... ಸರ್ವೋಚ್ಚ ನ್ಯಾಯಾಲಯವು ಸಹ ಪ್ರಕರಣದ ಸತ್ಯಾಸ... ಗಳನ್ನು, ಸಂಗತಿಗಳನ್ನು, ಪುರಾವೆಗಳನ್ನು ಪರಿಶೀಲಿಸು... ಬದಲು, ಸಂಬಂಧಪಟ್ಟ ಕಾನೂನುಗಳನ್ನು ಸರಿಯ... ವ್ಯಾಖ್ಯಾನಿಸಿ ಅವುಗಳನ್ನು ಎತ್ತಿಹಿಡಿಯುವ ಬದ... ಅಸಮಾನ ಬಲಾಬಲಗಳನ್ನು ಹೊಂದಿರುವ ಪಕ್ಷಗ... ನ್ಯಾಯಾಲಯದ ಹೊರಗೆ ಸಂಧಾನದ ಮಾತುಕತೆ... ಮೂಲಕ ವಿವಾದ ಬಗೆಹರಿಸಿಕೊಳ್ಳಲು ಸಲಹೆ ಮಾಡಿ...

ಬಾಬ್ರಿ ಮಸೀದಿಯ ಅವಶೇಷಗಳ ಮೇಲೆ ಬಾ... ರಾಮನ ದೇವಸ್ಥಾನ ಮುಂದೊಂದು ದಿನ ಕಟ್ಟಿಯೂ... ಬಹುದು. ಹಾಗಾದಾಗ ಅದು ಭಾರತದ ಧರ್ಮನಿರಪೇಕ್ಷತೆ... ತತ್ವವನ್ನು ಬಲಿ ತೆಗೆದುಕೊಂಡಿರುತ್ತದೆ. ಏಕೆಂದರೆ ಆಗ ಭಾರ... ಪ್ರಭುತ್ವವು ತನ್ನ ಅಸ್ತಿತ್ವಕ್ಕೆ ಧಾರ್ಮಿಕ ನಂಬುಗೆ ಮ... ನಿರ್ದಿಷ್ಟವಾಗಿ ಬಾಲರಾಮನೆಂಬ ದೈವ ದಿಂದ ಮಾನ್ಯತೆಯ... ಪಡೆದುಕೊಂಡಿರುತ್ತದೆ. ಆಗ ಪ್ರಜಾತಂತ್ರದ ಅವಶೇಷ... ಮೇಲೆ ರಾಮ ಮಂದಿರವನ್ನು ಕಟ್ಟಿದಂತಾಗುತ್ತದೆ. ... ಅಲ್ಲಿ ಪ್ರಜಾತಂತ್ರ ಬಲಿಯಾಗಿರುತ್ತದೆ. ಏಕೆಂದರೆ ಪ್ರಜಾತಂತ್ರ... ಉಳಿವಿಗೆ ಧರ್ಮ ನಿರಪೇಕ್ಷತೆಯು ಯಾವಾಗಲೂ ಒಂ... ಪೂರ್ವಶರತ್ತಾಗಿರುತ್ತದೆ. ■

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ

■ ಕಿಷನ್‌ರಾಜ್ 7

ಮರಳಿ ಮಣ್ಣಿಗೆ ದಾರಿ ರಮ್ಯವಲ್ಲ

'ಇಂಗ್ಲಿಷಲ್ಲಿ 'ಇನ್‌ಫ್ಯಾಂಟೆ ಟೆರಿಬಲೇ' ಎನ್ನುವುದನ್ನು ಚಿಕ್ಕ ವಯಸ್ಸಿನಲ್ಲೇ ವಿಲಕ್ಷಣ ದೈತ್ಯ ಪ್ರತಿಭೆ ಪ್ರಕಟಿಸಿ, ಸಾಧಾರಣ ಜಗತ್ತಿಗೆ ಇರುಸುಮುರುಸು ಉಂಟು ಮಾಡುವವರಿಗೆ ಉಪಯೋಗಿಸುತ್ತಾರೆ. ಗ್ಸೇವಿಯರ್ ಡೋಲಾನ್ (28) ಅಂಥವನು. ತನ್ನ 20ನೇ ವಯಸ್ಸಿನಲ್ಲಿಯೇ 'ಐ ಕಿಲ್ಡ್ ಮೈ ಮದರ್' ಎಂಬ ಸಿನಿಮಾ ಮಾಡಿ ಕ್ಯಾನ್ಸ್ ಅಂತಾರಾಷ್ಟ್ರೀಯ ಸಿನಿಮೋತ್ಸವದ ಗಮನ ಸೆಳೆದವನು. ಇದುವರೆವಿಗೂ 6 ಕಥಾಚಿತ್ರಗಳನ್ನು ನಿರ್ದೇಶಿಸಿರುವ ಡೋಲಾನ್, ಪ್ರಸ್ತುತ ಸಿನಿಮಾಕ್ಕಾಗಿ 2016 ಕ್ಯಾನ್ಸ್ ಉತ್ಸವದಲ್ಲಿ ತುಂಬು ಚರ್ಚೆಗೂ ಒಳಗಾಗಿದ್ದಾನೆ ಮತ್ತೂ ಅಲ್ಲಿನ ಎರಡನೇ ಅತ್ಯುತ್ತಮ ಪ್ರಶಸ್ತಿಯಾದ ಗ್ರಾಂಡ್ ಪ್ರಿಕ್ಸ್ ಪ್ರಶಸ್ತಿ ಗಳಿಸಿದ್ದಾನೆ. ಅವನ ಈ ಸಿನಿಮಾ ಕೆನ್ ಲೋಚನ 'ಐ ಡೇನಿಯಲ್ ಬ್ಲೇಕ್' ಹಾಗು ಬ್ರಲಿಯಂಟೆ ಮೆಂಡೋಜ್ಸನ 'ಮಾರೋಸ್' ಜತೆ ಅತ್ಯುತ್ತಮ ಸಾಧನೆ 'ಪಾಲ್ಮೆಡೇ ಓರ್' ಪ್ರಶಸ್ತಿಯ ಆಯ್ಕೆ ಪಟ್ಟಿಯಲ್ಲಿತ್ತು ಎನ್ನುವುದೇ ಗ್ಸೇವಿಯರನ ಪ್ರತಿಭೆಯನ್ನು ಸಾರುತ್ತದೆ.


ಸಿನಿಮಾದ ಕಥಾ ಸಾರಾಂಶ

34ರ ವಯಸ್ಸಿನ ಲೂಯಿಸ್ ಲೌಕಿಕ ಜಗತ್ತಿನಲ್ಲಿ ತನ್ನ ನಾಟಕ ರಚನೆಗಳ ಮೂಲಕ ಖ್ಯಾತಿ ಗಳಿಸಿರುವವನು. ತನ್ನ 22 ವಯಸ್ಸಿನಲ್ಲಿ ತನ್ನ ಸಂಸಾರವನ್ನು ತೊರೆದು ತನ್ನದೇ ಸ್ವತಂತ್ರ ಲೋಕ ಬದುಕು ಕಟ್ಟಿಕೊಳ್ಳಲು ಹೋದವನು. ಇದೀಗ ಮಾರಣಾಂತಿಕ ಕಾಯಿಲೆಗೆ ತುತ್ತಾಗಿ ತನ್ನ ಬದುಕಿನ ಕೊನೆಯ ದಿನಗಳನ್ನು ಎಣಿಸುತ್ತಿದ್ದಾನೆ. ತನ್ನ ಸಂಸಾರಕ್ಕೆ ಮರಳಿ, ತಾಯಿ ಮಾರ್ಟಿನೆ, ಅಣ್ಣ ಅಂಟೋಣಿ, ತಂಗಿ ಸುಜಾನೆ, ಅತ್ತಿಗೆ ಕ್ಯಾಥರೀನರ ಬಿಸಿ ಪ್ರೀತಿಯಲ್ಲಿ ತನ್ನ ಸಾವಿನ ದಿನ ಪ್ರಕಟಿಸಿ, ಕಡೆಗಾಲಕ್ಕೆ ಆಧಾರವಾಗುವ ಸಂಸಾರ ಪ್ರೀತಿಯನ್ನು ಮರಳಿ ಪಡೆಯುವ ಆಶಯದಲ್ಲಿ ಮನೆಗೆ ಮರಳಿದ್ದಾನೆ.

ಅವನು ಮನೆ ತೊರೆದಾಗ ನಾಲ್ಕು ವರ್ಷದ ಕೂಸಾಗಿದ್ದ ತಂಗಿ ಸುಜಾನೆ ಈಗ ... ಯುವತಿಯಾಗಿದ್ದಾಳೆ-ಅವಳಿಗೆ ಅಣ್ಣನ ವ್ಯಕ್ತಿತ್ವದ ಪರಿಚಯವಿಲ್ಲ, ಆದರೂ ಅವನಿಂದ ಒಂದಷ್ಟು ಭಾವುಕ ಆಸರೆಯ ನಿರೀಕ್ಷೆ ಇದೆ. ಅಣ್ಣ ಅಂಟೋನಿಗೆ ಸರಿಕಟ್ಟಾದ ಕೆಲಸವಿರದೇ, ಸಂಸಾರದ ಹೊಣೆ ಹೆಗಲೇರಿದೆ-ಲೂಯಿಸ್ ಇದರಿಂದ ತಪ್ಪಿಸಿಕೊಂಡ ಬಗ್ಗೆ ಅಗಾಧ ಸಿಟ್ಟಿದೆ. ಅತ್ತಿಗೆ ಕ್ಯಾಥರಿನ್‌ಗೆ ಇವನ ಪರಿಚಯವೇ ಇಲ್ಲ-ಆದರೂ ಸದ್ಯದ ಸಂಸಾರದ ಪರಿಸ್ಥಿತಿಯಲ್ಲಿ ಲೂಯಿಸನ ಪ್ರವೇಶದ ಮೂಲಕ ಒಂದಷ್ಟು ಸಮಾಧಾನದ ವಾತಾವರಣ ಏರ್ಪಡುವುದು ಎಂಬ ಆಸೆ ಇದೆ. ಇವರೆಲ್ಲರಿಗಿಂತ ಹೆಚ್ಚು ಗೋಜಲಿನ ಭಾವದಲ್ಲಿರುವವಳು ತಾಯಿ ಮಾರ್ಟಿನಿ-ಗಂಡನ ನಿಧನದ ನಂತರ, ಸಂಸಾರದ ಲೌಕಿಕ-ಭಾವನಾತ್ಮಕ ವಲಯವನ್ನು ದೊಡ್ಡ ಬಾಯಿಯ ಗಡಸಿನಲ್ಲಿ ನಿಭಾಯಿಸಿದವಳಿಗೆ ಲೂಯಿಸನ ದಿಢೀರ್ ಮರು ಪ್ರವೇಶದ ಬಗ್ಗೆ ಕರುಣೆ-ವಾತ್ಸಲ್ಯ-ವ್ಯಂಗ್ಯಾತ್ಮಕ ಸಿಟ್ಟು ಸಹಿತವಾದ ಮಿಶ್ರಿತ ಭಾವವಿದೆ; ಅದನ್ನು ನುಂಗಿ ತಾಯಿಯ ವಾತ್ಸಲ್ಯದಲ್ಲಿ ಅವನನ್ನು ಎದುರುಗೊಂಡು, ಲೂಯಿಸನನ್ನು ಸಂಸಾರದ ಭಾವ ಪ್ರಪಂಚದಲ್ಲಿ ಹೊಂದಿಸುವ ವಿಚಿತ್ರ ಪಾತ್ರದ ಹೊಣೆ ಅವಳ ಮೇಲಿದೆ.

ಲೂಯಿಸನ ಸಾವಿನ ನಿರೀಕ್ಷೆಯ ಭಾವಪ್ರೀತಿಯ ಆಸರೆಯ ಪಯಣವು 12 ವರ್ಷಗಳ ಅವನ ಅನುಪಸ್ಥಿತಿಯ ಸಂಸಾರದಲ್ಲಿ ಅವನ ಬಗ್ಗೆ ಉಂಟಾಗಿರುವ






ಭಾವಸಂಘರ್ಷಗಳನ್ನು ಊಹಿಸಿರುವುದಿಲ್ಲ. ಮನೆಯಲ್ಲಿ ಅವನು ಕಳೆಯು... ಒಂದು ದಿನ, ಸಂಸಾರಿಕ ಭಾವ ಸಂಘರ್ಷಗಳ ವೇದಿಕೆಯಾಗಿ ಬಿಡುತ್ತದೆ.

ಈ ಸಿನಿಮಾ ಯಾಕೆ ಮುಖ್ಯ

ಈ ಸಿನಿಮಾವು ಲಗಾಯ್ತಿನ 'ಮರಳಿ ಮಣ್ಣಿಗೆ' ಬರುವವರ ರಮ... ಆಶಯಗಳನ್ನು ಒಡೆಯುತ್ತದೆ. 'ಇರುವ' ಲೋಕದ ಇಕ್ಕಟ್ಟನ್ನು ಮೀ... ಹೊಸದೊಂದು 'ಆಗುವ' ಅಸ್ತಿತ್ವ ಸ್ಥಿತಿಗೆ ಹೋದವರು, ವರ್ಷಾಂತರಗ... ನಂತರ ತಮ್ಮ ಹೊಸ ಅಸ್ತಿತ್ವದ ಬಿಕ್ಕಟ್ಟಿಗೆ ಸಾಂತ್ವನ ಪಡೆಯಲು ಹಿಂ... 'ಇದ್ದ' ಲೋಕಕ್ಕೆ ಮರಳುವುದು ಕವಿಸಮಯ! ಅಲ್ಲಿ ಮರಳುವವರು, 'ಇ... ಲೋಕವು ತಾವು ತೊರೆದಾಗ ಹೇಗಿರುತ್ತದೋ ಹಾಗೆ 'ಇದ್ದು' ತಮ್ಮ... ರಮ್ಯ ಪ್ರೀತಿಯಲ್ಲಿ ರಮಿಸುತ್ತದೆ ಎಂದು ಭಾವಿಸುತ್ತಾರೆ. ಮಧ್ಯಂತರ ಕಾಲಘಟ್ಟದ... 'ಇದ್ದ' ಲೋಕದ ಜೀವಿಗಳೂ ಮರಳುವವರಂತೆ ಬದಲಾಗಿರಬಹುದು ಎಂ... ಅರಿವು ಮರಳುವವರಿಗೆ ಇಲ್ಲದಿದ್ದರೆ ಅದು ಯಾರ ಸಮಸ್ಯೆ? ಎನ್ನುವುದನ... ಗ್ಸೇವಿಯರ್ ನಿರ್ಭಾವುಕವಾಗಿ ಸಾಂಸಾರಿಕ ಅಸ್ತಿತ್ವ ಬಿಕ್ಕಟ್ಟಿನ ಗಳಿಗೆ ಸೃಷ್ಟಿ... ಭಾವನೆಗಳ ಸಂಘರ್ಷಗಳ ಮೂಲಕ ಪ್ರೇಕ್ಷಕರ ಮುಂದಿಡುತ್ತಾನೆ. ಲೂಯಿ... ಸಲಿಂಗ ಕಾಮಿ; ಅವನ ಆ ಬದುಕಿನ ಅಸ್ತಿತ್ವಕ್ಕೆ ಸಾಂಪ್ರದಾಯಿಕ ಕ್ಯುಬೆಕ... ಕೆನಾಡದ ಸಣ್ಣ ಊರಲ್ಲಿ ಸ್ವತಂತ್ರವಿಲ್ಲವೆಂಬ ಅರಿವಿನಿಂದಲೇ ಅವನು ಮ... ತ್ಯಜಿಸಿ ತನ್ನ ಸ್ವತಂತ್ರ ಅಸ್ತಿತ್ವಕ್ಕೆ ತಕ್ಕುದಾದೆಡೆ ಹೋಗುತ್ತಾನೆ; ಸರಿ. ಆದರ... ಜೀವನದಂಚಿನಲ್ಲಿದ್ದೇನೆ ಎಂಬ ಕಾರಣ ಹೊತ್ತು, ಸ್ವತಂತ್ರ ಬದುಕಿನ ಅಸ್ಮಿತೆಯ... ಜೊತೆ ಮರಳಿ ಮಣ್ಣಿಗೆ ಬಂದಾಗ, ಮಣ್ಣಿನ ಗುಣ ತಾನು ತೊರೆದ...




ಈ ಹೊತ್ತು ಗೋಬೆಲ್ಸ್ ಶೈಲಿಯ ಪ್ರಚಾರದ ಸುನಾಮಿಯೊಂದು ಭಾರತದ ಮೂಲೆಮೂಲೆಗೂ ಅಪ್ಪಳಿಸುತ್ತಾ ಅಮಾಯಕ ಜನರನ್ನು ಆಪೋಶನ ತೆಗೆದುಕೊಳ್ಳುತ್ತಿದೆ. ಮೋದಿ ಸರ್ಕಾರದ ಅಧಿಕೃತ ಮತ್ತು ಸಂಘ ಪರಿವಾರದ ಸಾಂಪ್ರದಾಯಿಕ ಪ್ರಚಾರಯಂತ್ರ ಎರಡೂ ಸೇರಿಕೊಂಡು ಮೋದಿಯನ್ನು ಓರ್ವ ಅವತಾರಪುರುಷ, ರಾಷ್ಟ್ರರಕ್ಷಕ, ಬಡವರ ಬಂಧು ಎಂದು ಬಿಂಬಿಸುವ ಕೆಲಸದಲ್ಲಿ ತೊಡಗಿದ್ದು ಆ ನಿಟ್ಟಿನಲ್ಲಿ ಅಪ್ಪಟ ಸುಳ್ಳು ಸುದ್ದಿಗಳನ್ನು, ಉತ್ಪ್ರೇಕ್ಷಿತ ವರದಿಗಳನ್ನು ವ್ಯವಸ್ಥಿತವಾಗಿ ಹಬ್ಬಿಸಲಾಗುತ್ತಿದೆ. ನಮ್ಮ ಶತ್ರುಗಳಿಗೆ ಸರಿಯಾದ ಪಾಠ ಕಲಿಸಬಲ್ಲ, ಭಯೋತ್ಪಾದಕರನ್ನು ನಾಮಾವಶೇಷ ಮಾಡಬಲ್ಲ, ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಬಲ್ಲ ಏಕೈಕ ಸೂಪರ್‌ಮ್ಯಾನ್ ಯಾರಾದರೂ ಇದ್ದರೆ ಅದು ಕೇವಲ ಮೋದಿ ಎಂದು ಪದೇಪದೇ ಪುನರುಚ್ಚರಿಸಲಾಗುತ್ತಿದೆ. ಇದರ ಮೇಲುಸ್ತುವಾರಿಯ ಜವಾಬ್ದಾರಿಯನ್ನು 2014ರ ಚುನಾವಣಾ ಪ್ರಚಾರತಂತ್ರ ರೂಪಿಸಿದ ಅದೇ ಆಪ್ಕೋ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆಗೆ ವಹಿಸಲಾಗಿದ್ದರೆ ಅದರಲ್ಲೇನೂ ಸೋಜಿಗವಿಲ್ಲ. ಇವರೆಲ್ಲರು ಬಳಸುವ ಪ್ರಚಾರತಂತ್ರಗಳಲ್ಲಿ ಪ್ರಮುಖವಾದುದು ಇತಿಹಾಸವನ್ನು ತಮಗೆ ಬೇಕಾದಂತೆ ತಿರುಚಿ ಕಾಲ್ಪನಿಕ ಕಥೆಗಳನ್ನು ಸೃಷ್ಟಿಸುವುದಾಗಿದೆ. ಇಂತಹ ಕಟ್ಟುಕಥೆಗಳು ಓರ್ವ ಬಿಳಿತೊಗಲಿನವನ ಬಾಯಿಂದ ಬಂದರೆ ನಮ್ಮಲ್ಲಿ ಹೆಚ್ಚಿನವರು ಅದನ್ನು ಶಂಖದಿಂದ ಬಂದ ತೀರ್ಥವೆಂಬಂತೆ ಸ್ವೀಕರಿಸುತ್ತಾರೆ ಎಂಬುದನ್ನು ಚೆನ್ನಾಗಿ ಅರಿತಿರುವ ಇವರು ಈಗ ಅಂತಹದೇ ಮತ್ತೊಂದು ಪ್ರಯತ್ನಕ್ಕೆ ಕೈಹಾಕಿದ್ದಾರೆ. ಆದರೆ ಇಂತಹ ಬೃಹತ್ ಪ್ರಮಾಣದ ಪ್ರಚಾರದ ಸಂದರ್ಭದಲ್ಲಿ ಕೆಲವೊಮ್ಮೆ ಅತ್ಯಂತ ಹಾಸ್ಯಾಸ್ಪದ ವಿಚಾರಗಳೂ ನುಸುಳಬಲ್ಲವು ಮತ್ತು ನೈತಿಕತೆ, ತಟಸ್ಥ ನೀತಿಗಳಿಗೆ ತಿಲಾಂಜಲಿಯಿತ್ತು ಸ್ತುತಿಪಾಠಕರಾಗಿರುವ, ಲಾಭವೊಂದನ್ನು ಬಿಟ್ಟು ಮಿಕ್ಕೆಲ್ಲವೂ ಅಮುಖ್ಯ ಎಂದಾಗಿರುವ ಕೆಲವೊಂದು ಮಾಧ್ಯಮಗಳು

ಮೋದಿಭಕ್ತಿಯಲ್ಲಿ ಮೈಮರೆತವರ ಅಪಲಾಪಗಳು

ಅದೆಷ್ಟು ಕೀಳು ಮಟ್ಟಕ್ಕೆ ಇಳಿಯಬಲ್ಲವು ಎಂಬುದನ್ನು ನಿಚ್ಚಳವಾಗಿ ತೋರಿಸುವ ಆ ಘಟನೆಯ ವಿವರಗಳು ಇಲ್ಲಿವೆ.

ಮಾರ್ಚ್ 28ರಂದು 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆಯ ಜಾಲತಾಣದಲ್ಲಿ 'ನೊಸ್ತ್ರದಾಮಸ್ ಮತ್ತು ಭಾರತ' ಎಂಬ ತಲೆಬರಹದ ಒಂದು ಲೇಖನ ಪ್ರಕಟವಾಗಿದೆ. ಅದನ್ನು ಬರೆದ ಫ್ರಾಂಸ್ವಾ ಗೋತಿಯೆ ಎಂಬಾತ ಫ್ರಾನ್ಸ್ ದೇಶದ ಒಬ್ಬ ಪ್ರಜೆ. 2012ರಲ್ಲಿ ತನಗೆ ನೊಸ್ತ್ರದಾಮಸ್‌ನ ಕೆಲವು ಬಚ್ಚಿಟ್ಟ ಪುರಾತನ ಹಸ್ತಪ್ರತಿಗಳು ಲಭ್ಯವಾಗಿದ್ದು ಅದರಲ್ಲಿ ಭಾರತದಲ್ಲಿ ಮುಂದೆ ಸಂಭವಿಸಲಿರುವ ಘಟನೆಗಳ ಬಗ್ಗೆ ಭವಿಷ್ಯವಾಣಿ ನುಡಿಯಲಾಗಿದೆ ಎಂದು ಗೋತಿಯೆ ತನ್ನ ಈ ಲೇಖನದಲ್ಲಿ ಹೇಳಿಕೊಳ್ಳುತ್ತಾನೆ. ಈತ ಹೇಳುವಂತೆ 2012ರಲ್ಲಿ ಪುರಾತನ ಸಾಮಗ್ರಿಗಳ ಅಂಗಡಿಯೊಂದಕ್ಕೆ ಭೇಟಿಯಿತ್ತ ಬಂಪ್ರೆಲ್ ದ ಲಾ ರೋಷ್‌ಫುಕೊ ಎಂಬಾತ 200 ಯೂರೊ ತೆತ್ತು ಅಲ್ಲಿಂದ ಹಳೆಯ ಟ್ರಂಕ್ ಒಂದನ್ನು ಖರೀದಿಸಿದ್ದ. ಫ್ರಾನ್ಸ್‌ನ ಓರ್ವ ವಿದ್ವಾಂಸನಾದ ಈ ಬಂಪ್ರೆಲ್, ನೊಸ್ತ್ರದಾಮಸ್ ವಿಷಯತಜ್ಞನೂ ಆಗಿದ್ದಾನೆ. ಆ ಟ್ರಂಕ್‌ನೊಳಗೆ ಸಿಕ್ಕಂಥ ಪ್ರಾಚೀನ ಹಸ್ತಪ್ರತಿಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಅವು 15ನೆ ಶತಮಾನಕ್ಕೆ ಸೇರಿರುವುದಾಗಿ ತಿಳಿದುಬಂದಿದೆ. ಅದರಲ್ಲಿ ಭಾರತದ ಕುರಿತು ಹಲವಾರು ಶ್ಲೋಕಗಳಿವೆ. ಅವುಗಳಲ್ಲಿ ಭಾರತವನ್ನು ಕೆಲವು ಕಡೆ ಇಂಡೆಸ್ ಎಂದು ಫ್ರೆಂಚ್ ಭಾಷೆಯಲ್ಲಿಯೂ ಹಲವು ಕಡೆ ಇಂಡಿಕಸ್ ಎಂದು ಲ್ಯಾಟಿನ್‌ನಲ್ಲಿಯೂ ಕರೆಯಲಾಗಿದೆ. ಇವುಗಳಲ್ಲೊಂದು ಶ್ಲೋಕ ಭಾರತ, ಪಾಕಿಸ್ತಾನಗಳ ಮಧ್ಯೆ ಪರಮಾಣು ಯುದ್ಧ ನಡೆಯುವ ಸಾಧ್ಯತೆಗಳ ಕುರಿತು ತಿಳಿಸುತ್ತದೆ ಎನ್ನುವ ಗೋತಿಯೆ ನೊಸ್ತ್ರದಾಮಸ್‌ನ ಆ ಶ್ಲೋಕವನ್ನು ಉಲ್ಲೇಖಿಸುತ್ತಾನೆ:

XXIX : Le Griffon Indes se peut aprester
Pour à l'ennemy résister,
Et renforcer bien son armée,
Autrement l'Elephant viendra
Qui d'un abord le surprendra,
Six cens et huict, mer enflammée.





"ಇಂಡಿಯ ಎಂಬ ಗರುಡ ಸಜ್ಜುಗೊಳ್ಳಬೇಕು, ತನ್ನ ಸೇನೆಯನ್ನು ಬಲಪಡಿಸಬೇಕು.

ಇಲ್ಲವಾದರೆ ಪಾಕಿಸ್ತಾನ ಎಂಬ ಆನೆ ಹಠಾತ್ತನೆ ಇಂಡಿಯದ ಮೇಲೆ

ಆಕ್ರಮಣ ಮಾಡಿ ಜನರನ್ನು ಮತ್ತು ಸಾಗರವನ್ನು ದಹಿಸಲಿದೆ."

ಆದರೆ ನೊಸ್ತ್ರದಾಮಸ್‌ನ ಮೂಲಪ್ರತಿಯಲ್ಲಿ ಇಂಡೆಸ್ (ಇಂಡಿಯ) ಎಂಬ ಪದವೇ ಇಲ್ಲ! ಗೋತಿಯೆ ಮಹಾಶಯನ ಲೇಖನದಲ್ಲಿ ಮೂಲಪ್ರತಿಯನ್ನು ತಿರುಚಲಾಗಿರುವುದು ಸ್ಪಷ್ಟವಿದೆ. ಇದೇ ಲೇಖನದ ಬೇರೊಂದು ಕಡೆ ಉಲ್ಲೇಖಿಸಲಾದ ಇನ್ನೊಂದು ನೊಸ್ತ್ರದಾಮಸ್ ಶ್ಲೋಕ ಹೀಗಿದೆ:

Deux mil quatorze verra regner les Hindoos,

De ciel & terre tenir la Monarchie,

D'Asie forces nul ne verra peries,

"2014ರಿಂದ ಹಿಂದೂಗಳ ಆಳ್ವಿಕೆ ಪ್ರಾರಂಭವಾಗಲಿದೆ. ಅವರು ಸ್ವರ್ಗ, ಮರ್ತ್ಯ ಲೋಕಗಳೆರಡನ್ನೂ ಆಳಲಿರುವರು. ಏಷಿಯಾ ಖಂಡದಲ್ಲಿ ಅವರನ್ನು ವಿರೋಧಿಸುವವರು ಯಾರೂ ಇರುವುದಿಲ್ಲ."

ಇಲ್ಲಿಯೂ ಮೂಲಪ್ರತಿಯಲ್ಲಿ Hindoos ಎಂಬ ಶಬ್ದ ಇಲ್ಲ. ಮೂಲಪ್ರತಿಯಲ್ಲಿ ಇರುವ Hesperies (ಹೆಸ್ಪೆರಿ) ಎಂಬ ಶಬ್ದವನ್ನು ಅಳಿಸಿ ಅದರ ಜಾಗದಲ್ಲಿ Hindoos ಶಬ್ದವನ್ನು ಸೇರಿಸಲಾಗಿದೆ!

ಗೋತಿಯೆ ಮಹಾಶಯ ತನ್ನ ಲೇಖನದಲ್ಲಿ ಉಲ್ಲೇಖಿಸುವ ಮಗುದೊಂದು ನೊಸ್ತ್ರದಾಮಸ್ ಶ್ಲೋಕ ಮೂಲಪ್ರತಿಯಲ್ಲಿ ಎಲ್ಲೂ ಇಲ್ಲ:

Indus supremus gudjaratus status natus est

Patrus Theus boutiqus, studium bonus est

Namusprimum narendus est

"ಭಾರತದ ಸರ್ವೋಚ್ಚ ನಾಯಕ ಗುಜರಾತ್ ರಾಜ್ಯದಲ್ಲಿ ಜನಿಸಲಿದ್ದಾನೆ. ಅವನ ಅಪ್ಪ ಅಂಗಡಿಯೊಂದರಲ್ಲಿ ಚಹ ಮಾರಲಿದ್ದಾನೆ. ಅವನ ಹೆಸರಿನ ಪ್ರಥಮ ಭಾಗ ನರೇಂದಸ್ ಎಂದಿರುತ್ತದೆ."

ಆರೆಸ್ಸೆಸ್‌ನ ಆರ್ಗನೈಸರ್ ವಾರಪತ್ರಿಕೆ ಕೈಲಿ 'ಅಸಾಧ್ಯ ಭಾರತಪ್ರೇಮಿ' ಎಂದು ಬಣ್ಣಿಸಲ್ಪಟ್ಟಿರುವ ಈ ಗೋತಿಯೆ ಮಹಾಶಯ ತನ್ನ ಈ 'ಹಳೆಯ ಟ್ರಂಕ್'ಅನ್ನು ಒಂದಲ್ಲ, ಹಲವು ಬಾರಿ ಕಂಡುಹುಡುಕಿದ್ದಾನೆ! ಈತ 2014ರಲ್ಲಿ ತನ್ನ ಸ್ವಂತ ಜಾಲತಾಣದಲ್ಲಿ ಬರೆದ 'Nostradamus and 2014 elections' ಎಂಬ ಬ್ಲಾಗ್‌ನಲ್ಲಿಯೂ 2009ರ 'Nostradamus and Saffron' ಎಂಬ ಬ್ಲಾಗ್‌ನಲ್ಲಿಯೂ 'ಹಳೆಯ ಟ್ರಂಕ್" ಪತ್ತೆಯಾದ ಕಥನಗಳನ್ನು ಕಾಣಬಹುದು! 2017ರ 'ಟೈಮ್ಸ್ ಆಫ್ ಇಂಡಿಯ' ಲೇಖನ ಇದೇ ಸರಣಿಯಲ್ಲಿ ಇತ್ತೀಚಿನದು. 2014ರಲ್ಲಿ ಗೋತಿಯೆ ಹೀಗೆ ಬರೆದಿದ್ದ:

ಆಮೇಲೆ 'ನೊಸ್ತ್ರದಾಮಸ್‌ನ' ಇನ್ನೊಂದು ಭವಿಷ್ಯವಾಣಿ

"Politicus Bharatus Janatus Indicus tri pillarus est,

Vajpayum, Advanum persistum est et Narendrum Modum emergum.

Vajpayum maladum est..."

"ಬಿಜೆಪಿಯು ವಾಜಪೇಯಿ, ಅಡ್ವಾನಿ ಮತ್ತು ನರೇಂದ್ರ ಮೋದಿ ಎಂಬ ಮೂರು ಆಧಾರ ಸ್ತಂಭಗಳನ್ನು ಹೊಂದಲಿದೆ. ಅಂತಿಮವಾಗಿ ವಾಜಪೇಯಿ ಸಕ್ರಿಯರಾಗಿ ಉಳಿಯುವುದಿಲ್ಲ, ಅಡ್ವಾನಿ ಪಟ್ಟುಬಿಡದೆ ಮುಂದುವರಿಯಲಿರುವರು, ನರೇಂದ್ರ ಮೋದಿ ಹೊರಹೊಮ್ಮಲಿರುವರು."

ಅಂದಹಾಗೆ 2014ರಲ್ಲಿ ನರೇಂದ್ರ ಮೋದಿಯನ್ನು 'ನರೇಂದ್ರುಂ ಮೋದಂ' ಎಂದು ಸಂಬೋಧಿಸುವ ತಥಾಕಥಿತ ನೊಸ್ತ್ರದಾಮಸ್ 2017ರಲ್ಲಿ ಅದನ್ನು 'ನರೇಂದ್ರಸ್" ಎಂದು ಬದಲಾಯಿಸಿರುವುದು ತಮಾಷೆಯಾಗಿಲ್ಲವೆ! ಇರಲಿ. ಈಗ 2009ರ ಬ್ಲಾಗಿನಲ್ಲಿ ಏನು ಹೇಳಲಾಗಿದೆ ನೋಡೋಣ. 2009ರಲ್ಲಿಯೂ ಆತ ಮೂರು ಸ್ತಂಭಗಳ ಬಗ್ಗೆ ಬರೆಯುತ್ತಾನೆ. ಆದರೆ ಅಂದು ಮೂರು ಸ್ತಂಭಗಳಾಗಿದ್ದವರು ವಾಜಪೇಯಿ, ಅಡ್ವಾನಿ ಮತ್ತು ಮುರಳಿ ಮನೋಹರ ಜೋಶಿ! 2009ರ ಲೇಖನದಲ್ಲಿ ಉದ್ಧರಿಸಲಾದ ತಥಾಕಥಿತ ನೊಸ್ತ್ರದಾಮಸ್‌ನ ಶ್ಲೋಕ ಹೀಗಿದೆ:

ತರುವಾಯ ಇನ್ನೊಂದು ಭವಿಷ್ಯವಾಣಿ:

"Politicus Bharatus Janatus Indicus tri pillarus est,
Vajpayum, Advanum et Murlum Joshum Kashmirum drapus levus.
Vajpayum maladum est..."


"ಬಿಜೆಪಿಯು ವಾಜಪೇಯಿ, ಅಡ್ವಾನಿ ಮತ್ತು ಮುರಳಿ ಜೋಶಿ ಎಂಬ ಮೂರು ಆಧಾರಸ್ತಂಭಗಳನ್ನು ಹೊಂದಲಿದೆ. ಅಂತಿಮವಾಗಿ ವಾಜಪೇಯಿ ಸಕ್ರಿಯರಾಗಿ ಉಳಿಯುವುದಿಲ್ಲ, ಅಡ್ವಾನಿ ನಾಯಕ ಆಗಲಿರುವರು, ಕಾಶ್ಮೀರದಲ್ಲಿ ಭಾರತದ ಧ್ವಜವನ್ನು ಹಾರಿಸುವ ಮುರಳಿ ಜೋಶಿ ದ್ವಿತೀಯ ಸ್ಥಾನ ಹೊಂದಲಿರುವರು."

2009 ಮತ್ತು 2014ರ ಬ್ಲಾಗ್‌ಗಳಲ್ಲದೆ ಫ್ರಾಂಸ್ವಾ ಗೋತಿಯೆ ಬರೆದಿರುವ ಪುಸ್ತಕಗಳಲ್ಲಿಯೂ 'ಹಳೆಯ ಟ್ರಂಕ್' ದೊರೆತಿರುವ ಕುರಿತು ಪ್ರಸ್ತಾಪಿಸಲಾಗಿದೆ. 2001ರ 'A Western Journalist on India' ಮತ್ತು 2003ರ 'Rewriting Indian history' ಎಂಬ ಪುಸ್ತಕಗಳಲ್ಲಿ "ಒಂದು ತಿಂಗಳ ಹಿಂದೆ ಒಂದು ಹಳೆಯ ಟ್ರಂಕ್" ದೊರೆತ ಪ್ರಸ್ತಾಪವನ್ನು ಕಾಣಬಹುದು. ಇದಕ್ಕೂ ಹಿಂದೆ ಹೋದರೆ 1999ನೆ ಇಸವಿಯಲ್ಲಿ ಪ್ರಕಟವಾದ ಆರೆಸ್ಸೆಸ್‌ನ ವಾರಪತ್ರಿಕೆ 'ಆರ್ಗನೈಸರ್'ನ 51ನೆ ಸಂಪುಟದಲ್ಲಿ ಕೂಡಾ ಫ್ರಾಂಸ್ವಾ ಗೋತಿಯೆಗೆ "ಒಂದು ತಿಂಗಳ ಹಿಂದೆ ಒಂದು ಹಳೆಯ ಟ್ರಂಕ್" ದೊರೆತಿರುವ ಬಗ್ಗೆ ಬರೆಯಲಾಗಿದೆ! ಆ 'ಹಳೆಯ ಟ್ರಂಕ್'ನಲ್ಲಿ ಸಿಕ್ಕಿದ ಕೆಲವು ಪ್ರಾಚೀನ ಹಸ್ತಪ್ರತಿಗಳ ಪ್ರಕಾರ ಆರೆಸ್ಸೆಸ್‌ನ್ನು ಸ್ಥಾಪಿಸಿದವನು ನೊಸ್ತ್ರದಾಮಸ್ ಮತ್ತು ಅದು ಸ್ಥಾಪನೆಯಾಗಿರುವುದು 400 ವರ್ಷಗಳ ಹಿಂದೆ! ನಿಜ ಹೇಳಬೇಕೆಂದರೆ ಗೋತಿಯೆ ಮಹಾಶಯನ ಈ 'ಹಳೆ ಟ್ರಂಕ್' ಎಷ್ಟೊಂದು ಸಲ ಪತ್ತೆಯಾಗಿದೆ ಎಂದರೆ ಅದರ ಲೆಕ್ಕ ಇಡುವುದೇ ಕಷ್ಟಕರವಾಗಿಬಿಟ್ಟಿದೆ! ಈತ ಕಳೆದ 18 ವರ್ಷಗಳ ಸುದೀರ್ಘ ಅವಧಿಯಲ್ಲಿ ಅದೇ 'ಹಳೆಯ ಟ್ರಂಕ್' ಒಳಗಿಂದ ಕೆಲವಾರು ಶ್ಲೋಕಗಳನ್ನು ಹೊರತೆಗೆದು ತನಗೆ ಬೇಕಾದ ಮಾರ್ಪಾಟುಗಳನ್ನು ಮಾಡಿ ಹಿಂದೂತ್ವವಾದಿಗಳಿಗೆ ಅನುಕೂಲಕರವಾದ ಅನೇಕ ಸ್ತೋತ್ರಗೀತೆಗಳನ್ನು ಹೆಣೆದಿದ್ದಾನೆ. ವಿಶೇಷವೆಂದರೆ ಆತನ ಈ 'ಹಳೆಯ ಟ್ರಂಕ್' ಒಳಗಿಂದ ಹೊರಬೀಳುವ ಭವಿಷ್ಯವಾಣಿಗಳು ಪ್ರಸಕ್ತ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತಿರುತ್ತವೆ! ಸತ್ಯಾಂಶ ತಿಳಿದ ಬಳಿಕ 'ಟೈಮ್ಸ್ ಆಫ್ ಇಂಡಿಯ' ಈ ಬ್ಲಾಗ್‌ಅನ್ನು ತನ್ನ ಜಾಲತಾಣದಿಂದ ಅಳಿಸಿಹಾಕಿದೆ. ಆದರೆ ಅದಾಗಲೇ ಇದು ಜೀ ನ್ಯೂಸ್ ವಾಹಿನಿಯಲ್ಲಿ ಪ್ರಸಾರಗೊಂಡಿದೆ. ಮಾತ್ರವಲ್ಲ, ಇಂದಿನ ಶರವೇಗದ ಸಂವಹನ ಯುಗದಲ್ಲಿ ಫೇಸ್‌ಬುಕ್, ವಾಟ್ಸಾಪ್ ಮುಂತಾದ ವೇದಿಕೆಗಳ ಮೂಲಕವೂ ಸಾಕಷ್ಟು ವ್ಯಾಪಕ ಪ್ರಚಾರ ಪಡೆದಿರಲೇಬೇಕು ಮತ್ತು ಈಗಾಗಲೆ ಬಹಳಷ್ಟು ಮುಗ್ಧ ಜನ ಇದನ್ನು ನಿಜವೆಂದು ನಂಬಿಯೂ ಆಗಿರಬೇಕು.


■ **ಸುರೇಶ್ ಭಟ್ ಬಾಕ್ರಬೈಲ್**

(ಆಧಾರ: Alt News ನಲ್ಲಿ ಪ್ರತೀಕ್ ಸಿನ್ಹಾ ಲೇಖನ)

ಇದ್ದಂತೆ ಇರಬೇಕು ಎನ್ನುವುದು ಸಾಧುವೇ? ಲೂಯಿಸ್ ಊರು ತೊರೆವಾಗ ಕುಟುಂಬವು ಒಂದು ಬಡವಾದ ಮನೆಯಲ್ಲಿ ಇರುತ್ತದೆ; ಅವನು ತೊರೆದ ನಂತರದಲ್ಲಿ ಕಷ್ಟಪಟ್ಟು ಅನುಕೂಲಕರವಾದ ಮನೆಗೆ ಕುಟುಂಬ ಸ್ಥಳಾಂತರಗೊಂಡಿರುತ್ತದೆ; ಲೂಯಿಸ್ ಹಳೆಯ ಮನೆ ನೋಡಬೇಕು ಎಂಬ ಹಂಬಲ ವ್ಯಕ್ತಪಡಿಸಿದಾಗ ತಾಯಿ-ಅಣ್ಣಂದಿರ ಕಟು ಉತ್ತರವೂ, ಮನೆ ಬಿಡುವಾಗ ಲೋಕದ ಅರಿವಿಲ್ಲದ ತಂಗಿ ಸುಜಾನೆಯ ಪ್ರತಿಕ್ರಿಯೆಯೂ, ನಂತರ ಕುಟುಂಬ ಪ್ರವೇಶಿಸಿದ ಅತ್ತಿಗೆ ಕ್ಯಾಥರಿನ್ನಳ ತಳಮಳದ ಕಣ್ಣುಗಳ ಮೌನವೂ, ಸಿನಿಮಾದ ಕೇಂದ್ರ ಭಾವಕ್ಕೆ ಒಂದು ದೃಶ್ಯಾತ್ಮಕ ಪ್ರತಿಮೆಯಾಗಿದೆ. ಇಷ್ಟಕ್ಕೆ ಈ ಸಿನಿಮಾ ಬಹಳ ಮಹತ್ವದ್ದು ಎನ್ನಬಹುದಾದರೂ, ಗ್ಸೇವಿಯರ್ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮನ್ನು ದಂಗು ಹೊಡೆಸುತ್ತಾನೆ.



ಚಿತ್ರಕತೆ ಹಾಗು ದೃಶ್ಯಚಿತ್ರಣ ಹಾಗು ಸಂಕಲನಗಳು ಸಿನಿಮಾದ ಭಾಷೆ ಎಂದಾದರೆ, ಗ್ಸೇವಿರ್ ಸಿನಿಮಾದ ಉದ್ದಕ್ಕೂ ಲೂಯಿಸನನ್ನು ಕರುಣೆಯಿಂದ ನೋಡಿ ಎಂಬ ಪಕ್ಷಪಾತಿ ನಿಲುವು ತಳೆಯುತ್ತಾನೆ; ಈ ನಿಲುವಿನಿಂದ ಸಿನಿಮಾ ನಿರೂಪಣೆ ಮಾಡುವಾಗ ಉಳಿದ ಪಾತ್ರಗಳಿಗೆ ಉತ್ಪ್ರೇಕ್ಷಿತ ಖಳ ಸ್ಥಾನವನ್ನು ಕೊಡುವುದು ಸಹಜವಷ್ಟೇ? ಈ ಸಿನಿಮಾದ ಘನತೆ ಇರುವುದೇ ಇಲ್ಲಿ; ಲೂಯಿಸನ ಅಸ್ತಿತ್ವದ ಸ್ಥಿತಿ ಕರುಣಾಜನಕವಾಗಿದೆ, ನಾನು ಅವನ ಪರ ಎನ್ನುವ ನಿರ್ದೇಶಕ, ಅವನಿಗೆ ಎದುರಿಗಿರುವಾಗ ಪಾತ್ರಗಳ ನೈಜವಾದ ಅಸ್ತಿತ್ವ ತಳಮಳಗಳ ಪ್ರತಿಕ್ರಿಯೆಯನ್ನು ಲೂಯಿಸನ ಭಾವಕ್ಕೆ ಸಮವಾಗಿ ದಾಖಲಿಸುತ್ತಾನೆ; ಆ ಮೂಲಕ 'ಮರಳಿ ಮಣ್ಣಿಗೆ' ಎನ್ನುವುದು ಎಂಥ ದೊಡ್ಡ ಅಸ್ತಿತ್ವವಾದಿ ಸಂಘರ್ಷ ಎನ್ನುವುದನ್ನು ನಿರೂಪಿಸುತ್ತಾನೆ. ತಮ್ಮ ಜೀವನದ ಸ್ಥಿತಿಯ ಜೊತೆ ಹೋಲಿಕೆ ಮಾಡಿಕೊಂಡು ಪ್ರೇಕ್ಷಕರು ತಾಯಿ ಮಾರ್ಟಿನ, ತಂಗಿ ಸುಜಾನೆ, ಅತ್ತಿಗೆ ಕ್ಯಾಥರಿನ್ ಹಾಗು ಅಣ್ಣ ಅಂಟೋನಿಯ ಜೊತೆ ಭಾವ ಪಕ್ಷಪಾತ ತಾಳಬಹುದು-ಲಗಾಯ್ತಿನ ಜಗತ್ತಿನ ನಿರೂಪಣೆಯಲ್ಲಿ ಇದು ಸುಲಭ; ಇದೀಗ ತಾನು ವಿಲಕ್ಷಣ ಲೂಯಿಸನ ಪರವಾಗಿ ನಿಂತೂ, ಬಿಟ್ಟುಬಂದ ಲೋಕದ ತಲ್ಲಣವನ್ನು ಅರಿಯಬಹುದೇ? ಎಂಬ ದೊಡ್ಡ ಆಶಯ ವನ್ನು ತನ್ನ ಮೇಲೆ ಎಳೆದುಕೊಂಡೂ, ಎರಡು ಲೋಕಸ್ಥಿತಿಗಳ ನಡುವಿನ ಸಂಘರ್ಷವನ್ನು ನಿಷ್ಪಕ್ಷಪಾತಿಯಾಗಿ ಕಾಣುವ ಸಿನಿಮಾದ ಕಣ್ಣನ್ನು ಸೃಷ್ಟಿಸಿದ್ದಕ್ಕಾಗಿಯೇ ಈ ಸಿನಿಮಾ ಬಹು ಮುಖ್ಯ. ■



ಗೋವನ್ನು ತಿನ್ನುವ ಹುಲಿ ರಾಷ್ಟ್ರದ್ರೋಹಿ ಪ್ರಾಣಿ

ರಾಷ್ಟ್ರೀಯ ಪ್ರಾಣಿ, ರಾಷ್ಟ್ರೀಯ ಪಕ್ಷಿ, ರಾಷ್ಟ್ರೀಯ ಪುಷ್ಪ ಎಂದು ಘೋಷಿಸಿದ್ದುಗಳನ್ನು ಯಾವುದೇ ರಾಜಕೀಯ ಪಕ್ಷ ತಮ್ಮ ಚುನಾವಣೆ ಚಿಹ್ನೆಯಾಗಿ ಬಳಸುವಂತಿಲ್ಲ ಎಂಬ ಕಾನೂನು ಇದೆ. ಆದರೆ ನಮ್ಮ ರಾಷ್ಟ್ರೀಯ ಪುಷ್ಪವಾದ ಕಮಲವನ್ನು ಬಿಜೆಪಿ ಪಕ್ಷದ ಚುನಾವಣಾ ಚಿಹ್ನೆಯಾಗಿ ಕೊಡಲಾಗಿದೆ. ಇದು ನಿಯಮಕ್ಕೆ ವಿರುದ್ಧವಲ್ಲವೇ? ಅದರಂತೆ ದೇವರು ಅಥವಾ ಧರ್ಮದ ಚಿಹ್ನೆಗಳೂ ಯಾವುದೇ ರಾಜಕೀಯ ಪಕ್ಷದ ಚುನಾವಣಾ ಚಿಹ್ನೆ ಆಗಬಾರದು. ಆದರೆ ಕಮಲ ಹಿಂದೂ ಧರ್ಮದ ಚಿಹ್ನೆಯಾಗಿದೆ. ವಿಷ್ಣುವಿನ



ನಾಭಿಯಿಂದ ಕಮಲ ಹುಟ್ಟುತ್ತದೆ, ಅದರಲ್ಲಿ ಬ್ರಹ್ಮ ಹುಟ್ಟುತ್ತಾನೆ ಹಾಗೂ ಅವನು ಯಾವಾಗಲೂ ಅದೇ ಇಕ್ಕಟ್ಟಾದ ಕಮಲದ ಮೇಲೆ ಕುಳಿತು ಸೃಷ್ಟಿ ಕಾರ್ಯ ನಡೆಸುತ್ತಿರುತ್ತಾನೆ. ಅಂತೆಯೇ ಸರಸ್ವತಿಯ ವಾಹನ ಹಂಸ ವಾದರೂ ಕೆಲವೊಮ್ಮೆ ಅವಳೂ ಕಮಲದ ಮೇಲೆ ಕುಳಿತಿರುತ್ತಾಳೆ.

ಲಕ್ಷ್ಮಿಯೂ ಆದಿಶೇಷ ಎಂಬ ಹಾಸಿಗೆಯ ಮೇಲೆ ಕುಳಿತು ಸದಾ ವಿಷ್ಣುವಿನ ಕಾಲು ಒತ್ತುತ್ತಿರುತ್ತಾಳೆ. ಯುಗಯುಗದಿಂದ ಪಾಪ ಇದೆ ಭಂಗಿಯಲ್ಲಿ ಕುಳಿತು ಲಕ್ಷ್ಮಿ ವಿಷ್ಣುವಿನ ಕಾಲು ಒತ್ತುತ್ತಲೇ ಇದ್ದಾಳೆ. ಆದರೆ ಕೆಲವೊಮ್ಮೆ ಇದರಿಂದ ಬೋರಾದಾಗ ಪುರುಸೊತ್ತು ಮಾಡಿಕೊಂಡು ಲಕ್ಷ್ಮಿದೇವಿ ತನ್ನ ಭಕ್ತರಿಗೆ ಕಮಲದ ಮೇಲೆ ಕುಳಿತು ದರ್ಶನ ಕೊಡುತ್ತಾಳೆ. ಕೆಲವೊಮ್ಮೆ ಆ ಕಮಲದ ಮೇಲೆ ನಾಜೂಕಾಗಿ ಬ್ಯಾಲೆನ್ಸ್ ಮಾಡುತ್ತಾ ನಿಂತುಕೊಂಡ ಪೋಜಿನಲ್ಲಿ ಲಕ್ಷ್ಮಿದೇವಿ ಭಕ್ತರಿಗೆ ದರ್ಶನ ಕೊಡುವುದೂ ಉಂಟು. (ಆದರೆ ನಿಂತುಕೊಂಡಿರುವ ಲಕ್ಷ್ಮಿ ತುಂಬಾ ಚಂಚಲ ಮತ್ತು ಅಶುಭವಂತೆ. ಆದಕ್ಕಾಗಿ ಲಕ್ಷ್ಮಿ ನಿಂತುಕೊಂಡು ಇರುವ ಭಂಗಿಯ ಫೋಟೋವನ್ನು ನಮ್ಮ ಮನೆಯಲ್ಲಿ ಇಟ್ಟು ಪೂಜಿಸಬಾರದು ಎಂದು ಪುರೋಹಿತರು ಮತ್ತು ಟಿವಿ ಜ್ಯೋತಿಷಿಗಳು ಯಾವಾಗಲೂ ಹೇಳುತ್ತಿರುತ್ತಾರೆ.)

ನಮ್ಮ ಬಡ ಭಾರತೀಯರ ಭಾರತ ಮಾತೆಯೂ ಹುಣಗಟ್ಟಲೆ ಚಿನ್ನ ವಜ್ರದ ಆಭರಣ ಮತ್ತು ಕಿರೀಟ ಹೇರಿಕೊಂಡು ಕಮಲದ ಮೇಲೆಯೇ ನಿಂತುಕೊಂಡಿರುತ್ತಾಳೆ. ದುರ್ಗಾದೇವಿಗೆ ಎಂಟು ಕೈಗಳಿದ್ದು ಅದರಲ್ಲಿ ಒಂದು ಕೈಯಲ್ಲಿ ಕಮಲ ಹಿಡಿದಿರುತ್ತಾಳೆ. ಹೀಗೆ ಕಮಲದ ಹೂವು ಅನೇಕ ಹಿಂದೂ ದೇವರ ಮತ್ತು ಧರ್ಮದ ಸಂಕೇತವಾಗಿರುತ್ತದೆ. ಹಾಗಾಗಿ ಅದನ್ನು ಬಿಜೆಪಿ ಪಕ್ಷದ ಚಿಹ್ನೆಯಾಗಿ ಕೊಟ್ಟಿರುವುದು ಸರಿಯೇ ಎಂದು ಚುನಾವಣಾ ಆಯೋಗ ಪುನರ್‌ಪರಿಶೀಲಿಸಬೇಕು.

ನಮ್ಮ ರಾಷ್ಟ್ರೀಯ ಪ್ರಾಣಿ ಹುಲಿ. ಈ ರಾಷ್ಟ್ರೀಯ ಪ್ರಾಣಿ ಭಾರತದ ಹಳ್ಳಿಗಳಲ್ಲಿ ರಾತ್ರಿ ಕದ್ದು ಮುಚ್ಚಿ ಬಂದು ನಮ್ಮ ಪರಮ ಪೂಜ್ಯ ಗೋವಿನ ಮೈಯಲ್ಲಿ 33 ಕೋಟಿ ದೇವರಿದ್ದಾರೆ ಎಂಬುದನ್ನೂ ಲೆಕ್ಕಿಸದೆ ಆ ಗೋವನ್ನು ಕೊಂದು ತಿನ್ನುತ್ತದೆ. ಆದಕ್ಕಾಗಿ ಈ ರಾಷ್ಟ್ರೀಯ ಪ್ರಾಣಿ ಹುಲಿಯನ್ನು ರಾಷ್ಟ್ರ-ದ್ರೋಹಿ ಮತ್ತು ದೈವ-ದ್ರೋಹಿ ಎಂದು ಘೋಷಿಸಿ ಅದನ್ನು ರಾಷ್ಟ್ರೀಯ ಪ್ರಾಣಿ ಎಂಬ ಪದವಿಯಿಂದ ಕಿತ್ತು ಹಾಕಬೇಕು, ಆಗಲಾದರೂ ಅದಕ್ಕೆ ಬುದ್ಧಿ ಬಂದೀತು. ಜತೆಗೆ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ತಕ್ಷಣ ಘೋಷಿಸಬೇಕು. ಇಲ್ಲದಿದ್ದರೆ ತನಗೆ ಎಂತೆಂತಹ ಅಯೋಗ್ಯ ಮಕ್ಕಳಿದ್ದಾರೆ ಎಂದು ಗೋಮಾತೆಗೆ ಗೊತ್ತಾಗಿ ಬಿಜೆಪಿಗೆ ಶಾಪ ಕೊಟ್ಟು ಬಿಡಬಹುದು ಜೋಕೆ!

- ಏಕಲವ್ಯ ಮುಂಡಾಲ, ಅತ್ತಾವರ

ಸಂಘಿಗಳು ಯಾಕೆ ಸೀತೆ/ಹನುಮಂತನ ಬಗ್ಗೆ ಆಸಕ್ತಿ ಹೊಂದಿಲ್ಲ?

ದೇವರಾಗಲಿ ಅಥವಾ ಮನುಷ್ಯರಾಗಲಿ ಭೂಮಿಯ ಮೇಲೆ ಮಾನವ ರೂಪದಲ್ಲಿ ಹುಟ್ಟಿದ ಮೇಲೆ ತನ್ನ ಜಡ ಶರೀರ ತೊರೆದು ಹೋಗಲೇ ಬೇಕು, ಅಂದರೆ ಸಾಯಲೇ ಬೇಕು ಅಲ್ಲವೇ? ಹಾಗಾದರೆ ರಾಮ ತನ್ನ 85ನೇ ವಯಸ್ಸಿನಲ್ಲಿ ಸತ್ತದ್ದು ಎಲ್ಲಿ? ಇನ್ನೊಬ್ಬ ಕೃಷ್ಣ ಎಂಬ ದೇವರು ತನ್ನ 125ನೇ ವರ್ಷದಲ್ಲಿ ಜರಾ ಎಂಬ ಬೇಡನ ಬಾಣದಿಂದ ಸತ್ತದ್ದು ಎಲ್ಲಿ?

ಕೃಷ್ಣ ಗುಜರಾತಿನಲ್ಲಿ ದ್ವಾರಕೆಯ ಹತ್ತಿರ ಒಂದು ಕಾಡಿನಲ್ಲಿ ಸತ್ತಿದ್ದು ಎಂದು ಪುರಾಣ ಹೇಳುತ್ತದೆ. ಆದರೆ ಆದರ ನಿಖರ ಗುರುತು ಪುರಾಣದಲ್ಲಿ ಎಲ್ಲಿಯೂ ಇಲ್ಲ. ಆದರೆ ರಾಮ ಸತ್ತಿರುವ ಸ್ಥಳದ ಪರಿಚಯ ವಾಲ್ಮೀಕಿ ರಾಮಾಯಣ ದಲ್ಲಿಯೇ ಇದೆ. ರಾಮ ಸ್ವಾಭಾವಿಕ ಮರಣ ಹೊಂದಲಿಲ್ಲ, ಅವನು ತನ್ನಿಂದ ಪ್ರಜೆಗಳ ಮೇಲೆ ಆದ ಘೋರ ಜಾತಿ-ವರ್ಣ ತಾರತಮ್ಯ ಹಾಗೂ ತನ್ನ ಪತ್ನಿ ಸೀತೆಗೆ ಮತ್ತು ಅವಳ ಪುಟ್ಟ ಮಕ್ಕಳಿಗೆ ಮಾಡಿದ ಘೋರ ಅನ್ಯಾಯದ ಪಶ್ಚಾತ್ತಾಪದಿಂದ ಉಂಟಾದ ಮಾನಸಿಕ ಡಿಪ್ರೆಷನ್‌ನಿಂದ ಜೀವನದಲ್ಲಿ ಜಿಗುಪ್ಸೆ ಹೊಂದಿ ಅಯೋಧ್ಯೆಯ ಹತ್ತಿರವೇ ಹರಿಯುತ್ತಿದ್ದ ಸರಯೂ ನದಿಯಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡನು.



ಆದರಂತೆ ಸೀತೆಯದೂ ಆತ್ಮಹತ್ಯೆಯೇ ಆಗಿದೆ. ಅವಳು ಸ್ವಇಚ್ಛೆಯಿಂದ ಭೂಮಿಯಲ್ಲಿ ಸೇರಿಹೋದಳು ಎಂದರೆ ಅವಳು ಗುಡ್ಡದ ಮೇಲಿಂದ ಆಳ ಕೊಳ್ಳಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು ಎಂದೇ ಅರ್ಥ. ಸೀತಾದೇವಿ ಅಯೋಧ್ಯೆ ಯಲ್ಲಿಯೇ ನಿಖರವಾಗಿ ಯಾವ ಸ್ಥಳದಲ್ಲಿ ಭೂಮಿಯಲ್ಲಿ ಐಕ್ಯಳಾದಳು ಎಂಬ ವಿವರ ವಾಲ್ಮೀಕಿ ರಾಮಾಯಣದಲ್ಲಿ ಇರಲೇ ಬೇಕು ತಾನೇ? ಆ ಸ್ಥಳವನ್ನು ಹುಡುಕಿ ತೆಗೆದು ಅಲ್ಲಿ ಸೀತೆಯ ಮಂದಿರ ಕಟ್ಟಿಸಬೇಕು ಎಂದು ಯಾಕೆ ಯಾರಿಗೂ ಹೊಳೆಯುತ್ತಿಲ್ಲ?

ರಾಮಾಯಣದ ಕೇಂದ್ರ ಬಿಂದುವೇ ಸೀತೆ. ಅವಳು ಹುಟ್ಟಿದ್ದು ಬಿಹಾರ್ ರಾಜ್ಯದ 'ಸೀತಾಮಡಿ' ಎಂಬ ಊರಲ್ಲಿ, ಕೆಲವರು ಅವಳು ನೇಪಾಳದ ಜನಕಪುರಿಯಲ್ಲಿ ಹುಟ್ಟಿದ್ದು ಎಂದು ವಾದಿಸುತ್ತಾರೆ. ಏನೇ ಆಗಲಿ ಸೀತೆ ಹುಟ್ಟಿದ ಸ್ಥಳ ಮತ್ತು ಭೂಮಿ ಸೇರಿದ ಸ್ಥಳದಲ್ಲಿ ಮಂದಿರ ಅತಿ ಅಗತ್ಯ. ಆದರೂ ಸಂಘಿಗಳು ಯಾಕೆ ಸೀತೆಯ ಮಂದಿರದ ಬಗ್ಗೆ ಆಸಕ್ತಿ ಹೊಂದಿಲ್ಲ? ಆದಕ್ಕೆ ಚುನಾವಣೆಯಲ್ಲಿ ವೋಟು ಗಳಿಸುವ ಶಕ್ತಿ ಇಲ್ಲವೆಂದೇ? ಅಥವಾ ಪುರುಷ ಪ್ರಧಾನ ವೈದಿಕ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಪ್ರಾಮುಖ್ಯತೆ ಇಲ್ಲ ಎಂಬ ಕಾರಣಕ್ಕಾಗಿಯೇ? ಅಥವಾ ಮನುವಾದಿ ಸಂಸ್ಕೃತಿ ಯಲ್ಲಿ ಶೂದ್ರರ ಸಮಾನವಾಗಿರುವ ಮಹಿಳೆಗೆ ಯಾವಾಗಲೂ ಸ್ವತಂತ್ರ ವ್ಯಕ್ತಿತ್ವ ಹಾಗೂ ಅಸ್ತಿತ್ವ ಇಲ್ಲ ಎಂಬ ಕಾರಣ ಕ್ಕಾಗಿಯೇ? ಒಟ್ಟಾರೆ ಪುರುಷಾಧಿಪತ್ಯದ ವೈದಿಕ ಸಮಾಜದಲ್ಲಿ ಸೀತೆ ಜೀವಂತವಾಗಿದ್ದಾಗಲೂ ಅವಳಿಗೆ ಘೋರ ಅನ್ಯಾಯ ವಾಯಿತು ಹಾಗೂ ಸತ್ತ ಮೇಲೂ ಅವಳಿಗೆ ಅನ್ಯಾಯ ಮುಂದುವರಿದಿದೆ.

ರಾಮಾಯಣದಲ್ಲಿ ರಾಮ-ಲಕ್ಷ್ಮಣರಿಗಿಂತ ಹೆಚ್ಚು ಮಹತ್ವ ಮತ್ತು ಗೌರವಪೂರ್ಣ ವ್ಯಕ್ತಿತ್ವ ಹನುಮಂತನದ್ದು ಎಂಬುದು ನಿಜ. ಆದರೆ ಇಂತಹ ಮಹಾಯೋಗಿ ಹಾಗೂ ರುದ್ರನ ಅವತಾರವಾದ ಹನುಮಂತನ ಮರಣ ಸ್ಥಳ ಅಯೋಧ್ಯೆಯಲ್ಲಿಯೇ ಇರಬೇಕು. ಹನುಮಂತ ಹುಟ್ಟಿದ್ದು ಕರ್ನಾಟಕದಲ್ಲಿ ಮತ್ತು ಸತ್ತಿದ್ದು ಅಯೋಧ್ಯೆಯಲ್ಲಿ, ಆದರೆ ಅದನ್ನೇಕೆ ಯಾರೂ ಗುರುತಿಸಲು ಪ್ರಯತ್ನಿಸುತ್ತಿಲ್ಲ? ಅವನು ದ್ರಾವಿಡ ಜನಾಂಗದವನೆಂದೇ? ಅಥವಾ ದಕ್ಷಿಣ ಭಾರತದ ದಲಿತ ಬುಡಕಟ್ಟು ಜನಾಂಗದವನೆಂದು ಆರ್ಯ ವೈದಿಕ ರಿಂದ ಜನಾಂಗ ಭೇದವೆ? ಯೋಗಿ ಆದಿತ್ಯನಾಥ ತಾನು ಹನುಮಂತನ ಅವತಾರ ಎಂದು ಬೊಂಗು ಬಿಡುತ್ತಾನಲ್ಲ? ಅವನಿಗಾದರೂ ತನ್ನ/ಹನುಮಂತನ ಮರಣ ಸ್ಥಳದಲ್ಲಿ ಒಂದು ಸ್ಮಾರಕ ಕಟ್ಟಬೇಕು ಎಂದು ಯಾಕೆ ಅನಿಸುತ್ತಿಲ್ಲ?

ಮಂದಿರ ಅಥವಾ ಸ್ಮಾರಕ ಕಟ್ಟುವುದು ಒಬ್ಬ ವ್ಯಕ್ತಿ ಸತ್ತ ಸ್ಥಳದಲ್ಲಿಯೇ ಹೊರತು ಅವನ/ಅವಳ ಜನ್ಮ ಸ್ಥಳದಲ್ಲಿ ಅಲ್ಲ. ರಾಮನ ಮರಣ ಸ್ಥಳ ಅಯೋಧ್ಯೆಯಲ್ಲಿ ಇಂದಿಗೂ ಹರಿಯುವ ಸರಯೂ ನದಿಯ ಒಳಭಾಗ. ಹಾಗಾಗಿ ಸರೆಯೂ ನದಿಯ ಮಧ್ಯಭಾಗದಲ್ಲಿ ಒಂದು ನಡುಗಡ್ಡೆ ನಿರ್ಮಿಸಿ ಅದರಲ್ಲಿ ರಾಮಮಂದಿರ ಕಟ್ಟಬೇಕು. ಇದು ಬಹಳ ಆಕರ್ಷಣೀಯ ಪ್ರವಾಸಿ ಕೇಂದ್ರ ಸಹ ಆಗಬಲ್ಲದು. ಜತೆಗೆ ಈಗಿನ ಬಾಬ್ರಿ ಮಸೀದಿ ಸ್ಥಳವನ್ನು ಮೂರು ಭಾಗ ಮಾಡಿ ಒಂದು ಭಾಗದಲ್ಲಿ ನಮ್ಮ ದೇಶ ಕಾಯುತ್ತಾ ಪ್ರಾಣತೆತ್ತ ವೀರ ಯೋಧರ ಸ್ಮಾರಕ ಕಟ್ಟಬೇಕು, ಇನ್ನೊಂದು ಭಾಗದಲ್ಲಿ ನಮ್ಮ ದೇಶಕ್ಕೆ ಅನ್ನ ನೀಡುವ ರೈತರ ಸ್ಮಾರಕ ಕಟ್ಟಬೇಕು ಮತ್ತು ಮೂರನೇಯ ಭಾಗದಲ್ಲಿ ದೇಶವನ್ನು ಸ್ವಚ್ಛವಾಗಿಟ್ಟು ನಮ್ಮನ್ನು ರೋಗರುಜಿನಗಳಿಂದ ಕಾಪಾಡುವ ದಲಿತ ಸಫಾಯಿ ಕರ್ಮಚಾರಿಗಳ ಸ್ಮಾರಕ ಕಟ್ಟಿದರೆ ಯಾವುದೇ ಧರ್ಮದವನೂ ಆಕ್ಷೇಪ ಎತ್ತಲಾರ ಎಂದು ನನ್ನ ದೃಢ ನಂಬಿಕೆ. ಸ್ವತಃ ಸುಪ್ರೀಂಕೋರ್ಟೇ ಮಾತುಕತೆಯ ಮೂಲಕ ಈ ಸಮಸ್ಯೆ ಪರಿಹರಿಸಿ ಎಂದು ಸೂಚನೆ ಕೊಟ್ಟಿರುವುದರಿಂದ ಮೇಲಿನಂತೆ ಸುಲಭದ ಪರಿಹಾರ ಸಾಧ್ಯ.


- ಜೆ. ರವಿಕಿರಣ, ಮೈಸೂರು

ಸಿದ್ದು ಸ್ವಾಭಿಮಾನ, ಸಂಘಿಗಳ ದುರಹಂಕಾರ

ಮಾತುಮಾತಿಗೆ ಸಿದ್ದರಾಮಯ್ಯ ದುರಹಂಕಾರ ತೋರಿಸುತ್ತಾರೆ ಎಂದು ಸಂಘ ಪರಿವಾರದವರು ಮತ್ತು ಅವರ ಪೇಡ್ ಪತ್ರಕರ್ತರು ಆರೋಪಿಸುತ್ತಾ ಇರುತ್ತಾರೆ. ಸಿದ್ದುರಂತಹ ಕೆಳಜಾತಿಯವರು 'ಸ್ವಾಭಿಮಾನ' ತೋರಿಸಿದರೆ ಅದನ್ನು ಮೇಲ್ಜಾತಿಯವರು 'ದುರಹಂಕಾರ' ಎಂದು ಕರೆಯುತ್ತಾರೆ. ಸಿದ್ದುರವರ ಆತ್ಮವಿಶ್ವಾಸವನ್ನು ಪೊಗರು, ಜಂಬ ಅಥವಾ ಹುಮ್ಮಸ್ಸಿನ ಎನ್ನುತ್ತಾರೆ ಮೇಲ್ಜಾತಿಯವರು. ಆದರೆ ಮೇಲ್ಜಾತಿಯ ರಾಜಕಾರಣಿಗಳು ನಿಜವಾಗಿ 'ದುರಹಂಕಾರ' ತೋರಿಸಿದರೆ ಅದನ್ನು ಸವರ್ಣೀಯರು 'ಸ್ವಾಭಿಮಾನ, ಆತ್ಮವಿಶ್ವಾಸ' ಎಂದು ಹೊಗಳುತ್ತಾರೆ.

ಸಿದ್ದು ವಿಷಯದಲ್ಲಿ ಕೇವಲ ಕೇಸರಿ ಪಡೆಗಳು ಇಷ್ಟು ಮೂರ್ಖತನದಿಂದ ಮಾತನಾಡಿದರೆ, ಮಹಿಳೆಯರ ವಿಷಯದಲ್ಲಿ ಮಾತ್ರ ಎಲ್ಲಾ ಜಾತಿಯ ಗಂಡಸರು ಇದೇ ಕುಬುದ್ಧಿ ತೋರಿಸುತ್ತಾರೆ. ಒಬ್ಬ ಮಹಿಳೆ ಸ್ವಾಭಿಮಾನ ತೋರಿಸಿದರೆ ಅವಳನ್ನು ಗಂಡಸರು ದುರಹಂಕಾರಿ ಎನ್ನುತ್ತಾರೆ, ಅವಳು ಆತ್ಮವಿಶ್ವಾಸ ತೋರಿಸಿದರೆ ಅದನ್ನು ಜಂಬ-ಪೊಗರು-ಆಟಿಟ್ಯೂಡ್ ಎನ್ನುತ್ತಾರೆ ಹಳೆಯ ಕಾಲದ ಮನಸ್ಥಿತಿಯ ವಿದ್ಯಾವಂತ ಗಂಡಸರು.

ಕೆಳಜಾತಿಯವರು ಮತ್ತು ಮಹಿಳೆಯರು ಯಾವಾಗಲೂ ಸ್ವತಂತ್ರ ಬುದ್ಧಿ ಇಲ್ಲದವರಂತೆ ವರ್ತಿಸುತ್ತಾ ಗುಲಾಮೀ



ಮನಸ್ಥಿತಿ ತೋರಿಸುತ್ತಾ ಇದ್ದರೆ ಮಾತ್ರ ಮನುವಾದಿಗಳಿಗೆ ಸಮಾಧಾನವಾಗುತ್ತದೆ. ಉತ್ತರಪ್ರದೇಶದ ಜೋಗಿ ಆದಿತ್ಯ-ಬೆಂಕಿನಾತನ ದುರಹಂಕಾರ ಸಂಘಿಗಳಿಗೆ ಸ್ವಾಭಿಮಾನವಾಗಿ ಕಾಣುತ್ತಿದೆ. ಕರ್ನಾಟಕದಲ್ಲಿ ಬಿಜೆಪಿ ಸರಕಾರ ಇದ್ದಾಗ ಯಡಿಯೂರಪ್ಪ ಮತ್ತು ಕುಟುಂಬಿಕರು ಸರಕಾರಿ ಅಧಿಕಾರಿಗಳನ್ನು ಮನೆ ಆಳುಗಳಂತೆ ಕಾಣುತ್ತಿದ್ದದ್ದು ದುರಹಂಕಾರ ಅಲ್ಲವೇ? ಅದಕ್ಕಿಂತ ಹೆಚ್ಚಾಗಿ ಬಳ್ಳಾರಿ ಗಣಿಗಳ್ಳ ರೆಡ್ಡಿಗಳು ತಮ್ಮದೇ ಪಕ್ಷದ ಮುಖ್ಯಮಂತ್ರಿಗಳನ್ನೇ ಕಾಲಕಸದಂತೆ ಕಾಣುತ್ತಿದ್ದದ್ದು ದುರಹಂಕಾರ ಅಲ್ಲವೇ? ಸಂಘ ಪರಿವಾರದವರು ದೇಶದ ಸಂವಿಧಾನವನ್ನು ಕಡೆಗಣಿಸುತ್ತಿರುವುದು ದುರಹಂಕಾರ ಅಲ್ಲವೇ?

ಒಂದೂವರೆ ವರ್ಷದ ಹಿಂದೆ ಕರಾವಳಿಯ ಸಂಘ ಪರಿವಾರದ ನೇತಾರ ಕಲ್ಲಡ್ಕ ಭಟ್ಟ ದಸರೆಯ ಸಮಯ ಕುದ್ರೋಳಿ ದೇವಸ್ಥಾನಕ್ಕೆ ಬಂದು ಜನಾರ್ದನ ಪೂಜಾರಿಯನ್ನು ಅಪ್ಪಿಕೊಂಡು ಮುತ್ತು ಕೊಟ್ಟು ಹೋದ ಮೇಲೆ ಜನಾರ್ದನ ಪೂಜಾರಿಯೂ ಸಂಘಿಗಳ ಭಾಷೆಯನ್ನೇ ಮಾತನಾಡುತ್ತಾ ಸಿದ್ದರಾಮಯ್ಯರನ್ನು ಹಲವಾರು ಬಾರಿ ದುರಹಂಕಾರಿ ಎಂ... ಕರೆದರು. 1982-87 ರಲ್ಲಿ ಬ್ಯಾಂಕಿಂಗ್ ರಾಜ್ಯಮ... ಆಗಿದ್ದ ಪೂಜಾರಿಯವರು ಆಗ ತಾವೇ ತೋ... ದುರಹಂಕಾರವನ್ನು ಈಗ ಮರೆತು ತಮ್ಮದೇ ಪ... ಸಿದ್ದುರವರನ್ನು ದುರಹಂಕಾರಿ ಎಂದು ಕರೆಯುತ್ತಿರುವು... ವಿಪರ್ಯಾಸ. ಪೂಜಾರಿಗೆ ಸಿದ್ದುರವರ ಯಾವ ವ... ದುರಹಂಕಾರವಾಗಿ ಕಂಡಿತೋ ಗೊತ್ತಿಲ್ಲ, ಆದರೆ ಕಲ್ಲ... ಕ್ರಿಮಿನಲ್ ಸಂಘಿ ನೇತಾರ ಪೂಜಾರಿಯನ್ನು ಅಪ್ಪಿಕೊ... ಅವರ ಬಾಯಲ್ಲಿ ಹಾಕಿರುವ ಎಂಜಲು ಶಬ್ದಗಳ... ಪೂಜಾರಿ ಈಗ ಸಿದ್ದು ವಿರುದ್ಧ ಉಗುಳುತ್ತಿದ್ದಾರೆ ಆ...

ನಿಜವಾಗಿ ಸಂಘ ಪರಿವಾರದವರು ಹೊಟ್ಟೆ ಉ... ಏನೆಂದರೆ ಸಿದ್ದರಾಮಯ್ಯ ಇತರ ಕಾಂಗ್ರೆಸ್ಸಿಗರಂತೆ ಹೋ... ಹೋದಲ್ಲೆಲ್ಲಾ ಕಾವಿಧಾರಿಗಳ ಕಾಲಿಗೆ ಉರುಳುವುದ... ಹಾಗೂ ಅಲ್ಲಿಯ ವೈದಿಕ ದೇವಸ್ಥಾನಕ್ಕೆ ಲಗ್ಗೆ ಇ... ಅರ್ಚಕರ ಎದುರಿಗೆ ಯಡ್ಡಿ-ಶೋಭಿಯಂತೆ ದೈನಾಸಿ ಮು... ಮಾಡಿಕೊಂಡು ವಿಶೇಷ ಪೂಜೆಗೆ ನಿಲ್ಲುವುದಿಲ್ಲ, ಅದು... ಸಂಘಿ ವೈದಿಕರಿಗೆ ದುರಹಂಕಾರ ವಾಗಿ ಕಂಡಿರುವು... ಸಿದ್ದುರವರು ಅಷ್ಟು ಜಾತಿವಾದಿ ಪೇಜಾವರರ ಪರ್ಯಾಯ... ಸ್ವತಃ ಬರಲಿಲ್ಲ ಹಾಗೂ ಕರಾವಳಿಗೆ ಸಿದ್ದು ಬಂದಿದ... ಅವರು ಪೇಜಾವರರ ಕಾಲಡಿ ಕುಳಿತು ಪೇಜಾವರ... ಮೂರು ಅಡಿ ಎತ್ತರದಿಂದ ಬೌಲ್ ಮಾಡಿದ ಮುಸ... ಯನ್ನು ಸಿದ್ದು ಕ್ಯಾಚ್ ಹಿಡಿಯಲಿಲ್ಲ ಎಂಬ ಒಂ... ಕಾರಣಕ್ಕೆ ಪೇಜಾವರರ ಭಕ್ತರು ಮತ್ತು ಸಂಘಿಗಳ ಬೇ... ಪತ್ರಕರ್ತರು ಸಿದ್ದುರವರಿಗೆ ದುರಹಂಕಾರಿ ಎಂ... ಕರೆಯುತ್ತಿರುವುದು.


ಕರ್ನಾಟಕದ ಬಡಜನರಲ್ಲಿ ದಿನದಿಂದ ದಿ... ಸಿದ್ದರಾಮಯ್ಯನವರ ಜನಪ್ರಿಯತೆ ವೇಗವಾಗಿ ಹೆಚ್ಚುತ್ತಿ... ವುದನ್ನು ಕಂಡು ಮೈಪರಚಿಕೊಳ್ಳುತ್ತಿರುವ ಸಂಘಿಗ... ಅವರನ್ನು ಹೀಯಾಳಿಸಲು ಏನಾದರೂ ಒಂದು ಕುಂ... ನೆಪ ಹುಡುಕುತ್ತಾ ಅವರಿಗೆ 'ನಿದ್ರಾಮಯ್ಯ' ಎಂಬ ಲೇ... ಶಬ್ದವನ್ನು ಕುತ್ಸಿತ ಹೆಣೆದಿದ್ದಾರೆ. ಆದರೆ ಅದೇ ... ಸಂಘಿಗಳಿಗೆ ತಿರುಗುಬಾಣವಾಗುತ್ತಿದೆ. ಸಿದ್ದರಾಮಯ್ಯ ವಿಧಾ... ಸಭೆಯಲ್ಲಿ ಸೋಮಾರಿ ಬಿಜೆಪಿ ಸದಸ್ಯರಂತೆ ಎಂದ... ನಿದ್ದೆ ಮಾಡಿಲ್ಲ. ಆದರೆ ಬಿಜೆಪಿ ಸದಸ್ಯರು ವಿಧಾನ ಸಭೆಯ... ನಿದ್ದೆ ಮಾಡುತ್ತಿರುವ ಫೋಟೋಗಳು ಈಗ ಸಾಮಾ... ಜಾಲತಾಣದಲ್ಲಿ ಹರಿದಾಡುತ್ತಿವೆ.


ಪ್ರಧಾನಿ ಮೋದಿ ಹೋದಲ್ಲೆಲ್ಲಾ ತಾನೊಬ್ಬ ದೇ... ಅವತಾರ ಪುರುಷ ಎಂಬ ರೀತಿಯಲ್ಲಿ ಸುಡುಮು... ದೊಂದಿಗೆ ಎಡಗೈ ಬೀಸಿ ತೋರಿಸುತ್ತಿರುವ ದುರಹಂಕ... ವನ್ನು ಈಗ ಜನರು ಹೆಚ್ಚು ಹೆಚ್ಚು ಗೇಲಿ ಮಾಡುತ್ತಿದ್ದಾ...

- ಗಿರೀಶ್ ಟಿ ಶೆಟ್ಟಿ, ಮು...

ಎಮ್ಮೆಯೂ ತಾಯಿಯೇ

ಭಾರತೀಯರಿಗೆ ಹಸು ಮಾತ್ರ ತಾಯಿಯಲ್ಲ, ಎ... ಸಹ ತಾಯಿ. ಎಮ್ಮೆ ಕಪ್ಪಾಗಿದೆ ಮತ್ತು ಸುಂದರವಾಗಿ... ಎಂಬ ಒಂದೇ ಕಾರಣಕ್ಕೆ ಅದನ್ನು ತಾಯಿ ಎನ್ನ... ವೈದಿಕರೇ ನೀವು ಹೇಸಿಕೊಳ್ಳುತೀರಾ? ಹಾಗಾದರೆ ನ... ನಿಜವಾದ ತಾಯಿ ಕಪ್ಪಾಗಿದ್ದರೆ ಅವಳನ್ನು ತಾಯಿ ಎಂ... ಒಪ್ಪಿಕೊಳ್ಳದೇ ನೀವು ನೆರೆಮನೆಯ ಸುಂದರ ಹೆಂಗಸ... ತಾಯಿ ಎಂದು ಹೇಳುತ್ತೀರಾ? ಎಮ್ಮೆ-ಕೋಣ ಎಂ... ಪ್ರಾಣಿ ನಿಜವಾಗಿ ಭಾರತದ ಮೂಲದ್ದಾಗಿದೆ, ಆದ... ಹಸು-ಹೋರಿ ಇದು ಆರ್ಯ ಜನಾಂಗದವರು ಮ... ಏಷಿಯಾದಿಂದ ಭಾರತಕ್ಕೆ ವಲಸೆ ಬರುವಾಗ ತಂದಿರು... ವಿದೇಶಿ ಪ್ರಾಣಿ ಆಗಿದೆ. ಹಾಗಾಗಿ ಹಸು-ಎತ್ತು ಭಾರತೀ... ಮೂಲದ ಪ್ರಾಣಿ ಅಲ್ಲವೇ ಅಲ್ಲ. ಈಗಲೂ ಹಳ್ಳಿ... ಹೆಚ್ಚಿನ ಜನರು ತಮ್ಮ ಚಿಕ್ಕ ಮಕ್ಕಳಿಗೆ ಎಮ್ಮೆಯ ಹಾಲ... ಕುಡಿಸುತ್ತಾರೆಯೇ ಹೊರತು ಹಸುವಿನ ಹಾಲನ್ನು ಅ... ಉತ್ತರ ಭಾರತದಲ್ಲಿ ಹಳ್ಳಿಯ ಶೇ.80 ಜನರು ಎ... ಹಾಲು ಅಥವಾ ಮೇಕೆ-ಕುರಿ-ಒಂಟೆಯ ಹಾ... ಕುಡಿಯುತ್ತಾರೆ. ಮೇಕೆಯ ಹಾಲು ಮಕ್ಕಳಿಗೆ ಎಲ್ಲಕ್ಕಿ... ಹೆಚ್ಚು ಪೌಷ್ಟಿಕ ಎಂದು ಆಹಾರ ತಜ್ಞರೇ ಹೇಳುತ್ತಾ...





ಹಿತವಾಗಿದೆ ಸಿನಿ ಬದುಕು: ಹಿತಾ ಚಂದ್ರಶೇಖರ್

ಸಿಹಿಕಹಿ ಚಂದ್ರು ಮತ್ತು ಗೀತಾ ಅವರ ಮುದ್ದಿನ ಮಗಳು ಹಿತಾ ಚಂದ್ರಶೇಖರ್. ಅಪ್ಪ ಅಮ್ಮನಂತೆಯೇ ಹಿತಾ ಕೂಡ ಸಿನಿಮಾ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕಳೆದ ತಿಂಗಳಷ್ಟೇ ಇವರ ನಟನೆಯ 'ಕಾಲ್‌ಕೇಜಿ ಪ್ರೀತಿ' ಸಿನಿಮಾ ರಿಲೀಸ್ ಆಗಿದೆ. ಈಗ 'ದುನಿಯಾ 2' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ತಮ್ಮ ವೈಯಕ್ತಿಕ ಬದುಕು ಮತ್ತು ಸಿನಿಮಾ ಜರ್ನಿ ಕುರಿತಾಗಿ ಹಿತಾ ಇಲ್ಲಿ ಮಾತಾಡಿದ್ದಾರೆ.

ಕಾಲೇಜು ದಿನಗಳಿಂದಲೇ ನಟನೆಯ ಬಗ್ಗೆ ಆಸಕ್ತಿ ಇದ್ದರೂ ಓದಿನ ನಂತರವೇ ನಟನೆಯತ್ತ ಮುಖ ಮಾಡಬೇಕು ಅನ್ನುವ ಅಪ್ಪ ಮತ್ತು ಅಮ್ಮನ ಆಜ್ಞೆಯನ್ನು ಚಾಚೂತಪ್ಪದೇ ಪಾಲಿಸಿದ್ದಾರೆ ಸಿಹಿಕಹಿ ಚಂದ್ರು ಮತ್ತು ಗೀತಾ ಅವರ ಪುತ್ರಿ ಹಿತಾ. ಇದೀಗ ತಂದೆ ತಾಯಿಯಂತೆಯೇ ಬಣ್ಣದ ಜಗತ್ತಿಗೆ ಕಾಲಿಟ್ಟಿದ್ದಾರೆ. ಎರಡು ವರ್ಷಗಳಲ್ಲಿ ಬರೋಬ್ಬರಿ ಐದು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ.





*** ನಿಮ್ಮ ತಂದೆತಾಯಿಯಂತೆಯೇ ಸಿನಿಮಾ ರಂಗದಲ್ಲೇ ಉಳಿಯಬೇಕು ಅಂತ ತೀರ್ಮಾನ ಮಾಡಿದ್ದೀರಾ?**

ನಿಜ ಹೇಳ್ತೀನಿ. ಕಾಲೇಜು ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ. ಮಾಡೆಲಿಂಗ್ ಕ್ಷೇತ್ರದತ್ತ ಆಸಕ್ತಿ ಕೂಡ ಇತ್ತು. ನನಗೆ ಕಾಲೇಜು ದಿನಗಳಲ್ಲಿ 'ಮಿಸ್ ಫ್ರೆಷರ್' ಬಿರುದು ಕೂಡ ಸಿಕ್ಕಿತ್ತು. ಆದರೆ ಓದು ಮುಗಿದ ಮೇಲೆಯೇ ನಟನೆಯ ಬಗ್ಗೆ ಮಾತಾಡು ಅಂತ ಅಪ್ಪ ಅಮ್ಮ ಹೇಳಿದ್ದರು. ಹಾಗಾಗಿ ಸುಮ್ಮನಿದ್ದೆ.

*** ನಿಮ್ಮ ಮನೆಯಲ್ಲಿ ಧಾರಾವಾಹಿಯ ಹೊರತಾಗಿ ಬೇರೆ ಮಾತೇ ಇಲ್ಲ ಅನಿಸತ್ತೆ. ಚಿಕ್ಕ ವಯಸ್ಸಿನಲ್ಲೂ ನಿಮಗೆ ನಟಿಸಬೇಕು ಅಂತ ಅನಿಸಿತ್ತಾ?**

ಅಪ್ಪ ಅಮ್ಮ ಧಾರಾವಾಹಿ ನಟನೆ ಮತ್ತು ನಿರ್ಮಾಣದಲ್ಲಿ ಸದಾ ಬಿಜಿ. ನಾನು ಹೆಚ್ಚಾಗಿ ನನ್ನ ತಾತನ ಜತೆಯೇ ಇರುತ್ತಿದ್ದೆ. ಸ್ಕ್ರಿಪ್ಟ್ ವರ್ಕ್ ಸೇರಿದಂತೆ ಹಲವು ಕೆಲಸಗಳು ನಮ್ಮ ಮನೆಯಲ್ಲೇ ನಡೆಯುತ್ತಿದ್ದವು. ಸಹಜವಾಗಿಯೇ ಅದರತ್ತ ಗಮನ ಹರಿದಿತ್ತು. ಅಲ್ಲದೇ, ನಾನು 'ಪಾಪಾ ಪಾಂಡು'ವಿನ ಐದು ಎಪಿಸೋಡ್‌ಗಳಲ್ಲಿ ಸುನೇತ್ರಾ ಪಂಡಿತ್ ಅವರ ಮಗಳ ಪಾತ್ರ ಮಾಡಿದೆ. ಕಾಲೇಜು ಮೆಟ್ಟಿಲು ಹತ್ತುತ್ತಿದ್ದಂತೆಯೇ ಓದಿನ ಕಡೆಗೆ ಗಮನ ಕೊಟ್ಟೆ.

*** ಹಾಗಾದರೆ ಮತ್ತೆ ನಟನೆಯತ್ತ ಬಂದಿದ್ದು ಹೇಗೆ?**

ಓದು ಮುಗಿದನಂತರ ನಾನು ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದೆ. ಸ್ವಲ್ಪ ದಿನ ಕೆಲಸವನ್ನೂ ಮಾಡಿದೆ. ಆದರೆ, ಅದು ತೀರಾ ಯಾಂತ್ರಿಕ ಜೀವನ ಅನಿಸಿತು. ಹಾಗಾಗಿ ಅಪ್ಪ ಅಮ್ಮನ ಜತೆ ಮಾತಾಡಿ, ರಂಗಭೂಮಿಯಲ್ಲಿ ತೊಡಗಿಸಿಕೊಂಡೆ. ಆನಂತರವೇ ಸಿನಿಮಾ ಕ್ಷೇತ್ರಕ್ಕೆ ಬಂದದ್ದು.

*** ನಟನೆ ನಿಮಗೆ ಕಷ್ಟ ಅಂತ ಅನಿಸಲಿಲ್ಲವಾ?**

ಸಿನಿಮಾ ರಂಗಕ್ಕೆ ಹೋಗುತ್ತೇನೆ ಅಂತ ಅಪ್ಪನನ್ನು ಕೇಳಿದಾಗ ಅವರು ಮೊದಲು ಹೇಳಿದ್ದೇ ನಟನೆಯ ಬಗ್ಗೆ. ಆ್ಯಕ್ಟಿಂಗ್ ಸ್ಕೂಲ್‌ಗೆ ಹೋಗಿ ತರಬೇತಿ ಪಡೆದರೆ ಮಾತ್ರ ಆ ರಂಗಕ್ಕೆ ಹೋಗು ಅಂದರು. ಮುಂಬೈನ ರೋಶನ್ ತನೇಜಾ ಆಕ್ಟಿಂಗ್ ಸ್ಕೂಲ್‌ನಲ್ಲಿ ನಟನೆಯ ಪಾಠ ಹೇಳಿಸಿಕೊಂಡ ನಂತರ 'ಸ್ನೇಕ್ ನಾಗ' ಸಿನಿಮಾ ಒಪ್ಪಿಕೊಂಡೆ.

*** ನಿಮ್ಮ ಮೊದಲ ಸಿನಿಮಾ 'ಸ್ನೇಕ್ ನಾಗ' ಏನಾಯ್ತು?**

ಕಾರಣಾಂತರಗಳಿಂದ ಈ ಸಿನಿಮಾದ ಶೂಟಿಂಗ್ ಮುಗಿದಿಲ್ಲ. ನಾನು ಮತ್ತು ಯೋಗಿ ತುಂಬಾ ಒಳ್ಳೆಯ ಪಾತ್ರಗಳನ್ನೇ ಅದರಲ್ಲಿ ಮಾಡಿದ್ದೇವೆ.

*** 'ದುನಿಯಾ 2'ರಲ್ಲೂ ನೀವು ಯೋಗಿ ಜತೆಯೇ ನಟಿಸುತ್ತಿದ್ದೀರಿ?**

ಹೌದು, ಮೊದಲ ಸಿನಿಮಾ ಬಿಡುಗಡೆ ಆಗಲಿಲ್ಲ ಅನ್ನುವ ಬೇಸರ ಇರುವಾಗಲೇ ಯೋಗಿ ಜತೆ 'ದುನಿಯಾ 2' ಸಿನಿಮಾದಲ್ಲಿ ನಟಿಸಲು ಆಫರ್ ಬಂತು. ನಿಜಕ್ಕೂ ನನಗೆ ಖುಷಿ ಆಯಿತು. 'ದುನಿಯಾ' ಸಿನಿಮಾ ಕನ್ನಡ ಚಿತ್ರರಂಗಕ್ಕೆ ಒಂದು ಹೆಮ್ಮೆ. ಅಂತಹ ಟೈಟಲ್‌ನ ಮತ್ತೊಂದು ಚಿತ್ರಕ್ಕೆ ನಾನು ನಾಯಕಿ ಅನ್ನುವುದೇ ಹೆಮ್ಮೆ. ಈ ಕಾರಣಕ್ಕಾಗಿ ಯೋಗಿ ಕುಟುಂಬಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

*** 'ದುನಿಯಾ 2'ರಲ್ಲಿ ನೀವು ಯಾವ ರೀತಿಯ ಪಾತ್ರವನ್ನು ಪೋಷಿಸುತ್ತಿದ್ದೀರಿ?**

ಅದೊಂದು ವಿಭಿನ್ನ ಪಾತ್ರ. ಅಲ್ಲಿ ನಾನು ಗಾರ್ಮೆಂಟ್ಸ್ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಅದೊಂದು ರೀತಿಯ ಡಿಗ್ಲಾಮ್ ಪಾತ್ರ.

*** 'ಕಾಲ್‌ಕೇಜಿ ಪ್ರೀತಿ' ಎಂಬ ಪ್ರಯೋಗಾತ್ಮಕ ಚಿತ್ರದಲ್ಲೂ ತಾವು ನಟಿಸಿದ್ದೀರಿ. ನಿಮ್ಮ ಪಾತ್ರದ ಬಗ್ಗೆ ಪ್ರತಿಕ್ರಿಯೆ ಹೇಗಿತ್ತು?**

'ಕಾಲ್‌ಕೇಜಿ ಪ್ರೀತಿ' ಸಿನಿಮಾದ ಅಭಿನಯಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತು. ನನ್ನ ಪಾತ್ರವನ್ನು ಮತ್ತು ಅಭಿನಯವನ್ನು ಮೆಚ್ಚಿಕೊಂಡು ಎಲ್ಲ ಪತ್ರಿಕೆಗಳು ಬರೆದವು. ಆದರೆ ನಾವು ಅಂದುಕೊಂಡಷ್ಟು ಆ ಸಿನಿಮಾವನ್ನು ಜನ ಸ್ವೀಕರಿಸಲಿಲ್ಲ. ■

ಹಾಗಾಗಿ ಹಸುವಿನ ಮೈಯಲ್ಲಿ 33 ಕೋಟಿ ದೇವರಿರುವುದು ನಿಜವಾಗಿದ್ದರೆ ಎಮ್ಮೆ-ಮೇಕೆಯ ಮೈಯಲ್ಲಿ ಕನಿಷ್ಠ 50 ಕೋಟಿ ದೇವರು ಇರಲೇ ಬೇಕು.

ಬಡ ಜನರ ತಾಯಿಯ ಸ್ಥಾನದಲ್ಲಿರುವ ಎಮ್ಮೆ ಮತ್ತು ಮೇಕೆಯನ್ನು ಸಹ ಮಾಂಸಕ್ಕಾಗಿ ಕೊಲ್ಲುವುದನ್ನೂ ತಕ್ಷಣ ಕೇಂದ್ರ ಸರಕಾರ ನಿಷೇಧಿಸಲಿ ಹಾಗೂ ವಿದೇಶಕ್ಕೆ ರಫ್ತು ಮಾಡುತ್ತಿರುವುದು ಗೋಮಾಂಸವಲ್ಲ ಅದು ಎಮ್ಮೆ-ಕೋಣಗಳ ಮಾಂಸ ಎಂದು ಕಳ್ಳ ಸಬೂಬು ಹೇಳುವುದನ್ನು ಬಿಜೆಪಿಯ ಜೈನರು ನಿಲ್ಲಿಸಲಿ.

ತಿರುಪತಿಯಲ್ಲಿ ಮೊದಲು ಇಲ್ಲಿಯ ದ್ರಾವಿಡ ಬುಡಕಟ್ಟು ಜನಾಂಗದವರು ಪೂಜಿಸುತ್ತಿದ್ದ ಬಲೀಂದ್ರ (ಬಲಿ ಚಕ್ರವರ್ತಿ-ಬಲಿಜೀ-ಬಾಲಾಜಿ) ಮಂದಿರವಿತ್ತು. ನಂತರ ಶೈವರು ಅದನ್ನು ಸುಬ್ರಹ್ಮಣ್ಯ ದೇವಸ್ಥಾನವಾಗಿ ಬಲಾತ್ಕಾರದಿಂದ ಪರಿವರ್ತಿಸಿದರು. ಹನ್ನೊಂದನೆ ಶತಮಾನದಲ್ಲಿ ರಾಮಾನುಜಾಚಾರ್ಯರು ಸುಬ್ರಹ್ಮಣ್ಯ ಮೂರ್ತಿಯ ಎಡಗೈಯಲ್ಲಿದ್ದ ಈಟಿ (ವೇಲು) ಕಿತ್ತು ತೆಗೆದು ಅದನ್ನು ಬರಿಗೈ ಮಾಡಿ ಮೂರ್ತಿಯ ಹಣೆಗೆ ಪುಂಡ್ರ ನಾಮ ಬಳಿದು ಅದನ್ನೇ ಶ್ರೀನಿವಾಸ ಅರ್ಥಾತ್ ವೆಂಕಟರಮಣ ಮೂರ್ತಿ ಮಾಡಿದರು. ಈಗಲೂ ಆ ಮೂರ್ತಿಯನ್ನು ಪುರಾತತ್ವ ತಜ್ಞರು ಪರೀಕ್ಷಿಸಿದರೆ ನಿಜ ಗೊತ್ತಾಗುತ್ತದೆ. ಮೂರ್ತಿಯ ಎಡಗೈ ಮುಷ್ಠಿ ಈಗಲೂ ಈಟಿ-ಭರ್ಚಿ-ವೇಲು ಹಿಡಿದಿರುವ ಭಂಗಿಯಲ್ಲಿಯೇ ಇದೆ. ಆದರೆ ವೈದಿಕರು ತಮ್ಮ ಗುಟ್ಟು ರಟ್ಟಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಆ ತಿರುಪತಿ ಮೂರ್ತಿಯನ್ನು ಪುರಾತತ್ವ ತಜ್ಞರು ಪರೀಕ್ಷಿಸಲು ಬಿಡುತ್ತಿಲ್ಲ. ಹಾಗಾಗಿ ಮೊದಲು ಈ ತಿರುಪತಿ ಬಲೀಂದ್ರ ದೇವಸ್ಥಾನವನ್ನು ಇಲ್ಲಿಯ ಬುಡಕಟ್ಟು ಜನರಿಗೆ ಬಿಟ್ಟು ಕೊಡಲಿ. ಆಮೇಲೆ ಬಾಬ್ರಿ ಬಗ್ಗೆ ಮಾತುಕತೆ ಮಾಡಲಿ.

ಕರ್ನಾಟಕದ ಕರಾವಳಿಯಲ್ಲಿ ಕಟೀಲು ಕೊಲ್ಲೂರು ಸಹಿತ ಎಲ್ಲಾ ದುರ್ಗಾಪರಮೇಶ್ವರಿ ದೇವಾಲಯಗಳು ಜೈನರ 'ಅಂಬಿಕಾ' ಎಂಬ ಯಕ್ಷಿಯ ಜೈನ ಬಸದಿಗಳಾಗಿದ್ದವು ಅಥವಾ ಸ್ಥಳೀಯ ತುಳುವ ಮೂಲ ನಿವಾಸಿಗಳ ಉಳ್ಳಾಲ್ತಿ-ಕಲ್ಲುರ್ಟಿ-ಕೊಡಮಣಿತ್ತಾಯ-ಭಗವತಿ ಮುಂತಾದ ಹೆಣ್ಣು ದೈವ-ಭೂತಗಳ ಗುಡಿಗಳಾಗಿದ್ದವು. ಅವನ್ನು ವೈದಿಕರು ಮತ್ತು ಬಂಟರು ಕೂಡಿ ಬಲಾತ್ಕಾರದಿಂದ ವೈದಿಕ ದೇವಾಲಯವಾಗಿ ಪರಿವರ್ತಿಸಿದರು. ಅದಕ್ಕಾಗಿಯೇ ಈ ಎಲ್ಲಾ ದೇವಾಲಯಗಳ ಮೂಲ ಮೂರ್ತಿ "ಗುಂಡುಕಲ್ಲು ಅಥವಾ ಯೋನಿಲಿಂಗದ" ರೂಪದಲ್ಲಿ ಇದೆ. ಕರಾವಳಿಯ ಈ ಎಲ್ಲಾ ದೇವಸ್ಥಾನಗಳನ್ನೂ ಇಲ್ಲಿಯ (ದಲಿತ) ಮೂಲನಿವಾಸಿಗಳಾದ ಕೊರಗ-ಮುಂಡಾಲ-ಮಾಯಿಲ-ಪರವ-ಪಂಬದ-ನಲ್ಕೆ ಜಾತಿಗಳವರಿಗೆ ಬಿಟ್ಟು ಕೊಡಬೇಕು. ಅಂತೆಯೇ ಕದ್ರಿ ಮಂಜುನಾಥ ದೇವಸ್ಥಾನ ಬೌದ್ಧ ವಿಹಾರ ಆಗಿತ್ತು ಎಂದು ಬ್ರಿಟಿಷರ ಕಾಲದಲ್ಲಿಯೇ ನಾರ್ಣಪ್ಪ ಸುವರ್ಣ ಎಂಬ ಪುರಾತತ್ವ ತಜ್ಞರು ಕೊಟ್ಟಿರುವ ಲಿಖಿತ ದಾಖಲೆಯಿದೆ. ಹಾಗಾಗಿ ಅದನ್ನೂ ಮೊದಲು ನವ-ಬೌದ್ಧರಿಗೆ ವಹಿಸಿಕೊಡಬೇಕು, ಆಮೇಲೆ ವೈದಿಕರು ಬಾಬ್ರಿ-ರಾಮ ಮಂದಿರದ ಬಗ್ಗೆ ಮಾತನಾಡಬೇಕು.

- ವೀರಪ್ಪ ಡಿ ನಾಯ್ಕ್, ಮಂಗಳೂರು

ಮೋದಿ ಮಾದರಿ ಅಲ್ಲ, ಸಿದ್ದು ಮಾದರಿ

"ಕರ್ನಾಟಕ ರಾಜ್ಯದಲ್ಲಿ ತೀವ್ರ ಬರಗಾಲವಿದ್ದರೂ ಬಡ ಜನರಿಗೆ ಹಸಿವಿನ ಅನುಭವ ಆಗಿಲ್ಲ. ಇದಕ್ಕೆ ಅನ್ನಭಾಗ್ಯ ಯೋಜನೆ ಕಾರಣ. 2013 ಜುಲೈ ತಿಂಗಳಲ್ಲಿ ಸಿದ್ದರಾಮಯ್ಯ ಸರಕಾರ ಅನ್ನಭಾಗ್ಯ ಯೋಜನೆ ಅನುಷ್ಠಾನಗೊಳಿಸಿದ ವರ್ಷವೇ ಅಂದರೆ 2013-14 ಮಳೆ ಕೊರತೆಯಿಂದ ಕರ್ನಾಟಕದಲ್ಲಿ ಭೀಕರ ಬರಗಾಲ ಬಿದ್ದಿತ್ತು. ಆಗ ಬಡ ಜನರು ಹಸಿವಿನಿಂದ ಸಾಯದಂತೆ ಮಾಡಿದ್ದು ಸರಕಾರದ ಅನ್ನಭಾಗ್ಯ ಯೋಜನೆ. ಈಗ 2015-16 ಮತ್ತು 2016-17 ರಲ್ಲಿ ಮತ್ತೆ ಸತತವಾಗಿ ಎರಡು ವರ್ಷದಿಂದ ಬರಗಾಲ ಬಿದ್ದಿದ್ದರೂ ಜನರಿಗೆ ಬರಗಾಲದ ಭೀಕರತೆ ಅರಿವಾಗದಂತೆ ರಕ್ಷಿಸಿದ್ದು ಅದೇ ಸಿದ್ದರಾಮಯ್ಯನವರ 'ಅನ್ನಭಾಗ್ಯ ಯೋಜನೆಯೇ. ಸತತ ಬರಗಾಲಗಳು ಅನ್ನಭಾಗ್ಯದ ಮಾನವೀಯ ಮುಖವನ್ನು ಹಾಗೂ ಸಾಮಾಜಿಕ ಉಪಯುಕ್ತತೆಯನ್ನು ಲೋಕಕ್ಕೆ ಪರಿಚಯ ಮಾಡಿ ಕೊಟ್ಟಿದೆ!" - ಹೀಗೆಂದು ಹೇಳಿದವರು ಯಾವುದೇ ರಾಜಕಾರಣಿಯಲ್ಲ. ಇದನ್ನು ಹೇಳಿದವರು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು.

ಧರ್ಮಾಧಿಕಾರಿ ಹೆಗ್ಗಡೆಯವರು ಯಾವಾಗಲೂ ಯಾವುದೇ ರಾಜಕೀಯ ಪಕ್ಷದ ಪರವಾಗಿ ಪಕ್ಷಪಾತ ಮಾಡಿದವರಲ್ಲ, ಹಾಗಾಗಿ ಅವರು ಹೇಳಿದ್ದರಲ್ಲಿ ಯಾವುದೇ ಸ್ವಾರ್ಥ ಅಥವಾ ಉತ್ಪ್ರೇಕ್ಷೆ ಇರಲು ಸಾಧ್ಯವಿಲ್ಲ. ಅನ್ನಭಾಗ್ಯ ಜನರನ್ನು ಸೋಮಾರಿಯನ್ನಾಗಿ ಕೆಲಸಗಳ್ಳರನ್ನಾಗಿ ಮಾಡಿದೆ ಎಂದು ಹೇಳುವವರು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಪ್ರಾಮಾಣಿಕ ಅಭಿಪ್ರಾಯವನ್ನು ಗಮನಿಸಬೇಕು.



ಅನ್ನಭಾಗ್ಯ ಯೋಜನೆಯಿಂದ ಕರ್ನಾಟಕದ ಬಡ ಜನರು ಕಾಂಗ್ರೆಸ್ಸಿಗೆ ಋಣಿಯಾಗಿದ್ದಾರೆ ಎಂಬುದನ್ನು ಗಮನಿಸಿರುವ ಬಿಜೆಪಿಯವರು, ನಂಜನಗೂಡು ಮತ್ತು ಗುಂಡ್ಲುಪೇಟೆ ಉಪಚುನಾವಣೆಯಲ್ಲಿ ಅನ್ನಭಾಗ್ಯ ಧನಾತ್ಮಕ ಪರಿಣಾಮ ಬೀರುತ್ತಿರುದನ್ನು ಕಂಡು ಹೊಟ್ಟೆ ಉರಿದ ಯಡಿಯೂರಪ್ಪನವರು ಅನ್ನಭಾಗ್ಯದ ಕ್ರೆಡಿಟ್ಟನ್ನು ಮೋದಿಗೆ ಕೊಟ್ಟು ಮತದಾರರನ್ನು ತಪ್ಪು ದಾರಿಗೆ ಎಳೆಯಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ.


2013 ರಲ್ಲಿ ಸಿದ್ದರಾಮಯ್ಯ ಅನ್ನಭಾಗ್ಯ ಯೋಜನೆ ಅನುಷ್ಠಾನಗೊಳಿಸುವಾಗ ಮೋದಿ ಆಗ ಇನ್ನೂ ಗುಜರಾತಿನ ಮುಖ್ಯಮಂತ್ರಿ ಆಗಿದ್ದರು. ಹಾಗಾದರೆ ಆಗ ಇಂತಹ ಯೋಜನೆ ಗುಜರಾತಿನಲ್ಲಿ ಯಾಕೆ ಇರಲಿಲ್ಲ? ಗುಜರಾತ್ ಮಾದರಿ ಎಂದು ಹೋದಲ್ಲೆಲ್ಲಾ ಬಡಾಯಿ ಕೊಚ್ಚಿದರೂ ಜನರ ಜೀವನಮಟ್ಟದ ಇಂಡೆಕ್ಸ್‌ನಲ್ಲಿ ಗುಜರಾತ್ ಕೆಳಗಿನ 18ನೇ ಸ್ಥಾನದಲ್ಲಿ ಇದೆ ಹಾಗೂ ಕರ್ನಾಟಕ ಮೇಲಿನ 7 ನೇ ಸ್ಥಾನದಲ್ಲಿ ಇದೆ. ಇವತ್ತಿಗೂ ಗುಜರಾತಿನಲ್ಲಿ ಅನ್ನಭಾಗ್ಯದಂತಹ ಯಾವುದೇ ಬಡಜನಪರ ಯೋಜನೆ ಇಲ್ಲ. ಕರ್ನಾಟಕದಷ್ಟೇ ದೊಡ್ಡ ರಾಜ್ಯವಾಗಿರುವ ಗುಜರಾತಿನಲ್ಲಿ ಕರ್ನಾಟಕಕ್ಕಿಂತ ಮೂರು ಪಟ್ಟು ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದುವೇ ಗುಜರಾತ್ ಮಾದರಿ ಅಭಿವೃದ್ಧಿ.

ಗುಜರಾತಿನಲ್ಲಿ ಗೋವು ಎಂಬ ಪ್ರಾಣಿಗೆ ಕೊಡುವ ಪ್ರಾಮುಖ್ಯತೆಯ ಕಾಲುಭಾಗದಷ್ಟು ಪ್ರಾಮುಖ್ಯತೆಯನ್ನೂ ಮನುಷ್ಯರ ಜೀವಕ್ಕೆ ಕೊಡುತ್ತಿಲ್ಲ ಎಂದಮೇಲೆ ಗುಜರಾತನ್ನು 'ಗೋಜರಾತ್' ಎಂದು ಮರುನಾಮಕರಣ ಮಾಡುವುದು ಒಳಿತು. ನಂಜನಗೂಡು ಗುಂಡ್ಲುಪೇಟೆ ಮತದಾರರು ಧರ್ಮಾಧಿಕಾರಿ ಹೆಗ್ಗಡೆಯವರ ಪ್ರಾಮಾಣಿಕ ಅಭಿಪ್ರಾಯವನ್ನು ಗಮನದಲ್ಲಿಟ್ಟು ಆತ್ಮಸಾಕ್ಷಿಯಾಗಿ ಮತದಾನ ಮಾಡಿದರೆ ಒಳಿತು.

- ಕೆ. ಲಕ್ಷ್ಮೀಕಾಂತ್ ರಾವ್, ಮೈಸೂರು

ನಮ್ಮದು ಪ್ರಜಾಪ್ರಭುತ್ವ ಎನ್ನಲಾದೀತೆ

ಪಂಚ ರಾಜ್ಯಗಳ ಫಲಿತಾಂಶದ ಬಗ್ಗೆ ನೂರ್ ಶ್ರೀಧರ್ ಅವರ ಲೇಖನ ತುಂಬ ಸೂಕ್ತವೂ ಸಕಾಲಿಕವೂ ಆಗಿದೆ. ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಬಿಜೆಪಿಗೆ ಊಹೆಗೂ ಮೀರಿದ ಸಫಲತೆ ಸಿಕ್ಕಿರುವುದನ್ನು ವಿಶ್ಲೇಷಿಸುತ್ತಾ ನಮ್ಮ ಚುನಾವಣಾ ಪದ್ಧತಿ ಜನವಿರೋಧಿಯೂ ಶೋಷಕರ



ಪರವೂ ಆಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಏಕೆಂದರೆ ನಮ್ಮಲ್ಲಿ ಗೆಲ್ಲುವ ಅಭ್ಯರ್ಥಿ ಪಡೆಯುವುದು ಶೇಕಡ 30ರಷ್ಟು ಮತಗಳನ್ನು ಮಾತ್ರ; ಉಳಿದ 70% ಮತಗಳು ಅವನ ವಿರೋಧವಾಗಿದ್ದು, ಇತರೆ ಅಭ್ಯರ್ಥಿಗಳಿಗೆ ಹಂಚಿ ಹೋಗುತ್ತವೆ. ಆದ್ದರಿಂದ ಈ ಚುನಾವಣಾ ಪದ್ಧತಿ ಜನವಿರೋಧಿ ಎಂಬುದು ಸ್ಪಷ್ಟವಾಗಿದೆ.

ಮತ್ತೊಂದು ಮುಖ್ಯವಾದ ಕಾರಣ, ಹಣವಂತರು ಮಾತ್ರ ಈ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲಲು ಸಾಧ್ಯ. ನಮ್ಮ ಚುನಾವಣಾ ಆಯೋಗವು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿ 25 ಲಕ್ಷ ರೂ.ವರೆಗೂ ಖರ್ಚು ಮಾಡಲು ಅವಕಾಶ ಮಾಡಿಕೊಟ್ಟಿದೆ. ಇನ್ನು ಲೋಕಸಭೆಗೆ 50 ಲಕ್ಷ ರೂ.ವರೆಗೂ ಖರ್ಚು ಮಾಡಬಹುದು. ಹೀಗಿರುವಾಗ ಜನಸಾಮಾನ್ಯನಿಗೆ ಎಲ್ಲಿದೆ ಅವಕಾಶ? ಹಾಗಿದ್ದರೆ ಇದನ್ನು ಪ್ರಜಾಪ್ರಭುತ್ವ ಅನ್ನಲು ಸಾಧ್ಯವೇ? (ಸಾಧ್ಯವೇ ಇಲ್ಲ)

ಈ ಪಂಚ ರಾಜ್ಯಗಳ ಚುನಾವಣೆಯಲ್ಲಿ ಮಣಿಪುರದ ಐರೋಮ್ ಶರ್ಮಿಳ ಅವರಿಗೆ ಜನರು ಮತ ಹಾಕದೆ ಸೋಲುವಂತೆ ಮಾಡಿರುವುದು ನಿಜವಾದ ಪ್ರಜಾಪ್ರಭುತ್ವ ವಾದಿಗಳಿಗೆಲ್ಲಾ ದಿಗ್ಭ್ರಮೆಯನ್ನುಂಟುಮಾಡಿದೆ. ತೀವ್ರ ಜನಪರ ಕಾಳಜಿಯುಳ್ಳ ಆಕೆ ಜನಹಿತಕ್ಕಾಗಿ 16 ವರ್ಷ ಕಾಲ ಉಪವಾಸ ಮಾಡಿದ್ದರ ಬೆಲೆ ಜನರಿಗೆ ಅರ್ಥವೇ ಆಗಿಲ್ಲ!!! ನಮ್ಮ ಸರ್ಕಾರಗಳು ಏನಿಲ್ಲವೆಂದರೂ, ಜನರಿಗೆ ವಿದ್ಯಾಭ್ಯಾಸವನ್ನಾದರೂ ಕೊಟ್ಟಿದ್ದರೆ ಐರೋಮ್ ಶರ್ಮಿಳಾಗೆ ಈ ಗತಿ ಖಂಡಿತ ಬರುತ್ತಿರಲಿಲ್ಲ.

- ವೀರಬ್ಬಿ ಮಲ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ವಿಜಯ್ ಜತೆ ಶುಭಾ

ಶುಭಾ ಪೂಂಜಾ ಎರಡು ರೌಂಡ್ ಸಣ್ಣಗಾಗುತ್ತಿದ್ದಂತೆಯೇ ಅವಕಾಶಗಳ ಸುರಿಮಳೆ ಆಗುತ್ತಿದೆ. ಈಗಾಗಲೇ ಅವರು ನಾಗೇಂದ್ರ ಪ್ರಸಾದ್ ನಿರ್ದೇಶನದ ಚಿತ್ರದಲ್ಲಿ ನಟಿಸಿ ಆಗಿದೆ. 'ನವೆಂಬರ್ 19' ಮತ್ತು 'ತಾತನ ತಿಥಿ ಮೊಮ್ಮಗನ ಪ್ರಸ್ಥ' ಸಿನಿಮಾಗಳ ಶೂಟಿಂಗ್ ಕೂಡ ಮುಗಿಸಿದ್ದಾರೆ. ಈ ಮಧ್ಯೆ ಮತ್ತೊಂದು ಹೊಸ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ಈ ಸಿನಿಮಾದಲ್ಲಿ ಅವರು ತುಸು ಗ್ಲಾಮರಸ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಹೊಸ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ರಾಜಶೇಖರ್ ನಿರ್ದೇಶಕರು. ವಿಜಯ್ ರಾಘವೇಂದ್ರ ನಾಯಕರಾಗಿ ನಟಿಸುತ್ತಿದ್ದಾರೆ. ವಿಜಯ್ ಜತೆ ಶುಭಾಗೆ ಇದು ಎರಡನೇ ಸಿನಿಮಾ. ಈ ಹಿಂದೆ 'ಗೋಲ್‌ಮಾಲ್' ಸಿನಿಮಾದಲ್ಲಿ ಈ ಜೋಡಿ ಕಾಣಿಸಿಕೊಂಡಿತ್ತು. "ಏಳು ವರ್ಷದ ಬಳಿಕ ವಿಜಯ ರಾಘವೇಂದ್ರ ಮತ್ತು ನಾನು ಮತ್ತೆ ತೆರೆಹಂಚಿಕೊಳ್ಳುತ್ತಿದ್ದೇವೆ. ಅಲ್ಲದೇ, ಅವರು ನನ್ನ ಅತ್ಯುತ್ತಮ ಗೆಳೆಯ ಕೂಡ. ಹಾಗಾಗಿ ನಮ್ಮ ಜೋಡಿ ತೆರೆಯ ಮೇಲೆ ಸಖತ್ತಾಗಿ ಕಾಣಿಸಿಕೊಳ್ಳಲಿದೆ" ಅಂತಾರೆ ಶುಭಾ. ಈ ಸಿನಿಮಾದ ನಂತರ ಶುಭಾ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರಂತೆ. ಅದು ಹಾರರ್ ಸಿನಿಮಾ. ಈಗಲೇ ಆ ಚಿತ್ರದ ಬಗ್ಗೆ ಏನೂ ಹೇಳಲಾರೆ ಅಂತಾರೆ. ಸದ್ಯದಲ್ಲೇ ಸಿನಿಮಾ ತಂಡವೇ ಮಾಹಿತಿಯನ್ನು ಕೊಡಲಿದೆಯಂತೆ.

ಯಾರು ವಿಲನ್?

ಏಪ್ರಿಲ್ 1ರಂದು 'ದಿ ವಿಲನ್' ಸಿನಿಮಾದ ಫಸ್ಟ್‌ಲುಕ್ ರಿಲೀಸ್ ಮಾಡಿ ಅಚ್ಚರಿ ಮೂಡಿಸಿದ್ದಾರೆ ಜೋಗಿ ಪ್ರೇಮ್. ಈ ಸಿನಿಮಾ ಆಗುವುದೇ ಅನುಮಾನ ಎನ್ನುವ ಹೊತ್ತಿನಲ್ಲಿ ರಿಲೀಸ್ ಆಗಿರುವ ಫಸ್ಟ್‌ಲುಕ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಲ್ಲದೇ ಏಪ್ರಿಲ್ 2ರಿಂದಲೇ ಶೂಟಿಂಗ್ ಕೂಡ ಶುರುವಾಗಿದ್ದರಿಂದ ಸಿನಿಮಾ ಬೇಗ ಮುಗಿಯಲಿದೆ ಅಂತಿದ್ದಾರೆ ಪ್ರೇಮ್. ಆದರೆ, ಸಿನಿಮಾ ತಂಡದ ಸದಸ್ಯರಿಂದ ಬಂದಿರುವ ಮಾಹಿತಿಯೇ ಬೇರೆ ಇದೆ. ಸದ್ಯಕ್ಕೆ ಶಿವರಾಜ್‌ಕುಮಾರ್ ಡೇಟ್ ಸಿಗದಿರುವ ಕಾರಣಕ್ಕೆ ಸುದೀಪ್ ಮಾತ್ರ ಶೂಟಿಂಗ್‌ಗೆ ಬಂದಿದ್ದಾರೆ. ಇವರ ಕಾಂಬಿನೇಷನ್‌ನ ಡೇಟ್ ಸದ್ಯಕ್ಕೆ ಸಿಗುವುದು ಅನುಮಾನ ಎನ್ನುವ ಮಾತೂ ಇದೆ. ಅಲ್ಲದೇ, ಶಿವರಾಜ್‌ಕುಮಾರ್ ನಟನೆಯ 'ಟಗರು', 'ಬಂಗಾರ ಸನ್ ಆಫ್ ಬಂಗಾರದ ಮನುಷ್ಯ', 'ಲೀಡರ್' ಸಿನಿಮಾ ರಿಲೀಸ್ ಆದ ನಂತರ 'ದಿ ವಿಲನ್' ಚಿತ್ರ ಬಿಡುಗಡೆ ಆಗಬೇಕು. ಹಾಗಾಗಿ 'ದಿ ವಿಲನ್' ಈ ವರ್ಷ ತೆರೆ ಕಾಣುವುದಿಲ್ಲ, ಆದರೂ, ಸಿನಿಮಾ ರಿಲೀಸ್ ಆಗುವತನಕ ಸುದ್ದಿಯಲ್ಲಿ ಇರದೇ ಬಿಡುವುದಿಲ್ಲ ಪ್ರೇಮ್.

ಸದ್ಯ ಫಸ್ಟ್‌ಲುಕ್‌ನಲ್ಲಿರುವ ಹೇರ್‌ಸ್ಟೈಲ್ ಸುದ್ದಿ ಮಾಡಿದೆ. ಈ ಸಿನಿಮಾದಲ್ಲಿ ವಿಲನ್ ಯಾರು ಅನ್ನುವ ಅಂಶ ಕೂಡ ಚರ್ಚೆಗೆ ಬರಲಿದೆ. ಹೀರೋಯಿನ್, ಅವರ ಕಾಸ್ಟ್ಯೂಮ್, ಸುದೀಪ್ ಮತ್ತು ಶಿವರಾಜ್‌ಕುಮಾರ್ ಶೂಟಿಂಗ್ ಪ್ಲಾನ್, ವಿದೇಶಿ ಚಿತ್ರೀಕರಣ ಹೀಗೆ ಸುದ್ದಿಯ ಮೇಲೆ ಸುದ್ದಿ ಮಾಡುತ್ತಲೇ ಇರುತ್ತಾರೆ ಪ್ರೇಮ್. ಶಿವರಾಜ್‌ಕುಮಾರ್ ಎರಡು ಗೆಟಪ್ ಮತ್ತು ಸುದೀಪ್‌ಗೆ ಮೂರು ಶೇಡ್ ಇರಲಿದೆ ಎಂದು ಹೇಳುವ ಮೂಲಕ ಈಗಾಗಲೇ ಪ್ರೇಕ್ಷಕರ ತಲೆಯಲ್ಲಿ ಹುಳು ಬಿಟ್ಟಿರುವ ನಿರ್ದೇಶಕರು, ಬುಟ್ಟಿಯಿಂದ ಇನ್ನೂ ಯಾವೆಲ್ಲ ಹಾವುಗಳನ್ನು ಆಚೆ ತರುತ್ತಾರೋ ಕಾದು ನೋಡಬೇಕು.



ಕಾಂಟ್ರ್ಯಾಕ್ಟ್‌ನಲ್ಲಿ ರಾಧಿಕಾ

ರಾಧಿಕಾ ಕುಮಾರಸ್ವಾಮಿ ಸಿನಿಮಾ ರಂಗದಿಂದಲೇ ದೂರವಾದರು ಎಂದು ಹೇಳಲಾಗಿತ್ತು, ಅವರು ಕೂಡ ಯಾವುದೇ ಸಿನಿಮಾ ಒಪ್ಪಿಕೊಳ್ಳದೇ, ನಿರ್ಮಾಣಕ್ಕೂ ಮುಂದಾಗದೇ ತಮ್ಮ ಪಾಡಿಗೆ ತಾವಿದ್ದ ಕಾರಣಕ್ಕಾಗಿ, ಅದು ನಿಜ ಎಂದು ಅನೇಕರು ನಂಬಿದ್ದರು. ಈಗ ಎಲ್ಲರ ನಂಬಿಕೆಯನ್ನು ಉಲ್ಟಾ ಮಾಡಿದ್ದಾರೆ ರಾಧಿಕಾ. ಸದ್ದಿಲ್ಲದೇ 'ಕಾಂಟ್ರ್ಯಾಕ್ಟ್' ಸಿನಿಮಾದಲ್ಲಿ ನಟಿಸುತ್ತಿದ್ದು, ಕೊಲ್ಲಾಪುರದಲ್ಲಿ ನಡೆಯುತ್ತಿರುವ ಶೂಟಿಂಗ್‌ನಲ್ಲೂ ಅವರೀಗ ಪಾಲ್ಗೊಂಡಿದ್ದಾರೆ.

"ನಾನು ಸಿನಿಮಾರಂಗದಿಂದ ದೂರವಾಗಿದ್ದೇನೆ ಅನ್ನುವುದು ಸುಳ್ಳು. ಸ್ವಲ್ಪ ಬಿಡುವು ಬೇಕಿತ್ತು, ಹಾಗಾಗಿ ಯಾವುದೇ ಸಿನಿಮಾ ಒಪ್ಪಿಕೊಂಡಿರಲಿಲ್ಲ. ಒಳ್ಳೆಯ ಕತೆ ಸಿಕ್ಕರೆ ಖಂಡಿತಾ ನಿರ್ಮಾಣವನ್ನೂ ಮಾಡುತ್ತೇನೆ" ಅಂತಾರೆ ರಾಧಿಕಾ. ಹಾಗಂತ 'ಕಾಂಟ್ರಾಕ್ಟ್' ಹೊಸ ಸಿನಿಮಾವೇನೂ ಅಲ್ಲ. ಚಾಲನೆಯಾಗಿ ಚಿತ್ರೀಕರಣದ ಹಂತದಲ್ಲಿ ನಿಂತುಹೋಗಿತ್ತು. ಈಗ ಮತ್ತೆ ಅದಕ್ಕೆ ಮರುಜೀವ ತಂದಿದ್ದಾರೆ ನಿರ್ದೇಶಕ ಸಮೀರ್. ಚಿತ್ರಕ್ಕೆ ಅರ್ಜುನ್ ಸರ್ಜಾ ನಾಯಕ. ರಾಧಿಕಾ ಹಿರೋಯಿನ್ ಆಗಿ ಎಂಟ್ರಿ ಪಡೆದಿದ್ದಾರೆ. ಶುರುವಿನಲ್ಲಿ ಈ ಸಿನಿಮಾಗೆ ಮನಿಷಾ ಲಾಂಬಾ ನಾಯಕಿಯಾಗಿ ಆಯ್ಕೆಯಾಗಿದ್ದರು. ಈಗ ಮನಿಷಾ ಬದಲಾಗಿ ರಾಧಿಕಾ ಬಂದಿದ್ದಾರೆ.

ಮರೆಯಾಗಿದೆ ಮುನಿಸು

ಉಪೇಂದ್ರನಾಗಿ ಸಿನಿಮಾ ಮಾಡುತ್ತಿದ್ದೇನೆ ಎಂದಿದ್ದರು ನಿರ್ದೇ… ಗುರುದತ್ತ ಬಾಲಿವುಡ್‌ನ ತ್ರಿ ಇಡಿಯಟ್ಸ್ ಸಿನಿಮಾವನ್ನು ಕನ್ನಡಕ್ಕೆ ರೀಮೇ… ಮಾಡುವುದಾಗಿಯೂ ನಿರ್ದೇಶಕರು ಹೇಳಿದ್ದರು. ಎಲ್ಲ ಮಾಧ್ಯಮಗಳು… ವಿಷಯವನ್ನು ಪ್ರಸಾರ ಮಾಡುತ್ತಿದ್ದಂತೆಯೇ ಉಪೇಂದ್ರ ಉಲ್ಟಾ ಹೊಡೆಯ… ಶುರು ಮಾಡಿದರು. ಅಸಲಿಯಾಗಿ ಗುರುದತ್ತ ಜೊತೆ ಯಾವುದೇ ಸಿನಿ… ಮಾಡುತ್ತಿಲ್ಲ ಅನ್ನುವ ಅರ್ಥದಲ್ಲಿ ಟ್ವಿಟ್ ಮಾಡಿದ್ದರು ಉಪ್ಪಿ. ಅಲ… ಗುರುದತ್ತ ಮೇಲೆ ಮುನಿಸಿಕೊಂಡಿದ್ದರು. ಈಗ ಆ ಮುನಿಸು ಮರೆಯಾ… ಹಾಗಾಗಿ ಈ ಜೋಡಿಯ 'ನಾಗಾರ್ಜುನ' ಸಿನಿಮಾ ಸೆಟ್ಟೇರಿದೆ. ಗುರು… ನಿರ್ಮಾಪಕರು ಮತ್ತು ನಿರ್ದೇಶಕರು. 'ಸೈಕೋ' ಚಿತ್ರಕ್ಕೆ ಹಣ ಹಾಕಿ… ಒಂದೂವರೆ ವರ್ಷದ ಹಿಂದೆ ತೆರೆಕಂಡ 'ಕೈದಿ' ಚಿತ್ರದ ನಿರ್ದೇಶಕ… 'ನಾಗಾರ್ಜುನ' ಇವರ ನಿರ್ದೇಶನದ ಎರಡನೇ ಸಿನಿಮಾ. ಉಪ್ಪಿಗಾಗಿ… ವಿಭಿನ್ನ ಕತೆ ಬರೆದುಕೊಂಡು ಈ ಸಿನಿಮಾ ಕೈಗೆತ್ತಿಕೊಂಡಿದ್ದಾರಂತೆ.

ಇದು ಪಕ್ಕಾ ಕೌಟುಂಬಿಕ ಹಿನ್ನೆಲೆಯ ಕತೆಯಂತೆ. ಹಾಗಾಗಿ ಉಪೇ… ಇಲ್ಲಿ ಫ್ಯಾಮಿಲಿಮೆನ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಮೇಘನಾ ರಾಜ್ … ಮೊದಲ ಬಾರಿಗೆ ಇವರ ಜತೆ ತೆರೆ ಹಂಚಿಕೊಳ್ಳುತ್ತಿದ್ದಾರೆ. ನಗರದಲ್ಲಿ ನಡೆಯ… ಕಥೆ ಸಿನಿಮಾದಲ್ಲಿದ್ದು, ಮಧ್ಯಮ ವರ್ಗದ ಜನರ ಜವಾಬ್ದಾರಿಗಳ ಸುತ್ತ … ಸಿನಿಮಾ ಸುತ್ತಲಿದೆ. ಈ ಸ್ಟೋರಿಗೆ ಕಮರ್ಷಿಯಲ್ ಅಂಶಗಳನ್ನು ಬೆ… ಚಿತ್ರಕತೆ ಬರೆಯಲಾಗಿದೆ. ಈ ಹಿಂದೆ ಉಪೇಂದ್ರ ನಟನೆಯ ಕುಟು… ಸಿನಿಮಾವನ್ನೂ ಇದು ನೆನಪಿಸಬಹುದಂತೆ.

ಭೂಗತ ಚಕ್ರವರ್ತಿ

ದರ್ಶನ್ ನಟನೆಯ 'ಚಕ್ರವರ್ತಿ' ಸಿನಿಮಾ ರಿಲೀಸ್‌ಗೆ ರೆಡಿಯಾಗಿ… ಮುಂದಿನ ಶುಕ್ರವಾರ ಚಿತ್ರಮಂದಿರಗಳಿಗೆ 'ಚಕ್ರವರ್ತಿ' ಲಗ್ಗೆ ಇಡುತ್ತಿದ್ದು… ಮೂಲಕ ಮತ್ತೊಮ್ಮೆ ಸ್ಟಾರ್‌ವಾರ್ ಶುರುವಾಗುತ್ತಿದೆ. ಈಗಾಗಲೇ … ಸುದೀಪ್ ಅವರ 'ಹೆಬ್ಬುಲಿ' ಸಿನಿಮಾ ರಿಲೀಸ್ ಆಗಿ ಹಲವಾರು ಥಿಯೇಟರ್… ಪ್ರದರ್ಶನ ಕಾಣುತ್ತಿದೆ. ಅಲ್ಲದೇ, ಮೊನ್ನೆಯಷ್ಟೇ ಬಿಡುಗಡೆಯಾದ ಪುನೀ… ಅವರ 'ರಾಜಕುಮಾರ' ಚಿತ್ರ ಕೂಡ ಈ ವಾರಕ್ಕೆ ಥಿಯೇಟರ್ ಸಂಖ್ಯೆಯ… ಮತ್ತಷ್ಟು ಹೆಚ್ಚಿಸಿಕೊಂಡಿದೆ. ಹೀಗಾಗಿ 'ಚಕ್ರವರ್ತಿ'ಗೆ ಥಿಯೇಟರ್ ಸಿಗು… ಎಂಬ ಚರ್ಚೆ ಕೂಡ ಶುರುವಾಗಿದೆ. 'ಚಕ್ರವರ್ತಿ' ಹೇಳಿಕೇಳಿ ಭೂ… ಜಗತ್ತಿನ ಸಿನಿಮಾ. ಅಲ್ಲದೇ ಈ ಸಿನಿಮಾದ ನಿರ್ಮಾಪಕರು ಭಾರೀ ಪ್ರಭಾ… ಕೂಡ. ಹಾಗಾಗಿ 'ರಾಜಕುಮಾರ' ಮತ್ತು 'ಹೆಬ್ಬುಲಿ' ಸಿನಿಮಾ… ಥಿಯೇಟರ್‌ಗಳನ್ನು ಕಿತ್ತುಕೊಳ್ಳುವ ಕೆಲಸ ಈಗಿನಿಂದಲೇ ಶುರುವಾಗಿದೆಯ… ಈಗಾಗಲೇ ಹಲವು ಥಿಯೇಟರ್ ಮಾಲೀಕರಿಗೆ 'ಚಕ್ರವರ್ತಿ'ಯ ಪ್ರದರ್ಶ… ಕುರಿತು ಮೌಖಿಕ ಒಪ್ಪಂದ ಕೂಡ ಮಾಡಿಕೊಂಡಿದ್ದಾರಂತೆ. ಹಾಗೇನಾದ… ಆದರೆ, ಥಿಯೇಟರ್ ಕುರಿತಾಗಿ ಬಿಕ್ಕಟ್ಟು ಶುರುವಾಗುತ್ತದೆ. ಮತ್ತೆ ಸ್ಟಾರ್… ಮಧ್ಯೆ ತಿಕ್ಕಾಟವೂ ನಡೆಯಲಿದೆ.

ಸದ್ಯ ದರ್ಶನ್ ಶಬರಿಮಲೈ ಅಯ್ಯಪ್ಪನ ದರ್ಶನಕ್ಕೆ ಹೋಗಿದ್ದಾರೆ. ಸುದೀ… 'ದಿ ವಿಲನ್' ಚಿತ್ರದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಪುನೀತ್ ರಾಜ್‌ಕುಮಾ… ಹೊಸ ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿದ್ದಾರೆ. ಮುಂದಿನ ವಾರ ಎಲ್ಲರ… ಅಖಾಡಕ್ಕೆ ಇಳಿಯಲಿದ್ದಾರೆ ಅನ್ನುತ್ತಿದೆ ಈ ಬಿಸಿ ವಾತಾವರಣ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com